17. ಚಿಕ್ಕನಾಯಕನಹಳ್ಳಿಯಲ್ಲಿ ವಯಸ್ಕರ ಶಿಕ್ಷಣ ಕೇಂದ್ರವನ್ನು ಮುಂದುವರಿಸುವುದು.

ಶ್ರೀ ಬಿ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕ್‌ನಲ್ಲಿ ರಾಜ್ಯ ಯೋಜನೆ ಮುಖಾಂತರ ಶಿಕ್ಷಣ ಇಲಾಖೆಯು ರಾತ್ರಿ ಶಾಲೆಗಳನ್ನು ತಾ. ೩೧-೩-೧೯೮೭ರ ನಂತರ ಸಂಪೂರ್ಣವಾಗಿ ತಾಲ್ಲೂಕಿನಾದ್ಯಂತ ಮುಚ್ಚುವುದಾಗಿ ಸರ್ಕಾರಿ ಆಜ್ಞೆಯು ಹೊರಬಿದ್ದಿರುವುದರಿಂದ ಒಟ್ಟು ನೂರು ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕ ಕಾರ್ಯಕರ್ತರುಗಳಿಗೂ ಮತ್ತು ಇದರ ಪ್ರಯೋಜನ ಪಡೆಯುತ್ತಿದ್ದ ನೂರಾರು ಜನಗಳಿಗೂ ಅನಾನುಕೂಲವಾಗುವುದರಿಂದ ಜಿಲ್ಲಾದ್ಯಂತ ಬೇರೆ ತಾಲ್ಲೂಕ್‌ಗಳಲ್ಲಿ ನಡೆಯುತ್ತಿರುವ ವಯಸ್ಕರ ಶಿಕ್ಷಣ ಶಾಲಾ ಕೇಂದ್ರಗಳಂತೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲೂ ಮುಂದುವರಿಸಿಕೊಂಡು ಹೋಗುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಈಗ ಅಲ್ಲಿ ವಯಸ್ಕರ ಶಿಕ್ಷಣ ಸಮಿತಿಯವರು ಮತ್ತು ವಯಸ್ಕರ ಶಿಕ್ಷಣ ಇಲಾಖೆಯವರು ಕೆಲವು ರಾತ್ರಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಈಗ ಇವುಗಳನ್ನು ಮುಚ್ಚಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಏತಕ್ಕೋಸ್ಕರ ಇವುಗಳನ್ನು ಮುಚ್ಚುತ್ತಿದ್ದಾರೆಂಬುದನ್ನು ವಿಚಾರ ಮಾಡುತ್ತೇನೆ. ಇವುಗಳ ಅವಶ್ಯಕತೆ ಇದ್ದರೆ ಮತ್ತೆ ಮುಂದುವರೆಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು.—ಶ್ರೀ ಲಕ್ಕಪ್ಪನವರು ಸಭೆಯಲ್ಲಿ ಹಾಜರಿಲ್ಲದಿರುವ ಕಾರಣ ಈಗ ಶ್ರೀ ಕೊಟ್ರಪ್ಪನವರು ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆಯನ್ನು ಪ್ರಾರಂಭ ಮಾಡಬಹುದು.

ವಿತ್ತೀಯ ಕಾರ್ಯಕಲಾಪಗಳು

೧೯೮೭–೮೮ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

ಶ್ರೀ ಬಿ.ಜಿ. ಕೊಟ್ರಪ್ಪ (ಹರಿಹರ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನಾನು ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿರುವ ೧೯೮೭–೮೮ನೇ ಸಾಲಿನ ಆಯವ್ಯಯ ಪತ್ರವನ್ನು ಬೆಂಬಲಿಸುತ್ತಾ ನಾಲ್ಕು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಪ್ರಥಮವಾಗಿ ಈ ಬಡ್ಜೆಟ್ ಅಂದರೆ ಏನು ಎಂಬ ಕಲ್ಪನೆ ನಮಗೆ ಬರಬೇಕಾಗಿದೆ. ಇದು ಕೆಲವು ಅನುಭವಿಗಳು ಹೇಳಿದ ರೀತಿಯಲ್ಲಿ

> "The Budget through committed resources for the Annual Plan becomes the operational instrument for plan implementation."

ನಮ್ಮ ರಾಜ್ಯದ ಹಣಕಾಸಿನ ಸಂಪನ್ಮೂಲಗಳಿಂದ ವಾರ್ಷಿಕ ಯೋಜನೆಗಳನ್ನು ತಯಾರು ಮಾಡಿ ಈ ಸದನದ ಒಪ್ಪಿಗೆ ಪಡೆದ ನಂತರ ಈ ಬಡ್ಜೆಟ್ ಅನ್ನುವುದನ್ನು ಒಂದು ಇನ್‌ಸ್ಟ್ರುಮೆಂಟ್ ಆಗಿ ಉಪಯೋಗ ಮಾಡಿ, ಕಾರ್ಯಗತ ಮಾಡಿ, ನಮ್ಮ ಯೋಜನೆಗಳನ್ನು ಪರಿಪೂರ್ಣ ಮಾಡುವ ಕಾರ್ಯವನ್ನೇ ಈ ಬಡ್ಜೆಟ್ ಅನ್ನುವ ಅರ್ಥದಲ್ಲಿ ಹೇಳಿದ್ದಾರೆ. ಈ ಒಂದು ಅರ್ಥದಲ್ಲಿ ನಮ್ಮ ಕರ್ನಾಟಕ ರಾಜ್ಯದ ಬಡ್ಜೆಟ್‌ನ್ನು ವಿಚಾರ ಮಾಡಿದರೆ, ನಾವು ಎರಡು ರೀತಿಯಲ್ಲಿ ಬಡ್ಜೆಟ್‌ನ್ನು ತಯಾರು ಮಾಡಬೇಕಾಗಿದೆ. ಒಂದು ನಮಗೆ ಸಿಗತಕ್ಕಂಥ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು. ಎರಡನೆಯದು ಕೇಂದ್ರ ಸರಕಾರದಿಂದ ಬರತಕ್ಕಂಥ ಅನುದಾನಗಳ ಬಗ್ಗೆ ಚಿಂತನೆ ಮಾಡುವುದು. ಈ ಎರಡೂ ಮೂಲಗಳ ಆಧಾರದ ಮೇಲೆ ಜನರ ಹಿತವನ್ನು ಸಾಧನೆ ಮಾಡುವಂತಹ ಒಂದು ಕಾರ್ಯಕ್ರಮಕ್ಕೆ ಬಡ್ಜೆಡ್ ಎನ್ನುತ್ತಾರೆ. ಕೇಂದ್ರ ಸರಕಾರ ಮನುಷ್ಯನ ತಲೆ ಇದ್ದಂತೆ. ರಾಜ್ಯ ಸರ್ಕಾರಗಳು ಮನುಷ್ಯನ ತಲೆ ಬಿಟ್ಟು ಇತರ ಅಂಗಾಂಗಗಳು ಇದ್ದಂತೆ. ನಮ್ಮ ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ಕೇಂದ್ರ ಸರ್ಕಾರ ಈ ದೇಶದ ಹೆಚ್ಚಿನ ಉತ್ಪನ್ನಗಳನ್ನು ಹಾಗೂ ಆದಾಯವನ್ನು ತನ್ನ ಕೈಯಲ್ಲಿ ಹಿಡಿದಿಟ್ಟುಕೊಂಡಿದೆ. ಕೇಂದ್ರ ಸರ್ಕಾರ ತನಗೆ ಬರುವಂತಹ ಆದಾಯದಲ್ಲಿ ರಾಜ್ಯ ಸರ್ಕಾರಗಳಿಗೆ ಸರಿಯಾದ ಪಾಲನ್ನು ಕೊಡದಿದ್ದರೆ ರಾಜ್ಯಗಳ ಅಭಿವೃದ್ಧಿ ಆಗುವುದಿಲ್ಲ. ರಾಜ್ಯಗಳ ಅಭಿವೃದ್ಧಿ ಕುಂಠಿತವಾದರೆ,

ಅದು ನಮ್ಮ ದೇಶದ ಆರ್ಥಿಕತೆಯ ಮೇಲೆ ಹೆಚ್ಚಿನ ನಷ್ಟವನ್ನು ಹಾಗೂ ಅನಾನುಕೂಲವನ್ನು ಉಂಟು ಮಾಡುವ ಪರಿಸ್ಥಿತಿ ಬರುತ್ತದೆ

೧-೩೦ ಪಿ.ಎಂ.

ಈ ದಿಸೆಯಲ್ಲಿ ನಮ್ಮ ವಿರೋಧ ಪಕ್ಷದ ಮುಖಂಡರೆಲ್ಲಾ ಮಾತನಾಡಿದರು. ಒಂದು ಆನೆ ಮುಂದೆ ನಿಂತಾಗ ಸಣ್ಣ ಬಾಲಕ ಹೇಳುವ ರೀತಿಯಲ್ಲಿ ಸೊಂಡಿಲು ಮುಟ್ಟಿದವರು ಸೊಂಡಿಲು ಇದೆಯೆಂದು ಹೊಟ್ಟೆ ಮುಟ್ಟಿದವರು ಹೊಟ್ಟೆ ಇದೆಯೆಂದು ಬಾಲ ಮುಟ್ಟಿದವರು ಬಾಲ ಇದೆಯೆಂದು ಯಾವರೀತಿ ಮಕ್ಕಳು ಆಟ ಆಡುತ್ತಾರೋ, ಅದೇರೀತಿ ವಿರೋಧ ಪಕ್ಷದವರು ಒಂದು ಆನೆಯನ್ನು ನೋಡಿ ತಮ್ಮ ತಮ್ಮ ಮೂಗಿಗೆ ನೇರವಾಗಿ ಕಂಡಂಥ ಅವಯವಗಳನ್ನು ಗುರುತಿಸಿ ಹೇಳತಕ್ಕಂಥ ಪರಿಪಾಠವನ್ನು ಮಾಡಿದರು. ಈ ಜವಾಬ್ದಾರಿ ಕೇವಲ ಸರ್ಕಾರಕ್ಕಿದೆ ಎಂದು ತಿಳಿದು ಮಾತನಾಡತಕ್ಕ ಹೊಣೆಗಾರಿಕೆಯನ್ನು ವಿರೋಧ ಪಕ್ಷದವರು ಮಾಡಿದ್ದಾರೆ, ಇದು ಬಹಳ ತಪ್ಪು. ನಮ್ಮ ಕೈಯಲ್ಲಿ ಅಧಿಕಾರ ಬಂದರೆ ಯಾವರೀತಿ ನಿರ್ವಹಿಸಿ ದೇಶದ ಜನತೆಯ ಉದ್ಧಾರ ಮಾಡಬಲ್ಲೆ ಎಂಬ ಒಂದು ತತ್ವದ ಆಧಾರದ ಮೇಲೆ ಸಲಹೆ ಕೊಡಬೇಕೇ ವಿನಃ ಕೇವಲ ಕ್ರಿಟಿಸೈಸ್ ಮಾಡುವ ಮನೋಭಾವದಿಂದ ಕ್ರಿಟಿಸೈಸ್ ಮಾಡತಕ್ಕಂಥ ತತ್ವವನ್ನು ಬಿಡಬೇಕು. ಇವತ್ತು ಸಮಗ್ರವಾಗಿ ಕರ್ನಾಟಕ ಅಭಿವೃದ್ಧಿಯಾಗಬೇಕಾದರೆ ಕೇಂದ್ರದಿಂದ ಪಡೆಯತಕ್ಕಂಥ ಕೆಲವಾರು ಅನುದಾನಗಳನ್ನು ಪಡೆಯದೆ ಅಭಿವೃದ್ಧಿ ಕಾರ್ಯಗಳನ್ನು ಹೊಂದದೆ ಇರತಕ್ಕಂಥ ಈ ಕರ್ನಾಟಕ ರಾಜ್ಯದ ಕೆಲವಾರು ಸಮಸ್ಯೆಗಳ ಬಗ್ಗೆ ಯಾದರೂ ಸಹ ವಿರೋಧ ಪಕ್ಷದವರು ಒತ್ತಾಯತರಬೇಕಾಗಿತ್ತು. ಅನೇಕ ಜನ ಪಾರ್ಲಿಮೆಂಟ್ ಸದಸ್ಯರಿದ್ದಾರೆ ಮತ್ತು ಅನುಭವಿ ರಾಜಕಾರಣಿಗಳಿದ್ದಾರೆ. ಕೇಂದ್ರದ ರೈಲ್ವೆ ವಿಚಾರವಾಗಲಿ ಮತ್ತು ವಿದ್ಯುತ್‌ಗೆ ಸಂಬಂಧಪಟ್ಟಂತೆ ಆಗಲಿ ಅಥವಾ ಇನ್ಯಾವುದೇ ಕೇಂದ್ರದ ಅಧಿಕಾರದಲ್ಲಿರತಕ್ಕಂಥ ಮೂಲಗಳನ್ನು ಗುರುತಿಸದೆ ಅಲ್ಲಿ ಒತ್ತಾಯ ತರದೆ ಇಲ್ಲಿ ಬಂದು, ಅಲ್ಪ ಆಧಾಯದಲ್ಲಿ ಮಾಡಿರುವ ಬಡ್ಜೆಟನ್ನು ಕ್ರಿಟಿಸೈಸ್ ಮಾಡುತ್ತಾ ಕುಳಿತರೆ ಬಹಳ ಮಟ್ಟಿಗೆ ನಮ್ಮ ಕರ್ನಾಟಕಕ್ಕೆ ಒಳ್ಳೆಯದು ಮಾಡತಕ್ಕಂಥ ಮನೋಭಾವ ಇದೆ ಎಂಬ ಕಲ್ಪನೆ ನಮ್ಮಲ್ಲಿ ಬರುವುದಿಲ್ಲ. ಈ ಒಂದು ದೃಷ್ಟಿಯಿಂದ ಯೋಚನೆ ಮಾಡದರೆ, ಪ್ರಾರಂಭದಿಂದಲೂ ಸಹ ಕರ್ನಾಟಕ ರಾಜ್ಯ ವಂಚಿತಗೊಂಡಿದೆ. ಇರುವ ಸಂಪನ್ಮೂಲಗಳು ಜಾಸ್ತಿ. ಆದರೆ ಆ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಮಾಡತಕ್ಕ ಕೆಲಸ ಶಕ್ತಿ, ಮಾರ್ಗ ಕೇಂದ್ರ ಸರ್ಕಾರದ್ದು. ಒಂದು ದೊಡ್ಡ ಫ್ಯಾಕ್ಟರಿ ಮಾಡಬೇಕಾದರೆ ಕೇಂದ್ರದ ಲೈಸನ್ಸ್ ಬೇಕಾಗುತ್ತದೆ. ಸಿಮೆಂಟ್ ಫ್ಯಾಕ್ಟರಿ ಮಾಡಬೇಕಾದರೆ ಕೇಂದ್ರದ ಲೈಸನ್ಸ್ ಬೇಕಾಗುತ್ತದೆ. ಯಾವುದೇ ದೊಡ್ಡ ಯೋಜನೆಯನ್ನು ತಯಾರು ಮಾಡಿ ಕೇಂದ್ರದ ಅನುಮತಿಗೆ ಕಾದು ಕುಳಿತು ಪ್ರಾರಂಭ ಮಾಡುವ ಹೊತ್ತಿಗೆ ನಮ್ಮ ಎಕನಾಮಿಕಲ್ ರಿಸೋರ್ಸಸ್ ಏನಿದೆ ಅದು ಜಾಸ್ತಿ ಖರ್ಚಾಗುತ್ತಾ ಹೋಗಿ, ಅದಕ್ಕೆ ಪರ್ಮಿಷನ್ ಸಿಗುವ ಹೊತ್ತಿಗೆ ಅದನ್ನು ಮಾಡತಕ್ಕಂಥ ಶಕ್ತಿಯನ್ನು ಕಳೆದುಕೊಳ್ಳುವ ಒಂದು ಹಂತದಲ್ಲಿ ನಾವು ಬರುತ್ತೇವೆ. ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಿ, ಫ್ಯಾಕ್ಟರಿಗಳನ್ನು ತೆಗೆದುಕೊಳ್ಳಿ ಯಾವುದೇ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಿ. ಇವತ್ತು ನಮ್ಮ ನೀರಾವರಿ ಯೋಜನೆಗಳು ಅಂದರೆ ಕೃಷ್ಣ ಮೇಲ್ದಂಡೆ ಆಗಲಿ ಅಥವಾ ಅಪ್ಪರ್ ತುಂಗ ಆಗಲಿ, ಅನೇಕ ಯೋಜನೆಗಳು ಮೂಲೆಗುಂಪಾಗಿವೆ. ಇವೆಲ್ಲಾ ಕಡಿಮೆ ಖರ್ಚಿನಿಂದ ಹೆಚ್ಚಿನ ನೀರನ್ನು ಪಡೆದು ಬಡತನ ನಿರ್ಮೂಲ ಮಾಡತಕ್ಕಂಥ ಕಾರ್ಯಕ್ರಮಗಳನ್ನಾಗಿ ಬೆಳೆಸತಕ್ಕಂಥ ಯೋಜನೆಗಳನ್ನು ನಮ್ಮ ರಾಜ್ಯಸರ್ಕಾರ ಮಾಡಿದ್ದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ, ಇತರೇ ರಾಜ್ಯಗಳಲ್ಲಿ ಎಷ್ಟರಮಟ್ಟಿಗೆ ಅಭಿವೃದ್ಧಿಯಾಗುತ್ತದೆ ಅಷ್ಟು ಅಭಿವೃದ್ಧಿಯನ್ನೂ ನಾವು ಕಾಣದೆ ಹೋದದ್ದು ನಮ್ಮ ಕರ್ನಾಟಕ ಜನತೆ ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯಿಂದಾಗಿ ವಂಚಿತವಾಗಿದೆ. ಆದುದರಿಂದ ಈ ನಮ್ಮಲ್ಲಿರತಕ್ಕಂಥ ಬಡತನ ರೇಖೆಯನ್ನು ನಾವು ದಾಟಲಿಕ್ಕೆ ಸಾಧ್ಯವಾಗಿಲ್ಲ. ಈ ಬಡತನ ರೇಖೆ ಎನ್ನುವ ಶಬ್ದವನ್ನು ಬಹಳಮಟ್ಟಿಗೆ ಜನತಾ ಸರ್ಕಾರ ೧೯೭೭ಕ್ಕೆ ರಾಜ್ಯಭಾರಕ್ಕೆ ಬಂದಾಗ ತಯಾರು ಮಾಡಿತು. ಆಮೇಲೆ ಒಂದು ಬಡತನ ರೇಖೆಯನ್ನು ತಯಾರು ಮಾಡುವ ಕಾಲಕ್ಕೆ ಈ ಪಾವರ್ಟಿಲೈನ್‌ಗಿಂತ ಕೆಳಗೆ ಇರತಕ್ಕಂಥ ಜನ ೨೯೦ ಮಿಲಿಯನ್ ಜನಸಂಖ್ಯೆ ಇದೆ ಎಂದು ೧೯೭೭-೭೮ ರ ಗಣತಿ ಪ್ರಕಾರ ಜನತಾ ಸರ್ಕಾರ ಮಾಡಿತು. ಆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕಾದರೆ ೨೪೦೦ ಕ್ಯಾಲರಿ ಬೇಕು. ಹಳ್ಳಿಗಳಲ್ಲಿ ೨೧೦೦ ಕ್ಯಾಲರಿ ಜನಗಳಿಗೆ ಬೇಕು ಎನ್ನುವ ಒಂದು ಆಧಾರದ ಮೇಲೆ ಅದಕ್ಕಿಂತಲೂ ಕಡಿಮೆ ಕ್ಯಾಲರಿಗಳನ್ನು ಪಡೆಯುತಕ್ಕಂಥ ಜನಗಳು ಬಡತನದ ರೇಖೆಗಿಂತ ಕೆಳಮಟ್ಟದಲ್ಲಿದ್ದಾರೆ ಎಂದು ಅಂದಾಜು ಮಾಡಿದ ತೀರ್ಮಾನದ

ಪ್ರಕಾರ ಈ ಒಂದು ಜನಸಂಖ್ಯೆ ನಮಗೆ ಬಂತು. ಈ ಕಾರಣಕ್ಕಾಗಿ ಜನತಾ ಸರ್ಕಾರದವರ ಅಂತ್ಯೋದಯ ಕಾರ್ಯಕ್ರಮವನ್ನು ಹಾಕಿಕೊಂಡರು. ಆ ಕಾರ್ಯಕ್ರಮವನ್ನು ಹಾಕಿ ಕೆಳವಟ್ಟಿಗೆ ಆ ಕಾರ್ಯಕ್ರಮವನ್ನು ಮುಂದುವರಿಸುವಾಗ ಸೂಕ್ಷ್ಮ ದೃಷ್ಟಿಯಿಂದ ಇದನ್ನು ಅಳವಡಿಸಿಕೊಂಡು ಬಡ ಜನರಿಗೆ ಅನುದಾನವನ್ನು ಕೊಟ್ಟು, ಅವರನ್ನು ಬಡತನ ರೇಖೆಗಿಂತ ಮೇಲಕ್ಕೆ ಎತ್ತತಕ್ಕ ಪ್ರಯತ್ನ ಮಾಡತಕ್ಕಂಥ ಜನತಾ ಸರ್ಕಾರ ಕೇವಲ ಎರಡೂವರೆ ವರ್ಷ ಮಾತ್ರ ಕೇಂದ್ರದಲ್ಲಿ ಇತ್ತು.

(ಚಂದ್ರಕಾಂತ ಜಿ. ಬೆಲ್ಲದ್ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಂತರ ಕಾಂಗ್ರೆಸ್ ಸರ್ಕಾರ ಬಂದಮೇಲೆ, ಜನತಾ ಸರ್ಕಾರ ಹಾಕಿಕೊಂಡಿದ್ದ ಬಡತನ ರೇಖೆಯ ಆಧಾರವನ್ನು ತೆಗೆದುಹಾಕಿ ತಿಂಗಳಿಗೆ ೬೮ ರಿಂದ ೮೮ ರೂಪಾಯಿ ಮಾಡಿದರು. ೬೦ ರೂಪಾಯಿ ಹಳ್ಳಿಗಳಲ್ಲಿರುವವರಿಗೆ, ೮೮ ರೂಪಾಯಿ ಪಟ್ಟಣಗಳಲ್ಲಿರುವವರಿಗೆ ಇರತಕ್ಕ ಆದಾಯವೆಂದು ಗೊತ್ತು ಮಾಡಿ ಬಡತನದ ಕೆಳಗೆ ಇರತಕ್ಕವನ್ನುಗೊತ್ತು ಮಾಡುವುದಕ್ಕೆ ಇದ್ದಂಥ ಒಂದು ವ್ಯವಸ್ಥೆಯನ್ನು ಬದಲಾಯಿಸಿ ಜನತಾ ಸರ್ಕಾರದ ಅಂತ್ಯೋದಯ ಕಾರ್ಯಕ್ರಮವನ್ನು ಬದಲಾಯಿಸಿ, ತಮ್ಮದೇ ಆದಂಥ ಹೆಸರನ್ನಿಟ್ಟು, ಅದನ್ನು ವಿರೂಪಗೊಳಿಸಿ, ೬ ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೊಡಬೇಕಾದ ಅನುದಾನವನ್ನು ಕಡಿಮೆ ಮಾಡಿ, ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುವಂತೆ ಮಾಡಿತು. ಹೀಗೆ ಮಾಡಿದ್ದರಿಂದ ಅಲ್ಲಿಂದ ಇಲ್ಲಿಯವರೆಗೆ ಬಡತನ ರೇಖೆಯಿಂದ ಮೇಲೆ ಎತ್ತುವಂಥ ಒಂದು ಕಾರ್ಯಕ್ರಮದಲ್ಲಿ ರಾಜ್ಯಸರ್ಕಾರಗಳು ಹಿಂದೆ ಬೀಳತಕ್ಕ ಪರಿಸ್ಥಿತಿ ಬಂತು. ಕರ್ನಾಟಕದಲ್ಲಿ ನಮ್ಮ ಸರ್ಕಾರ ಬಂದಮೇಲೆ ಬಡಜನಗಳಿಗೋಸ್ಕರ ಕೆಳಹಂತದಿಂದಲೇ ಯೋಜನೆಯನ್ನು ತಯಾರು ಮಾಡಿ, ಪ್ರತಿಯೊಬ್ಬರಿಗೂ ಯೋಜನೆಯ ಫಲ ಸಿಗುವಂತಾಗಬೇಕೆಂಬ ದೃಷ್ಟಿಯಿಂದ, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತಿಗಳನ್ನು ಸ್ಥಾಪನೆ ಮಾಡಿ, ಆ ಮೂಲಕ ಹಳ್ಳಿಯಜನರು ಪಾಲ್ಗೊಳ್ಳುವಂತೆ ಮಾಡಿ, ಹಳ್ಳಿಯ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸುವಂತೆ ಮಾಡಿ, ಬಡತನ ರೇಖೆಯಿಂದ ಜನರನ್ನು ಮೇಲಕ್ಕೆ ಎತ್ತುವಂಥ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು, ಆ ದಿಕ್ಕಿನಲ್ಲಿ ಈಗಾಗಲೇ ಮಂಡಲ್ ಮತ್ತು ಜಿಲ್ಲಾ ಪರಿಷತ್ತಿನ ಚುನಾವಣೆಗಳು ನಡೆದಿದೆ. ಹೆಂಡ ಗಿಂಡ ಕೊಟ್ಟಿದ್ದಾರೆಂದು ಮಾನ್ಯ ವಿರೋಧ ಪಕ್ಷದವರು ಹೇಳಿದರು, ಇಲ್ಲಿ ಆರಿಸಿ ಬರುವಂಥ ಮಾರ್ಗ ಯಾವುದು ಎನ್ನುವುದು ಮುಖ್ಯವಲ್ಲ. ನಮ್ಮನ್ನು ವಿಧಾನ ಸಭೆಗೆ ಜನ ಆರಿಸಿ ಕೊಟ್ಟು, ಆ ಮೂಲಕ ಕೆಲಸ ಮಾಡುವಂತೆ ತಿಳಿಸಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಮತ್ತು ಮಂಡಲಗಳ ಮಟ್ಟದಲ್ಲಿ ಕೂಡ ಜನರು ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಿಕೊಟ್ಟಿದ್ದಾರೆ. ಸ್ಥಳೀಯವಾಗಿ ಜನತಾ ಪ್ರತಿನಿಧಿಗಳು ಬಡತನ ರೇಖೆಯಿಂದ ಮೇಲಕ್ಕೆ ಎತ್ತುವಂಥ ಒಂದು ಕೆಲಸವನ್ನು, ಆರಿಸಿ ಬಂದಂಥ ಮೂಲವನ್ನು ಕಾಣದೆ, ಮುಂದೆ ಯಾವ ರೀತಿ ಕೆಲಸ ಅವರಿಂದ ತೆಗೆದುಕೊಳ್ಳಬೇಕೆಂಬ ಬಗ್ಗೆ ಪ್ರಯತ್ನ ಮಾಡಿದ್ದೇವೆ. ಕೇವಲ ಜಾತ್ರೆ ಆಯಿತು, ಜನ ಮೆಚ್ಚಿದರು, ಹೆಂಡ ಎಲ್ಲಾ ಆಯಿತು, ಎನ್ನುವ ಅಪವಾದ ಹೊರಿಸಿ, ಆರಿಸಿ ಬಂದಂಥ ಜನಗಳಿಗೆ ಮಸಿ ಹಚ್ಚತಕ್ಕ ಕಾರ್ಯಕ್ರಮ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ. ಇವತ್ತು ಕೈಗಾರಿಕೆಗಳು, ಗ್ರಾಮ ಕೈಗಾರಿಕೆಗಳು ಶೇ ೫೦ ರಷ್ಟು ಪರಿಪೂರ್ಣವಾಗಿ ನಿರ್ನಾಮ ಹೊಂದಿವೆ. ಹಿಂದೆ ಗ್ರಾಮಗಳಲ್ಲಿಎಣ್ಣೆ ತಯಾರುಮಾಡುತ್ತಿದ್ದರು,ಬಟ್ಟೆ ತಯಾರು ಮಾಡುತ್ತಿದ್ದರು.ಪ್ರತಿಯೊಂದುಕಸಬನ್ನು ಗ್ರಾಮದಲ್ಲಿಯೇ ಇಟ್ಟುಕೊಂಡು ಸುಖವಾಗಿ ಜೀವನ ಮಾಡುತ್ತಿದ್ದರು. ಆದರೆ, ಬಡತನ ಕಾಣದೇ ಇರತಕ್ಕ ಜನ ಕೇಂದ್ರ ಮತ್ತು ರಾಜ್ಯಗಳಲ್ಲಿ ಸೂತ್ರಗಳನ್ನು ಹಿಡಿದು ಬಡ ಜನರನ್ನು ಮರುಳು ಮಾಡಿ ನಿಮಗೆ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆನ್ನುವ ಆಸೆಗಳನ್ನು ಹುಟ್ಟಿಸುವಂಥ ಒಂದು ಪರಿಪಾಠ ಕಾಂಗ್ರೆಸ್ ಸರ್ಕಾರದಲ್ಲಿ ನಡೆಯಿತು. ಇವತ್ತು ನಮ್ಮ ಜನತಾ ಸರ್ಕಾರ ಪ್ರತಿಯೊಂದು ಮನೆಯನ್ನು ಒಂದು ಯೂನಿಟ್ಟಾಗಿ ಮಾಡಿ ೨೦೦೦ ವರ್ಷದೊಳಗೆ, ಹಳ್ಳಿಗಳಲ್ಲಿ ಯಾರೂ ಸಾಲ ಕೇಳದೇ ಇರತಕ್ಕ ಪರಿಸ್ಥಿತಿಯನ್ನು ನಿರ್ಮಾಣ ಮಾಡುವಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ.

ಇದು ಬಹಳ ಆಶ್ಚರ್ಯಕರ ಆಗಬಹುದು. ಈ ಸಂದರ್ಭದಲ್ಲಿ ತಮಗೆ ಉದಾಹರಣೆ ಹೇಳಬೇಕೆಂದರೆ, ಒಂದು ಹಳ್ಳಿಯಲ್ಲಿ ಒಂದು ಕಸಬುದಾರರು ಅವರಲ್ಲಿರತಕ್ಕ ಕಸುಬಿಗೆ ಬೆಂಬಲ ಕೊಟ್ಟರೆ, ಅವರು ತಯಾರು ಮಾಡತಕ್ಕ ವಸ್ತುಗಳನ್ನು ಸರ್ಕಾರದವರು ಕೊಂಡು ಮಾರಾಟ ಮಾಡಿದರೆ, ಯಾರು ತಯಾರು ಮಾಡತಕ್ಕವರು ಇರುತ್ತಾರೆ, ಅವರಿಗೆ ಒಳ್ಳೆಯ ಮನೋಭಾವ ಬರುತ್ತದೆ, ಪ್ರತಿಯೊಬ್ಬರು ಉತ್ಪನ್ನ ಮಾಡಲಿಕ್ಕೆ ತಯಾರಾಗುತ್ತಾರೆ. ಈಗ ಏನಾಗಿದೆ, ದೊಡ್ಡ ದೊಡ್ಡ ಫ್ಯಾಕ್ಟರಿಗಳವರು

ತಯಾರು ಮಾಡತಕ್ಕ ಉತ್ಪನ್ನಗಳನ್ನು ಪರದೇಶಗಳಿಗೆ ಕಳುಹಿಸದೆ. ನಮ್ಮಲ್ಲಿಯೇ ಮಾರುವಂಥ ಸ್ವಭಾವ ಬಂದು, ಗ್ರಾಮಾಂತರ ಪ್ರದೇಶಗಳಲ್ಲಿ ಆಗತಕ್ಕ ವಸ್ತುಗಳನ್ನು ಮತ್ತು ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿ ಆಗತಕ್ಕ ವಸ್ತುಗಳನ್ನು ಹೋಲಿಕೆ ಮಾಡಿ ಅದು ಒಳ್ಳೆಯದು ಇರಲಿ, ಕೆಟ್ಟದ್ದು ಇರಲಿ, ಮಾರಾಟ ಮಾಡತಕ್ಕದ್ದು ಇದೆ. ಗ್ರಾಮಾಂತರ ಪ್ರದೇಶದಲ್ಲಿ ಉತ್ಪನ್ನ ಮಾಡತಕ್ಕ ವಸ್ತುಗಳನ್ನು ಯಾರೂ ಕೊಂಡುಕೊಳ್ಳುತ್ತಿಲ್ಲ. ಯಾವುದು ಕಡಿಮೆ ಧಾರಣೆಯ ವಸ್ತು ಇರುತ್ತದೆ, ಅದನ್ನು ಕೊಳ್ಳುವುದಕ್ಕೆ ಹೋಗುತ್ತಾರೆ. ಆದ್ದರಿಂದ, ಇವೊತ್ತು ಗ್ರಾಮಾಂತರ ಪ್ರದೇಶದ ಕಸಬುದಾರರು ಒಳ್ಳೆಯ ರೀತಿಯಲ್ಲಿ ತಯಾರು ಮಾಡತಕ್ಕ ಅನುಕೂಲವನ್ನು ಒದಗಿಸಿ, ಫ್ಯಾಕ್ಟರಿಯಲ್ಲಿ ತಯಾರು ಮಾಡತಕ್ಕ ಪದಾರ್ಥಗಳನ್ನು ಹೊರ ದೇಶಕ್ಕೆ ರಫ್ತು ಮಾಡಿದರೆ ಆಗ ಮಾತ್ರ ಹಳ್ಳಿಯ ಅಭಿವೃದ್ಧಿ ಆಗುತ್ತದೆ. ಇವೊತ್ತು ಗಾಂಧೀಜಿಯವರು ಹೇಳಿದಂತಹ ರಾಮರಾಜ್ಯವನ್ನು ಕಾಣಬೇಕಾದರೆ, ಗ್ರಾಮ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸದೇ ಹೋದರೆ, ನಾವು ಎಷ್ಟೇ ಹಣ ಹಾಕಿದರೂ, ಸರಿಯಾದ ರೀತಿಯಲ್ಲಿ ಪರಮಾನ ಬರದೇ ಹೋದರೆ ನಾವು ಕಾಣಬೇಕಾದಂಥ ರಾಮರಾಜ್ಯ ಕನಸಾಗುತ್ತದೆಯೇ ವಿನಹ ನನಸಾಗುವುದಿಲ್ಲ. ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಕಾರ್ಯಕ್ರಮಗಳ ಸಾಧನೆಯ ಬಗ್ಗೆ ಪ್ರತಿಯೊಬ್ಬ ಸದಸ್ಯರಿಗೂ ಅದರ ಪ್ರತಿಯನ್ನು ಕಳುಹಿಸಿಕೊಟ್ಟಿದ್ದಾರೆ. ಈ ಒಂದು ಕಾರ್ಯಕ್ರಮಗಳ ಫಲದಿಂದ ಅನೇಕ ಜನ ಬಡವರಿಗೆ ಅನುಕೂಲವಾಗಿದೆ. ಒಂದೇ ಒಂದು ಉದಾಹರಣೆಯನ್ನು ಹೇಳಬೇಕೆಂದರೆ, ಇವೊತ್ತು ನೀರಾವರಿ ಕೆಲಸದಲ್ಲಿ ಗಂಗಾಕಲ್ಯಾಣ ಕಾರ್ಯಕ್ರಮ ಒಂದೇ ಸಾಕು. ಅನೇಕ ತಾಲ್ಲೂಕುಗಳಲ್ಲಿ ಗಂಗಾ ಕಲ್ಯಾಣ ಕಾರ್ಯಕ್ರಮ ಹಾಕಿಕೊಂಡಿರುವುದರಿಂದ, ಸಾಕಷ್ಟು ಜನರಿಗೆ ಅನುಕೂಲವಾಗಿದೆ. ಇವೊತ್ತು ಹರಿಜನ ಗಿರಿಜನರಿಗೆ ಎಲ್ಲಿ ನೀರಾವರಿ ಇಲ್ಲವೋ ಅಲ್ಲಿ ನೀರನ್ನು ಒದಗಿಸಿ ಅನುಕೂಲ ಮಾಡಿಕೊಟ್ಟಿರುವ ಸರ್ಕಾರ ಎಂದರೆ ಜನತಾ ಸರ್ಕಾರ. ನನ್ನ ತಾಲ್ಲೂಕಿನ ಉದಾಹರಣೆ ಹೇಳುವುದಾದರೆ, ೧೨೦ ಎಕರೆ ಪ್ರದೇಶದಲ್ಲಿ ಎರಡು ಪಂಪ್‌ಸೆಟ್ಟುಗಳನ್ನು ಹಾಕಿ ಹರಿಜನರ ಜಮೀನಿಗೆ ನೀರು ಒದಗಿಸಿದನಂತರ ಎರಡು ವರ್ಷಗಳಲ್ಲಿ ಅವರ ಆರ್ಥಿಕ ಮಟ್ಟ ಕಡಿಮೆಯಾಗಿದೆ. ಅವರುಗಳು ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆ. ಹಾಗೂ ಇವೊತ್ತು ಸುಖವಾಗಿ ಜೀವನ ನಡೆಸಲಿಕ್ಕೆ ಅನುಕೂಲವಾಗಿದೆ. ಈ ತರಹ ಯೋಜನೆಗಳನ್ನು ಹಾಕಿಕೊಂಡು ಅನುಷ್ಠಾನಕ್ಕೆ ತರುವುದರಿಂದ ಅವರ ಆರ್ಥಿಕ ಮುಗ್ಗಟ್ಟು ಕಡಿಮೆಯಾಗಿದೆ. ಅದೇ ರೀತಿ ಇವೊತ್ತು ಪುಸ್ತಕಗಳನ್ನು ಪುಕ್ಕಟ್ಟೆ ಕೊಡುವುದರಿಂದ ಬಹಳ ಅನುಕೂಲವಾಗಿದೆ. ಇದು ಜನಪ್ರಿಯ ಕಾರ್ಯಕ್ರಮ ಇದು ಓಟಿಗೋಸ್ಕರ ಮಾಡುತ್ತಿದ್ದಾರೆ ಎಂದು ಹೇಳುವುದು ಇದೆ. ಅದೇ ರೀತಿ ಎರಡು ರೂಪಾಯಿಗೆ ಒಂದು ಕಿಲೋ ಅಕ್ಕಿ ಕೊಡುವುದನ್ನು ಸಹ ಇದು ಜನಪ್ರಿಯ ಕಾರ್ಯಕ್ರಮ ಇದು ಓಟಿಗೋಸ್ಕರ ಮಾಡುತ್ತಿದ್ದಾರೆ, ಎಂದು ಹೇಳುತ್ತಿದ್ದಾರೆ, ಅದು ಸರಿಯಲ್ಲ. ಇವೊತ್ತು ಎರಡು ರೂಪಾಯಿಗೆ ಒಂದು ಕಿಲೋ ಅಕ್ಕಿಯನ್ನು ಕೊಡುವುದರಿಂದ ಅಲ್ಪ ಧಾರಣೆಯಲ್ಲಿ ಸಿಕ್ಕತಕ್ಕ ಅಕ್ಕಿಯನ್ನು ಮಾರಾಟ ಮಾಡುವುದರಿಂದ, ಮಾರ್ಕೆಟ್‌ನಲ್ಲಿ ಧಾರಣೆ ಹಿಡಿತಕ್ಕೆ ಬಂದಿದೆ ಇವೊತ್ತು ಇರತಕ್ಕ ಸಮಾಜ ಸೃಷ್ಟಿಯಲ್ಲಿ ಸಮಾಜದ ಒಂದು ದುರ್ಬಲತೆಯಲ್ಲಿ ಅದನ್ನು ಬದಲಿಸಿಕೊಳ್ಳತಕ್ಕದ್ದು ನಮ್ಮ ದೃಷ್ಟಿಯಿಂದ ವಿಶಾಲವಾಗಬೇಕು. ಇಲ್ಲದೇ ಹೋದರೆ ಬಡತನ ರೇಖೆಯಿಂದ ಮೇಲೆ ತರತಕ್ಕ ಯೋಜನೆಯನ್ನು ಮಾಡಲಿಕ್ಕೆ ಕಷ್ಟವಾಗುತ್ತದೆ. ಈಗ ಮಂಡಿಸಿರತಕ್ಕ ಬಜೆಟ್ಟಿನ ಬಗ್ಗೆ ಕೆಲವೊಂದು ಸಲಹೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಈಗ ಟರ್ನ್‌ಓವರ್ ಟ್ಯಾಕ್ಸ್ ಹಾಕತಕ್ಕದ್ದು ಇದೆ. ಹೋದಸಾರಿ ೧೫ ಲಕ್ಷ ಟರ್ನ್‌ಓವರ್ ಇದ್ದರೆ ಟ್ಯಾಕ್ಸ್ ಹಾಕುತ್ತಿದ್ದರು. ಈಗ ೫ ಲಕ್ಷ ಟರ್ನ್‌ಓವರ್ ಮೇಲೆ ಇರುವವರಿಗೆ ಟ್ಯಾಕ್ಸ್ ಹಾಕಬೇಕೆಂದು ಮಾಡಿದ್ದಾರೆ. ೫ ಲಕ್ಷಕ್ಕಾದರೂ ಕೊಡಬೇಕಾದ ಕಾರಣ ಏನು ? ಈ ೫ ಲಕ್ಷಕ್ಕೂ ಕೊಡದೇ ಪ್ರತಿಯೊಂದು ಹಂತದಲ್ಲೂ ಪ್ರತಿಯೊಂದು ಟರ್ನ್‌ಓವರ್ ಟ್ಯಾಕ್ಸ್ ಹಾಕಬೇಕೆಂದು ನನ್ನ ಸಲಹೆ. ಆದ್ದರಿಂದ, ೫ ಲಕ್ಷ ಎಂದು ಲಿಮಿಟ್ ಮಾಡತಕ್ಕ ಪ್ರಸಂಗ ಇಲ್ಲ. ಅವರೇನು ಸ್ವತಃ ಟ್ಯಾಕ್ಸ್ ಕೊಡುವುದಿಲ್ಲ. ೫ ಲಕ್ಷ ಲಿಮಿಟ್ ಮಾಡಿದರೆ ಅವರೇ ಉಳಿತಾಯ ಮಾಡಿಕೊಳ್ಳುತ್ತಾರೆ. ಅದರಿಂದ ಅವರಿಗೆ ಅನುಕೂಲವಾಗುತ್ತದೆ. ಇದರಿಂದ ನಮ್ಮ ಬೊಕ್ಕಸಕ್ಕೆ ಲುಕ್ಸಾನು ಆಗುತ್ತದೆ. ಇನ್ನು ಕರ್ನಾಟಕ ರಾಜ್ಯದಲ್ಲಿ ಮಾಡಿರತಕ್ಕ ನೀರಾವರಿ ಕೆಲಸಗಳ ಬಗ್ಗೆ ಹೇಳಬೇಕೆಂದರೆ, ಯಾರು ನೀರಾವರಿಯಿಂದ ಹೆಚ್ಚಿನ ಉತ್ಪನ್ನ ಪಡೆದು, ಹೆಚ್ಚಿನ ಲಾಭವನ್ನು ಪಡೆದುಕೊಂಡಿರುತ್ತಾರೆ. ತಮ್ಮ ಆರ್ಥಿಕ ಮುಗ್ಗಟ್ಟನ್ನು ಪರಿಹಾರ ಮಾಡಿಕೊಂಡಿರುತ್ತಾರೆ, ಅವರು ಹಣವನ್ನು ಕೊಡಬೇಕಾಗುತ್ತದೆ. ಹೊಸದಾಗಿ ಪ್ರಾಜೆಕ್ಟ್ ಮಾಡತಕ್ಕ ಪರಿಸ್ಥಿತಿಯಲ್ಲಿ, ಹಣವನ್ನು ಪಡೆಯಲಿಕ್ಕೆ ಯೋಚನೆ ಮಾಡದೇ ಹೋದರೆ, ನೀರಾವರಿ ಕಾರ್ಯಕ್ರಮವನ್ನು ಹಾಕಿಕೊಳ್ಳುವುದ

ಬಹಳ ಕಷ್ಟವಾಗುತ್ತದೆ. ಇವೊತ್ತು ನೀರಾವರಿ ಟ್ಯಾಕ್ಸ್ ಹೆಚ್ಚು ಮಾಡಿದರೂ ಸಹ, ನಿಜವಾಗಿಯೂ ಯಾರು ನೀರಿನಿಂದ ಹೆಚ್ಚು ಉತ್ಪನ್ನ ಪಡೆಯುತ್ತಾರೆ, ಬಹಳಮಟ್ಟಿಗೆ ಬಹಳ ಅವರು ಉದಾರವಾಗಿ ಕೊಡುತ್ತಾರೆಂದು ನನ್ನ ಭಾವನೆ. ಈ ರೈತವರ್ಗದವರು ಬೆಳೆಯುತಕ್ಕ ಮಾಲಿಗೆ ಸರಿಯಾಗಿ ಟ್ಯಾಕ್ಸ್‌ನ್ನು ಹಾಕತಕ್ಕ ವ್ಯವಸ್ಥೆ ಸರಿಯಾಗಿಲ್ಲ. ಇವತ್ತು ಏನಾಗಿದೆ ಎಂದರೆ, ಕಾಫಿ ಪ್ಲಾಂಟರ್ಸ್ ಹೆಚ್ಚಿನ ಉತ್ಪನ್ನವನ್ನು ಮಾಡುತ್ತಾರೆ. ಕೋಕನಟ್ ಪ್ಲಾಂಟೇಷನ್ ಇಟ್ಟುಕೊಂಡಿರುವವರು ಹೆಚ್ಚಿನ ಉತ್ಪನ್ನವನ್ನು ಮಾಡುತ್ತಾರೆ. ಇವರಿಗೆ ಹೆಚ್ಚಿನ ವರಮಾನ ಬರುತ್ತದೆ. ಅವರು ಹೆಚ್ಚಿನ ಟ್ಯಾಕ್ಸ್‌ನ್ನು ಕೊಟ್ಟರೂ ಪರವಾಗಿಲ್ಲ. ಅವರು ಯಾವುದೇ ಕಾರಣಕ್ಕೂ ಟ್ಯಾಕ್ಸ್‌ನ್ನು ಕೊಡುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಕೊಡಬಾರದು. ಅವರು ಮೊದಲೇ ಸಾಹುಕಾರರು. ಅದರ ಜೊತೆಗೆ ಟ್ಯಾಕ್ಸ್ ಕೊಡುವುದನ್ನೂ ತಪ್ಪಿಸಿಕೊಂಡು ಇನ್ನೂ ಸಾಹುಕಾರರಾಗುವುದಕ್ಕೆ ನಾವು ಬಿಡಬಾರದು. ಹೆಚ್ಚು ವರಮಾನ ಬರುವವರಿಗೆ ಇನ್‌ಕಂ ಟ್ಯಾಕ್ಸ್ ಹಾಕುವುದನ್ನು ಬಿಟ್ಟು ಕಡಿಮೆ ವರಮಾನ ಬರುವವರಿಗೆ ಹೆಚ್ಚು ಇನ್‌ಕಂ ಟ್ಯಾಕ್ಸ್ ಹಾಕುವುದಕ್ಕೆ ಹೋಗಬಾರದು. ಇದನ್ನು ಗಮನದಲ್ಲಿ ಇಟ್ಟುಕೊಳ್ಳದೇ ಅಭಿವೃದ್ಧಿ ಕಾರ್ಯಗಳ ಕಡೆಗೆ ನಾವು ಗಮನಹರಿಸುವುದಕ್ಕೆ ಹೋದರೆ ಬಹಳ ಕಷ್ಟವಾಗುತ್ತದೆ. ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್ ಮೂಲಕ ಅಭಿವೃದ್ಧಿ ಕಾರ್ಯ ಮಾಡುವುದನ್ನು ಬಿಟ್ಟು ಸರ್ಕಾರದವರು ಏಜೆಂಟ್ಸ್ ಮುಖಾಂತರ ಕೆಲಸಮಾಡಿದರೆ ಸರ್ಕಾರಕ್ಕೆ ಇನ್ನೂ ಹೆಚ್ಚಿನ ಉತ್ಪನ್ನ ಹಾಗೂ ಆದಾಯ ಬರುವುದಕ್ಕೆ ಅನುಕೂಲವಾಗುತ್ತದೆಂದು ನಾನು ಸಲಹೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ದೊಡ್ಡ ದೊಡ್ಡ ಶ್ರೀಮಂತರಿಂದ, ದೊಡ್ಡ ದೊಡ್ಡ ಸಾಹುಕಾರರಿಂದ ಹೆಚ್ಚಿನ ವರಮಾನ ತೆರಿಗೆಯನ್ನು ನಾವು ವಸೂಲುಮಾಡಿಕೊಳ್ಳದೇ ಅಭಿವೃದ್ಧಿ ಕಾರ್ಯಗಳಿಗೆ ಕೈಹಾಕಿದರೆ ಮುಂದೆ ಕಷ್ಟವಾಗುತ್ತದೆ. ಬಡತನ ರೇಖೆಯಿಂದ ಕೆಳಗಡೆ ಇರತಕ್ಕ ಜನರನ್ನು ಮೇಲಕ್ಕೆತ್ತದಿದ್ದರೆ ನಾವು ಜನತೆಗೆ ಏನು ಆಶ್ವಾಸನೆಗಳನ್ನು ನೀಡಿದ್ದೆವು ಅದನ್ನು ಕಾರ್ಯಗತಮಾಡಿದಂತಾಗುವುದಿಲ್ಲವೆಂದು ನನ್ನ ಭಾವನೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಪರಸ್ಪರ ಹೊಂದಾಣಿಕೆ ಇಲ್ಲದಿರುವುದರಿಂದಾಗಿ, ಯಾವ ಅಭಿವೃದ್ಧಿ ಕಾರ್ಯಗಳೂ ಅಷ್ಟಾಗಿ ಸಫಲವಾಗುತ್ತಿಲ್ಲ. ಹಳ್ಳಿಗಳಲ್ಲಿ ರೈತ ಕಾರ್ಮಿಕರು, ಸಣ್ಣ ರೈತರು ಅಭಿವೃದ್ಧಿ ಆಗದಿದ್ದರೆ ನಮ್ಮ ದೇಶ ಉದ್ಧಾರವಾಗುವುದಿಲ್ಲ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ರೈತ ಕಾರ್ಮಿಕರಿಗೆ, ಸಣ್ಣ ರೈತರಿಗೆ ಕೆಲವೊಂದು ಸವಲತ್ತುಗಳನ್ನು ಕೊಡದೇ ಹೋದರೆ ನಾವು ಮೇಲಿನಿಂದ ಎಷ್ಟೇ ಉತ್ತಮವಾದ ಕಾರ್ಯಕ್ರಮಗಳನ್ನು ಹಾಕಿಕೊಂಡರೂ, ದೊಡ್ಡ ದೊಡ್ಡ ಕೈಗಾರಿಕೆಗಳನ್ನು ತೆರೆದರೂ ಅಭಿವೃದ್ಧಿಯಾಗುವುದಿಲ್ಲ. ಬಡವರ ಕಲ್ಯಾಣವಾಗುವುದಿಲ್ಲ.

ಹಳ್ಳಿಗಳ ಜನರು ಪಟ್ಟಣಕ್ಕೆ ಬರುವುದನ್ನು ನಿಲ್ಲಿಸಬೇಕಾದರೆ, ಆ ಹಳ್ಳಿಯ ಜನರಿಗೆ ಕಾರ್ಯ ಮತ್ತು ಉದ್ಯೋಗ ಕೊಡುವಂತಹ ಮೂಲ ತತ್ವದ ಮೇಲೆ ಕಾರ್ಯಕ್ರಮ ಕೈಗೊಂಡರೆ ಒಳ್ಳೆಯದು. ಗ್ರಾಮಾಂತರದಲ್ಲಿ ಇರತಕ್ಕಂಥ ಕಸುಬುಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡತಕ್ಕಂಥದ್ದು ಅವಶ್ಯಕ. ೧೯೫೦-೫೧ರಲ್ಲಿ ೧೦೨೦ ಕೋಟಿ ರೂಪಾಯಿಗಳನ್ನು ಕೊಡಲಾಗಿತ್ತು. ಅದು ಈಗ ೧೩,೩೦೦ ಕೋಟಿ ರೂ.ಗಳ ಆಯಿತು ಅಂದರೆ ೧೯೮೧ರಲ್ಲಿ. ಇಷ್ಟು ಕೋಟಿ ರೂ.ಗಳ ಹಣವನ್ನು ಕೇವಲ ಈ ಒಂದು ಅರ್ಬನ್ ಏರಿಯಾದಲ್ಲಿ ಬಳಸುವುದಕ್ಕೆ ಆಗಿತ್ತೇ ವಿನಃ ಅವುಗಳನ್ನು ೧೯೫೦-೫೧ ರಿಂದ ಇವತ್ತಿನವರೆಗೂ ಗ್ರಾಮಾಂತರ ಮತ್ತು ಅರ್ಬನ್ ಭಾಗಗಳಲ್ಲಿ ಹಂಚಿದರೆ ಬಹಳ ಮಟ್ಟಿಗೆ ಬಡತನ ರೇಖೆಯ ಕೆಳಗಿರತಕ್ಕವರನ್ನು ಮೇಲಕ್ಕೆ ತರುವುದಕ್ಕೆ ಸಾಧ್ಯವಾಗುತ್ತಿತ್ತು. ಪ್ಲಾನ್ ಮಾಡುವಾಗ ಇದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೆ ತಮ್ಮ ತಮ್ಮ ಚಿಂತನೆಗೆ ಅನುಗುಣವಾಗಿ ಯೋಜನೆಯನ್ನು ಮಾಡಿ ಗ್ರಾಮಾಂತರದಲ್ಲಿ ಕಷ್ಟವನ್ನು ಅನುಭವಿಸದ ಜನ ಈ ಒಂದು ಯೋಜನೆ ತಯಾರು ಮಾಡಿದ್ದರಿಂದ, ಇಷ್ಟೊಂದು ಅನಾಹುತವಾಗಿದೆ. ಆದುದರಿಂದ ಇನ್ನು ಮುಂದೆ ಆದರೂ ಸಹ ಈ ಒಂದು ಯೋಜನೆ ತಯಾರು ಮಾಡಬೇಕಾದರೆ ಈ ಒಂದು ಕೆಳಹಂತದಿಂದ ಯಾವರೀತಿ ಅಭಿವೃದ್ಧಿ ಮಾಡಬಹುದು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ತಯಾರು ಮಾಡಬೇಕು. ಯಾವ ಯಾವ ಮೂಲಗಳಿಂದ ಹಣ ಬರುತ್ತದೆಂಬುದನ್ನು ಶೇಖರಣೆ ಮಾಡಿ ಅಭಿವೃದ್ಧಿ ಕಡೆಗೆ, ಗಮನಹರಿಸಿ ಗ್ರಾಮಾಂತರ ಮತ್ತು ಅರ್ಬನ್ ಏರಿಯಾಗಳಿಗೆ ಅದನ್ನು ಹಂಚಿ ಎರಡು ದೃಷ್ಟಿಯಿಂದ ಅಭಿವೃದ್ಧಿಪಡಿಸಿದರೆ ಮಾತ್ರ ಬಡವರ ಅಭಿವೃದ್ಧಿಯಾಗುತ್ತದೆ. ಹಾಗೂ ಈ ಮೂಲಕ ದೇಶದ ಅಭಿವೃದ್ಧಿ ಆಗುತ್ತದೆ. ಇದರಿಂದ ರಾಮರಾಜ್ಯ ನಿರ್ಮಾಣವಾಗುತ್ತದೆ ಎಂಬ ನನ್ನ ಭಾವನೆಯನ್ನು ತಿಳಿಸಿ, ಈಗಿರತಕ್ಕಂಥ ನಮ್ಮ ಜನತಾ ಸರ್ಕಾರದ ಪ್ರತಿಯೋಜನೆಯೂ ಸಹ ಬಡವರ ಬಡತನವನ್ನು ನೀಗಿಸಿ ಬಡತನ ರೇಖೆಯಿಂದ ಮೇಲಕ್ಕೆ ತೆಗೆದುಕೊಂಡು ಹೋಗತಕ್ಕಂಥ

ಯೋಜನೆಗಳಾಗಿವೆ. ಇದನ್ನು ವಿರೋಧಕ್ಕಾಗಿ ವಿರೋಧ ಮಾಡತಕ್ಕಂಥ ಒಂದು ಪ್ರವೃತ್ತಿಯನ್ನು ಬಿಟ್ಟು ಇದರಲ್ಲಿ ಇರತಕ್ಕಂಥ ಸವಲತ್ತುಗಳನ್ನು ಗಮನಿಸಬೇಕೆಂದು ಹೇಳುತ್ತೇನೆ. ನಾನು ಕೊನೆಯದಾಗಿ ಈ ಸದನದಲ್ಲಿ ಇಟ್ಟಿರುವ ಯೋಜನೆಯನ್ನು ಅನುಮೋದಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಮುಂದಿನ ವರ್ಷದ ಆಯವ್ಯಯವನ್ನು ಈ ಸದನದಲ್ಲಿ ಐದನೇ ಭಾರಿ ಮಂಡಿಸುತ್ತಾ ಇದ್ದಾರೆ. ಅವರು ಈ ಆಯವ್ಯಯವನ್ನು ಈ ಸದನದಲ್ಲಿ......

ಶ್ರೀ ಎಸ್. ಬಂಗಾರಪ್ಪ.—ಒಂದು ನಿಮಿಷ ಮಾತನಾಡುತ್ತೇನೆ, ಮಾನ್ಯ ಸಭಾಧ್ಯಕ್ಷರೆ, ಈಗ ತಾವೇ ಯೋಚನೆ ಮಾಡಿ. ಶ್ರೀ ಮಂಜುನಾಥ್ (ಮಾನ್ಯ ಮಂತ್ರಿಗಳು) ಒಬ್ಬರನ್ನು ಬಿಟ್ಟರೆ ಉಳಿದಿರತಕ್ಕಂಥ ಮಂತ್ರಿಗಳು ಯಾರಾದರೂ ಇದ್ದಾರೆಯೇ ? ಏನಾದರೂ ಬರೆದುಕೊಳ್ಳುತ್ತಿದ್ದಾರೆಯೇ ? ನಾವಾದರೂ ಏತಕ್ಕಾಗಿ ಭಾಷಣ ಮಾಡಬೇಕು ? ಆಫೀಸರ್‌ಗಳಿಗೆ ಪದೇ ಪದೇ ಹೇಳಿಯಾಯಿತು. ನಾವು ಸಭಾತ್ಯಾಗ ಮಾಡುತ್ತೇವೆ.

ಛೇರ್ಮನ್.—ಮಾನ್ಯ ಬಂಗಾರಪ್ಪನವರೇ,

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ ಏನಿದು !

ಶ್ರೀ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾವು ಕಂಬಗಳಿಗೆ. ಗೋಡೆಗಳಿಗೆ ಮಾತನಾಡುವುದೇ ? They are showing scant respect to the entire House, not only to the Opposition but also to the hon. members sitting there.

ಛೇರ್ಮನ್.—ಬರುತ್ತಿದ್ದಾರೆ ಅವರನ್ನು ಕರೆಯಿಸುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ನೀವು ಕರೆಯಿಸಿದ ಮೇಲೆ ನಾವು ಪ್ರಾರಂಭ ಮಾಡುತ್ತೇವೆ.

ಛೇರ್ಮನ್ —ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಾವು ಕೌನ್ಸಿಲ್ ಕಡೆ ಹೋಗೋಣವೇ ? ಕೌನ್ಸಿಲ್‌ನಲ್ಲಿ ಎಷ್ಟು ಜನ ಮಂತ್ರಿಗಳಿದ್ದಾರೆ. ಎಂಬುದನ್ನು ಲೆಕ್ಕ ಹಾಕಿಕೊಂಡು ಬರೋಣವೇ ?

ಶ್ರೀ ಎಂ. ಎಸ್ ಕೃಷ್ಣನ್.—ನಾವು ಕೌನ್ಸಿಲ್ ಕಡೆಯಿಂದಲೇ ಬಂದಿದೇವೆ.

ಛೇರ್ಮನ್.—ಇಲ್ಲಿ ಆಫೀಸರ್‌ಗಳಿದ್ದಾರೆ. ಶ್ರೀ ಮಂಜುನಾಥ್ ಅವರು ಇದ್ದಾರೆ. ಅವರು ನೋಟ್ ಮಾಡಿಕೊಳ್ಳುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಶ್ರೀ ಮೊಯ್ಲಿಯವರು ಫೈನಾನ್ಸ್ ಮಿನಿಸ್ಟರ್ ಆಗಿದ್ದವರು. ಇವರು ಸರ್ಕಾರವನ್ನು ಹೊಗಳತಕ್ಕಂಥ ಮತ್ತು ಇವರು ಕೊಡತಕ್ಕಂಥ ಅಡ್ವೈಸ್‌ನ್ನು ಕೇಳುವುದಕ್ಕೆ ಆಫೀಸರ್ಸ್ ಇರುವುದಿಲ್ಲ. ಮಂತ್ರಿಗಳು ಇರೋದಿಲ್ಲ. ನಾವು ಕುಳಿತುಕೊಂಡಿರುತ್ತೇವೆ. ಸಭೆಯನ್ನು ಮುಂದೂಡಿ. ನಾವು ಇಲ್ಲೇ ಲೌಂಜ್‌ನಲ್ಲಿ ಕುಳಿತುಕೊಂಡಿರುತ್ತೇವೆ. ತಾವು ಬೆಲ್ ಮಾಡಿದಾಕ್ಷಣ ನಾವು ಬರುತ್ತೇವೆ.

(At this stage all the Congress (I) members withdrew from the House)

ಛೇರ್ಮನ್.—ಶ್ರೀಮಂತಿ ನಾಗರತ್ನಮ್ಮನವರೇ, ಮಾನ್ಯ ಮಂಜುನಾಥ್ ಅವರು ಇದ್ದಾರೆ. ಮಾನ್ಯ ಜಾಲಪ್ಪನವರು ಇದ್ದಾರೆ. ಅವರು ನೋಟ್ ಮಾಡಿಕೊಳ್ಳುತ್ತಾರೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಅವಗಾಹನೆಗೆ ತರುವುದಕ್ಕೆ ಬಯಸುತ್ತೇನೆ. ಈ ಸದನದಲ್ಲಿ ಅನೇಕ ಸಲ ಹೇಳಿದ್ದೇನೆ. ಮಾನ ವಿರೋಧಪಕ್ಷದ ನಾಯಕಿಯವರು ಮಾತನಾಡುವಾಗ ಇಲ್ಲಿ ಅಧಿಕಾರಿಗಳು ಇರುವುದಿಲ್ಲ, ಮಂತ್ರಿಗಳ

ಇರುವುದಿಲ್ಲ. ನಮ್ಮ ವಿರೋಧಪಕ್ಷದ ನಾಯಕರು ಮಾತನಾಡುವಾಗಲೇ ಈ ರೀತಿ ಮರ್ಯಾದೆ ಕೊಡು ವುದಾದರೆ ನಾವು ಏತಕ್ಕೆ ಮಾತನಾಡಬೇಕು ?

ಛೇರ್ಮನ್.—ಮಾನ್ಯ ಮಂಜುನಾಥ್ ಅವರು ಇದ್ದಾರೆ. ಮಾನ್ಯ ಬಸವಣ್ಣಪ್ಪನವರು ಇದ್ದಾರೆ. ಮಾನ್ಯ ಕೃಷ್ಣಾರೆಡ್ಡಿ ಅವರು ಇದ್ದಾರೆ, ಕೋರಂ ಇದೆ....

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಕೃಷ್ಣರೆಡ್ಡಿ ಅವರನ್ನೇ ಮುಖ್ಯ ಮಂತ್ರಿಗಳನ್ನಾಗಿ ಮಾಡಿ ಬಿಡಿ, ಅಥವಾ ಹೋಂ ಮಿನಿಸ್ಟರನ್ನಾಗಿ ಮಾಡಿಬಿಡಿ. ಅಧಿಕಾರಿಗಳು ಯಾರಾದರೂ ಇದ್ದಾರೆಯೇ ? ಯಾರ್ಯಾರನ್ನೋ ಕೂಡಿಸಿಕೊಂಡು ನಮಗೆ ಏಕೆ ತಾಪತ್ರಯ ಕೊಡುತ್ತಿರುತ್ತೀರಿ ? ನಾವು ಮಾತನಾಡು ವುದಕ್ಕೆ ಆಗುವುದಿಲ್ಲ. ಮಾತನಾಡಿ ಪ್ರಯೋಜನವಿಲ್ಲ.

ಛೇರ್ಮನ್.—ಅಧಿಕಾರಿಗಳು ಇದ್ದಾರೆ ಮಾನ್ಯ ಕೃಷ್ಣನ್ ಅವರೇ,

ಶ್ರೀ ಎಂ. ಎಸ್. ಕೃಷ್ಣನ್.—ಅಧಿಕಾರಿಗಳಿದ್ದಾರೆ ನಿಜ. ಎಷ್ಟು ಜನ ಅಧಿಕಾರಿಗಳಿದ್ದಾರೆ ? ಅಧಿಕಾರಿಗಳ ಸೀಟ್ ಕಡೆ ನೋಡಿ. ಹೀಗಾದರೆ ಏನು ಮಾಡುವುದು...

ಶ್ರೀ ಕೆ. ಹೆಚ್. ಪಟೇಲ್.—ಮಾನ್ಯ ಸ್ಪೀಕರ್ ಅವರು ಬಂದರು. ಅವರಿಗೂ ಸಹ ನಾವು ಅರಿಕೆ ಮಾಡಿಕೊಳ್ಳುತ್ತೇವೆ.

(ಗೊಂದಲ)

(ಶ್ರೀ ಬಿ. ಜಿ. ಬಣಕಾರ್ ಅವರು ಅಧ್ಯಕ್ಷರ ಪೀಠ ಅಲಂಕರಿಸಿದರು)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸ್ಪೀಕರ್ ಅವರೇ ತಮ್ಮಲ್ಲಿ ಹೇಳುವುದು ಇಷ್ಟೇನೆ. ಮಾನ್ಯ ಮೊಯ್ಲಿ ಅವರು ಮಾತನಾಡುವುದಕ್ಕೆ ಎದ್ದುನಿಂತರು. ಆದರೆ ಇಲ್ಲಿ ಮಂತ್ರಿಗಳು ಹಾಗೂ ಅಧಿಕಾರಿಗಳು ಇಲ್ಲ. ಮಾನ್ಯ ಮೊಯ್ಲಿ ಅವರು ಅರ್ಥಗರ್ಭಿತವಾಗಿ ಮಾತನಾಡುತ್ತಾರೆ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಮೊಯ್ಲಿ ಅವರು ಭಾಷಣ ಶುರು ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವಾಗಲೂ ಹೀಗೇನೆ ? ಇದನ್ನು ಪ್ರೊಟೆಸ್ಟ್ ಮಾಡಿ ಹೊರಗೆ ಹೋದ್ಮೇಲೇನೆ ಇವರುಗಳು ಬರೋದು. ಮಾನ್ಯ ಚಾಲಪ್ಪನವರು ಬಂದಿದ್ದು, ಮಾನ್ಯ ಬಸವಣೆಪ್ಪನವರು ಬಂದಿದ್ದು ಈಗ. ಮೊದಲು ಕೇವಲ ಅವರೊಬ್ಬರೇ ಇದ್ದರು ಕೇವಲ ಆ ಕಡೆ ೧೨ ಜನ ಈ ಕಡೆ ೧೨ ಜನ ಮಾತ್ರ ಇದ್ದರು. ನಮ್ಮ ಆಪಾದನೆ ಏನೆಂದರೆ ಬಜೆಟ್ ಸೆಷನ್ ನಡೆಯು ವಾಗ, ಎಕ್ಸ್ ಫೈನಾನ್ಸ್ ಮಿನಿಸ್ಟರ್ ಹಾಗೂ ವಿರೋಧ ಪಕ್ಷದ ನಾಯಕರಾಗಿದ್ದಂಥವರು ಮಾತನಾಡು ವಾಗ ಕೇಳತಕ್ಕಂಥ ಸೌಜನ್ಯ ಇಲ್ಲ. ಬರೆದುಕೊಳ್ಳುತ್ತಿಲ್ಲ. ಉತ್ತರ ಕೊಡುವುದಿಲ್ಲ, ಬರೀ ರೈಸ್ ಮಾಡಿ ಮನೆಗೆ ಹೋಗುವುದಕ್ಕೆ ಇದೇನು ಶಿಶುಗಳ ನೋಟೀಸೇ ? ಅವರು ಏನಾದರೂ ಮಾಡಬೇಕು. ಇವತ್ತು ಮುಖ್ಯ ಮಂತ್ರಿಗಳದ್ದು ಡಿಮ್ಯಾಂಡ್ ಇದೆ. ಅವರು ಇರಬೇಕು. ಅಥವಾ ಅವರ ಸ್ಥಾನ ದಲ್ಲಿ ಕೂಡಿಸಿ ಹೋಗಬೇಕು. ಇಲ್ಲಿ ಬೇರೆ ಯಾರಾದರೂ ಇರಬೇಕು. ಇದು ಇದೆಯೋ ಅಥವಾ ಇಲ್ಲವೋ ಎಂಬುದನ್ನು ಹೇಳತಕ್ಕಂಥವರಾದರೂ ಇರಬೇಕು. ಇಲ್ಲಿ ಯಾರೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಮಾನ್ಯ ಲಾ ಅಂಡ್ ಪಾರ್ಲಿಮೆಂಟ್ ಅಫೇರ ಮಿನಿಸ್ಟರ್ ಶ್ರೀ ಲಕ್ಷ್ಮಿಸಾಗರ್ ಅವರಾದರು ಇರುತ್ತಿದ್ದರು. ಈಗ ಅವರು ಕೂಡ ಇಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರಿಗೆ ನೀವು ಛೀಮಾರಿ ಹಾಕಬೇಕು. ನೀವು ಹೇಳ್ಬೇಕು. ಹಾಗಾದ್ರನೆ ಅವರು ಇಲ್ಲಿಗೆ ಬರ್ತಾರೆಯೇ ವಿನಃ ಇಲ್ಲದಿದ್ದರೆ ಅವರು ಬರೋಲ್ಲ. ನಾವು ಈ ಬಗ್ಗೆ ಪದೇ ಪದೇ ಹೇಳಿದ್ದೇವೆ ಇದು ಒಂದನೆಯ ಸಲ ಅಲ್ಲ. ಇದನ್ನು ನಾಲ್ಕನೇ ಸಲ ರೈಸ್ ಮಾಡುತ್ತಾ ಇರುವುದು. ಒಂದು ಸಲ ಎರಡು ಸಲ ಅಂದರೆ ಈ ರೀತಿ ಆಗಬಹುದು. ಯಾರೋ ಒಬ್ಬರು ಇದ್ದು ೧೫ ಜನ ಆಬ್ಸೆಂಟ್ ಅಂದರೆ ಏನು?...

ಸಭಾಧ್ಯಕ್ಷರು.— ಅವರನ್ನು ಕರೆಸುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಗಲಾಟೆ ಮಾಡಿ ಕರಿಸ್ಕೋಬೇಕಾ ?

ಅಧ್ಯಕ್ಷರು.— ಇನ್ನುಳಿದವರು ಬರಲಿಕ್ಕೆ ಹತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಪದೇ ಪದೇ ಎದ್ದು ನಿಂತು ಗಲಾಟೆಮಾಡಿ ಕರೆಸಿಕೊಳ್ಳುವಂತಹ ಪ್ರಮೇಯ ಏಕೆ ಬರಬೇಕು ? ಇದನ್ನು ಆಗದಂತೆ ನೋಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು.— ಹೀಗೆ ಆಗದಂತೆ ನೋಡಿಕೋತೇನೆ.

ಶ್ರೀ ಬಿ. ಸೋಮಶೇಖರ್.— ಮಾನ್ಯ ಅಧ್ಯಕ್ಷರೆ, ಅವರ ಒತ್ತಾಯ ಏನು ಇದೆ, ಅಂದರೆ ವಿರೋಧ ಪಕ್ಷದವರ ಒತ್ತಾಯ ಏನೆಂದರೆ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಹೇಳುವರೆವಿಗೂ ಆಗುವುದಿಲ್ಲ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.— ಧಾರವಾಡ ಭಾಷೆಯಲ್ಲಿ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರಿಗೆ ಕಿವಿ ಹಿಂಡಿ ಹೇಳ್ಬೇಕು. ಚುಚ್ಚಿ ಹೇಳ್ಬೇಕು. ನೀವು ನಗುತ್ತಾ ಹೇಳ್ತೀರಿ. ಅವರಿಗೆ ಅರ್ಥವಾಗೋದಿಲ್ಲ.

೨–೦೦ ಪಿ. ಎಂ.

ಅಧ್ಯಕ್ಷರು.— ಕೌನ್ಸಿಲ್‌ನಲ್ಲಿ ಚೀಫ್ ಮಿನಿಸ್ಟರ್, ಹೋಮ್ ಮಿನಿಸ್ಟರ್ ಹೆಲ್ತ್ ಮಿನಿಸ್ಟರ್ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಎಲ್ಲರೂ ಕೂಡ ಅಲ್ಲಿದ್ದಾರೆ. ಅವರಿಗೆ ಹೇಳಿಕಳುಹಿಸುತ್ತೇನೆ, ಈಗಲೇ ಬರುವಂತೆ ಏರ್ಪಾಡು ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಆಯವ್ಯಯದ ಮೇಲೆ ಚರ್ಚೆಯಾಗುತ್ತಿರಬೇಕಾದರೆ, ಕೊನೆಪಕ್ಷ ಸಂಬಂಧಪಟ್ಟ ಮಂತ್ರಿಗಳಾದರೂ ಇಲ್ಲಿರಬೇಕು.

ಅಧ್ಯಕ್ಷರು.— ನಿಮ್ಮ ಸಲಹೆ, ಅಭಿಲಾಷೆ ಏನು ಹೇಳಿದ್ದೀರಿ ಅದೆಲ್ಲವನ್ನೂ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನು ಮೇಲಾದರೂ ಈ ರೀತಿಯಾಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.— ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಬೇರೆ ಸಚಿವರುಗಳು ಇರಬಹುದು. ಅವರಿಗೆ ಭಾಷಣ ಮಾಡಲು ನಾವು ಸಿದ್ಧರಾಗಿಲ್ಲ.

† ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಈ ಆಯುವ್ಯಯದ ಒಂದು ವಿಶ್ಲೇಷಣೆ ಮಾಡುತ್ತಿರುವಾಗ ಈಗ ಒಂದು ವಿದ್ಯಮಾನ ನಡೆಯಿತು. ಇದರ ಪ್ರಭಾವ ಇಡೀ ಆಯವ್ಯಯದ ಮೇಲೆಯೇ ಇದೆ ಎಂದು ನನಗನಿಸುತ್ತದೆ. ಯಾವುದೇ ಆಡಳಿತ ವರ್ಗದಲ್ಲಿ ಮತ್ತು ಮಂತ್ರಿಮಂಡಲದಲ್ಲಿ ಯಾವರೀತಿ ಜನತೆಯ ಆಸೆ ಆಕಾಂಕ್ಷೆಗಳ ವಿಚಾರದಲ್ಲಿ ಸ್ಪಂದನ ಇರಬೇಕು ಅದರ ಸಂಪೂರ್ಣವಾದ ಕೊರತೆ ಈ ಐದು ಬಡ್ಜೆಟ್‌ನ್ನು ಮಂಡನೆ ಮಾಡುವಾಗ ಕಂಡಿದ್ದೇವೆ. ಐದನೇ ಬಾರಿಗೆ ನನ್ನ ಮುಖ್ಯಮಂತ್ರಿಗಳು ಬಡ್ಜೆಟ್ ಮಂಡನೆ ಮಾಡಿದ್ದಾರೆ. ಮತ್ತೆ ಪತ್ರಿಕೆಗಳಲ್ಲಿ ಬರುತ್ತಲೇ ಇದೆ, ಮತ್ತು ಆಗಾಗ್ಗೆ ಚರ್ಚೆಯೂ ಕೂಡ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗಬೇಕು ಎನ್ನುವ ಆಸಕ್ತಿಯಲ್ಲಿ ಇದ್ದಾರೆಂದು ಆಗಾಗ್ಗೆ ಪತ್ರಿಕೆಗಳಲ್ಲೂ ಕೂಡ ಹೇಳಿಕೆ ಬಂದಿದೆ. ಒಂದು ವೇಳೆ ಇದು ಕೊನೆಯ ಬಡ್ಜೆಟ್ ಆದರೆ ಸ್ವಲ್ಪ ವಿಶ್ಲೇಷಣೆ ಮಾಡಿ, ಪ್ರಶಂಶೆಮಾಡಿ ಅಭಿನಂದನೆ ಮಾಡೋಣ ಎನ್ನುವ ಭಾವನೆಯಿಂದ ಈ ಬಡ್ಜೆಟ್‌ನ್ನು ಅವಲೋಕನ ಮಾಡಲು ನಾನು ಸಿದ್ಧತೆ ಮಾಡಿಕೊಂಡಿದ್ದೆ. ಏತಕ್ಕೆಂದರೆ ಇಲ್ಲಿ ನಾನು ಬಡ್ಜೆಟ್‌ನ್ನು ಹೊಗಳಲಿಕ್ಕೆ ಹೋದರೆ ಹೊರಗಡೆ ನನ್ನ ಗತಿ ಏನಾಗಬಹುದು ? ಒಂದುವೇಳೆ ಜಿಲ್ಲಾಪರಿಷತ್, ಮಂಡಲ್ ಪಂಚಾಯತ್ ಚುನಾವಣೆಗಳು ಆಗುವುದಕ್ಕೆ ಮೊದಲೇ ಈ ಬಡ್ಜೆಟನ್ನು ಮಂಡನೆ ಮಾಡಿದ್ದರೆ, ನಿಜವಾಗಿಯೂ ಕರ್ನಾಟಕದ ಜನತೆ ಬಿಡುತ್ತಿರಲಿಲ್ಲ. ಆವಾಗ ಡೆಲ್ಲಿಗೆ ಹೋಗ

ಬೇಕಾದ ಪರಿಸ್ಥಿತಿ ಬರುತ್ತಿತ್ತು. ಯಾವಾಗಲೂ ಕೂಡ ಅರ್ಥಮಂತ್ರಿಗಳ ಪದವಿ ಮತ್ತು ಮುಖ್ಯ ಮಂತ್ರಿಗಳ ಪದವಿ ಎರಡೂ ಕೂಡ ಒಂದು ರೀತಿಯಲ್ಲಿ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾ ದಂಥ ಹುದ್ದೆಗಳು. ಇದು ಅರ್ಥ, ಅದು ಅರ್ಥ ಮಾಡಿಕೊಂಡರೆ ಏನಾಗುತ್ತದೆ ? ನಾವು ಈ ಸದನ ದಲ್ಲಿ ಐದು ವರ್ಷಗಳ ಕಾಲದಿಂದ ಚರ್ಚೆ ಮಾಡಿ ವಿಶ್ಲೇಷಣೆ ಮಾಡಿ ಮಾತನಾಡಿದಮೇಲೆ ಅದಕ್ಕೆ ಉತ್ತರ ವನ್ನು ಕೊಡಲಿಕ್ಕೆ ಸಮಯ ಮಾನ್ಯ ಮುಖ್ಯಮಂತ್ರಿಗಳಿಗೆ ಇರುವುದಿಲ್ಲ. ದಯವಿಟ್ಟು ಈ ಐದು ಬಜೆಟ್ ಗಳ ಚರ್ಚೆಯನ್ನು ಅವಲೋಕಿಸಿ ನೋಡಿ. ಬಜೆಟ್‌ಗೆ ಉತ್ತರ ಕೊಡುವ ದಿವಸ ಡೆಲ್ಲಿಗೆ ಹೋಗಿರು ತ್ತಾರೆ. ಐದು ವರ್ಷಗಳಿಂದ ಈ ರೀತಿ ನಡೆಯುತ್ತಲೇ ಇದೆ.

ನಾಳೆಯೂ ಅದೇ ನಡೆಯುತ್ತದೆ. ಅವರಿಗೆ ಉತ್ತರ ಕೊಡತಕ್ಕ ಅವಕಾಶ ಇರುವುದಿಲ್ಲ. ಅವರು ಡೆಲ್ಲಿಗೆ ಹೋಗಬೇಕಾಗುತ್ತದೆ. ಅದಕ್ಕಾಗಿ ನಾಳೆ ಮಾರ್ನಿಂಗ್ ಸೆಷನ್ ಮಾಡುತ್ತಿದ್ದಾರೆ. ಕೊನೆಗೆ ಡೆಲ್ಲಿಗೆ ಹೋಗಬೇಕೆಂದು ಅವಸರದಲ್ಲಿ ಉತ್ತರಿಸಿ ಹೋಗುತ್ತಾರೆ. ಕರ್ನಾಟಕ ಜನರ ಸ್ಪಂದನ ಬಜೆಟ್ ಮೇಲೆ ಏನಿದೆ ಅದನ್ನು ಪ್ರತಿನಿಧಿಗಳಾದ ನಾವು ಪ್ರತಿಬಿಂಬಿಸುತ್ತೇವೆ. ಆದರೆ ಅದನ್ನು ಕೇಳತಕ್ಕ ಮತ್ತು ವಿಶೇಷಣೆ ಮಾಡತಕ್ಕ ಮತ್ತು ಜನಗಳ ಆಸೆ ಆಕಾಂಕ್ಷೆಗಳನ್ನು ಅರಿತು ಮುಂದೆ ಆಡಳಿತ ನಡೆಸತಕ್ಕ ವ್ಯವಧಾನ ಇದೇ ಇರತಕ್ಕ ಮುಖ್ಯ ಮಂತ್ರಿಗಳು ಅರ್ಥಶಾಖೆಯನ್ನು ವಹಿಸಿಕೊಳ್ಳತಕ್ಕ ಅವಶ್ಯಕತೆಯನ್ನು ಪ್ರಶ್ನೆ ಮಾಡಬೇಕಾದ ಪ್ರಸಂಗ ಬಂದಿದೆ. ಆದ್ದರಿಂದ ಇವತ್ತು ಈ ಬಜೆಟ್ಟನ್ನು ನೋಡಿದಾಗ ಅದು ಸಂಪೂರ್ಣವಾಗಿ ಅಸ್ಪಷ್ಟವಾಗಿದೆ. ಯಾವುದೇ ರೀತಿಯ ದೂರಾಲೋಚನೆ, ಯಾವುದೇ ರೀತಿಯ ವಿಜನ್, ಯಾವುದೇ ರೀತಿಯಲ್ಲಿ ಜನಗಳ ಆಸೆ ಆಕಾಂಕ್ಷೆಗಳನ್ನು ಈಡೇರಿಸಿ ಅವರನ್ನು ಪ್ರಗತಿಪಥದಲ್ಲಿ ಕೊಂಡೊಯ್ಯು ತಕ್ಕ ಸೂಚನೆ ಕಾಣುತ್ತಿಲ್ಲ. ರಾಷ್ಟ್ರದ ವಿದ್ಯಮಾನದಲ್ಲಿ ಕೈಗಾರಿಕೆ ಅಥವಾ ಕೃಷಿ ಕ್ಷೇತ್ರದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮನ್ವಯತೆ ಹಾಗೂ ನ್ಯಾಯದ ದಾರಿಯಲ್ಲಿ ಕರ್ನಾಟಕ ರಾಜ್ಯದ ಜನತೆಯನ್ನು ಅಭಿವೃದ್ಧಿ ಪಥದಲ್ಲಿ ಸಾಗಿಸತಕ್ಕ ರೀತಿ ಕಾಣುತ್ತಿಲ್ಲ. ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಇಡೀ ಕರ್ನಾಟಕ ರಾಜ್ಯವನ್ನೇ ಒಂದು ರೀತಿಯ ಶೂನ್ಯದ ದೀಪವನ್ನಾಗಿ ಮಾಡಿಕೊಂಡು ಇವತ್ತು ಅಭಿವೃದ್ಧಿ ಯಿಂದ ವಂಚಿತರಾಗತಕ್ಕ ಪರಿಸ್ಥಿತಿ ಕರ್ನಾಟಕ ರಾಜ್ಯದ ಜನತೆಗೆ ಬರುವಂತಾಗಿದೆ. ಈ ರೀತಿಯಾಗಿ ಬಜೆಟ್ಟನ್ನು ವಿಶ್ಲೇಷಣೆ ಮಾಡಿದ್ದಾರೆ. ಕರ್ನಾಟಕ ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಯನ್ನು ನೋಡಿದಾಗ ಅದು ಸ್ಪಷ್ಟವಾಗಿ ಕಾಣುತ್ತಿದೆ ಎಂದರೆ ಅತಿಶಯೋಕ್ತಿ ಆಗಲಿಕ್ಕಿಲ್ಲ. ಆಯವ್ಯಯ ಪತ್ರ ಆಕಸ್ಮಿಕವಾದ ಅವಗಡದ ಕೂಸಲ್ಲ. ಪಂಚವಾರ್ಷಿಕ ಯೋಜನೆಯ ಚೌಕಟ್ಟಿನಲ್ಲಿ ಈ ಒಂದು ವಾರ್ಷಿಕ ಆಯವ್ಯಯವನ್ನು ಚೊಕ್ಕವಾಗಿ ಸರಿಯಾಗಿ ವ್ಯವಸ್ಥೆಗೊಳಿಸಿ ರಚಿಸತಕ್ಕ ಚಾಣಾಕ್ಷತನ ಮತ್ತು ಆ ರೀತಿಯ ಕಲೆ, ಜಾಣ್ಮೆ, ಸೂಕ್ಷ್ಮತೆ ಇದನ್ನು ಕಾಣಬೇಕೇ ಹೊರತು, ಫೆಬ್ರವರಿ ಅಥವಾ ಮಾರ್ಚ್‌ ನಲ್ಲಿ ರಸೀಟ್ಸ್ ಮತ್ತು ಪೇಮೆಂಟ್ಸ್ ಅಥವಾ ಫೆಬ್ರುವರಿ ಮಾರ್ಚಿನಲ್ಲಿ ಒಂದು ರೀತಿಯ ಕಾಗದದಲ್ಲಿ ಹಣವನ್ನು ಜೋಡಣೆ ಮಾಡತಕ್ಕ ಅವಗಡದ ಆಕಸ್ಮಿಕವಾದ ಘಟನೆಯಾಗಿ ಇದು ಪರಿಣಾಮ ವಾಗಬಾರದು. ಇದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಇದರಿಂದ ಪರಿಣಾಮ ಏನಾಗುತ್ತದೆ ಎಂಬುದನ್ನು ಪ್ರತಿ ವರ್ಷ ನೋಡುತ್ತಿದ್ದೇವೆ. ಪ್ರತಿ ಸಾರಿ ನಾನು ಈ ಬಗ್ಗೆ ರಿಪೀಟ್ ಮಾಡು ತ್ತಿದ್ದೇನೆ. ಇದರಲ್ಲಿ ಸತ್ಯಾಂಶ ಇದೆಯೋ ಇಲ್ಲವೋ ಎಂದು ನಮಗೂ ಅನುಮಾನ ಆಗತಕ್ಕ ಪ್ರಸಂಗ ಬರುತ್ತದೆ. ಏಕೆಂದರೆ ಪ್ರತಿ ವರ್ಷ ಇದೇ ರೀತಿ ನಡೆಯುತ್ತಿದೆ. ಯಾವುದರಲ್ಲಿ ಕೊರತೆ ಎಂದು ತೋರಿಸುತ್ತಾರೆ. At any point of time in the course of the financial year this is happening in all these four years. ೩೫೦–೪೦೦ ಕೋಟಿ ರೂಪಾಯಿಗಳ ಸಾಲದ ಕೊರತೆ ಇದ್ದಂತಹ ಅರ್ಥ ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಇರಬೇಕಾದರೆ ಯಾವ ರೀತಿ ಅಭಿವೃದ್ಧಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ ? ಹೀಗಾಗಿ ೪–೬ ತಿಂಗಳುಗಳಿಂದ ಯಾವುದೇ ರೀತಿಯ ಬಿಲ್ಲುಗಳು ಪ್ಲಾನ್‌ನಲ್ಲಾಗಲೀ ನಾನ್ ಪ್ಲಾನ್‌ನಲ್ಲಾಗಲಿ ಪೇಮೆಂಟ್ ಆಗುತ್ತಿಲ್ಲ. ೭೦ ಕೋಟಿ ರೂಪಾಯಿಗಳ ಬಿಲ್ ಕಂಟ್ರಾಕ್ಟರುಗಳಿಗೆ ಕೊಡತಕ್ಕದ್ದು ಬಾಕಿ ಇದೆ ಎಂದು ಆ ಸದನದಲ್ಲಿ ಲೋಕೋಪಯೋಗಿ ಸಚಿವರು ಒಪ್ಪಿಕೊಂಡಿದ್ದಾರೆ. ಅದೇ ರೀತಿ ಬೇರೆ ಬೇರೆ ಇಲಾಖೆಗಳಲ್ಲಿ, ಶಿಕ್ಷಕರಿಗೆ ಮತ್ತಿತರರಿಗೆ ಕೊಡಗೆ ಕೆಲಸಗಳೆಲ್ಲಾ ಪೂರ್ತಿ ಸ್ಥಗಿತವಾಗಿವೆ. ೪–೫ ನೂರು ಕೋಟಿ ರೂಪಾಯಿ ಕೆಲಸ ೪–೫ ತಿಂಗಳಲ್ಲಿ ಆಗಬೇಕಾದುದು ನಿಂತು ಹೋಗಿದೆ. ಲೆಕ್ಕಪತ್ರವನ್ನೇನೋ ಆಯವ್ಯಯದ ಮಟ್ಟಿಗೆ ಸರಿದೂಗಿಸಬಹುದು. ಆದರೆ ೪–೫ ನೂರು ಕೋಟಿ ರೂಪಾಯಿ ಪ್ಲಾನ್ ಅಥವಾ ನಾನ್ ಪ್ಲಾನ್‌ನಲ್ಲಿ

ಇನ್‌ವೆಸ್ಟ್‌ಮೆಂಟ್ ಏನಿದೆ ಅದು ಇಡಿ ಕರ್ನಾಟಕದ ಸಂಪೂರ್ಣ ಜನತೆಯ ಪ್ರಗತಿಯ ವ್ಯವಸ್ಥೆಗೆ ಹೋಗಬೇಕು ಅದನ್ನು ಅಪಹರಿಸತಕ್ಕ, ಹಾಗೂ ಜನತೆಯನ್ನು ವಂಚಿಸತಕ್ಕ ಪ್ರಯತ್ನ ಮಾಡಿದರೆ ಅದಕ್ಕಿಂತ ದೊಡ್ಡ ದ್ರೋಹ ಕರ್ನಾಟಕ ರಾಜ್ಯಕ್ಕೆ ಮತ್ತೊಂದು ಇಲ್ಲವೆಂಬುದನ್ನು ಯಾವಾಗಲೂ ಮರೆಯುವುದಕ್ಕೆ ಸಾಧ್ಯವಿಲ್ಲ. ನಾನು ಅನೇಕ ಸಾರಿ ಅಂಕಿ ಸಂಖ್ಯೆಗಳನ್ನು ರಿಪೀಟ್ ಮಾಡಿದ್ದೇನೆ. ೬ನೇ ಯೋಜನೆಯಲ್ಲಿ ೫.೯ ಪರ್ಸೆಂಟ್ ರಾಷ್ಟ್ರದ ಯೋಜನೆಗೆ ನಮ್ಮದು ಕಾಂಟ್ರಿಬ್ಯೂಷನ್ ಇದ್ದರೆ ಈಗ ಅದು ೪.೫ ಪರ್ಸೆಂಟಿಗೆ ಇಳಿದಿದೆ. ಒಂದು ಪರ್ಸೆಂಟ್ ಎಂದರೆ it comes to about Rs. 1000 crores. For five years, we have lost. ಆದ್ದರಿಂದ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಯು.ಕೆ.ಪಿ. ಯೋಜನೆಯಲ್ಲಿ ಅಥವಾ ಬೇರೆ ಯಾವುದೇ ಯೋಜನೆಯಲ್ಲಿ ಖರ್ಚು ಮಾಡಬೇಕಾದಂಥ ಸಾಧ್ಯತೆ ಇರತಕ್ಕ ಸಂದರ್ಭದಲ್ಲಿ ಯೋಚನೆ ಮಾಡಬೇಕಾಗಿದೆ. ೨೦೦೦ ಎ.ಡಿ. ನಂತರ ಅಥವಾ ಅದಕ್ಕಿಂತ ಮೊದಲು ಯು.ಕೆ.ಪಿ. ಯೋಜನೆಯನ್ನು ಅಥವಾ ಬೇರೆ ಯೋಜನೆಗಳನ್ನು ಪೂರೈಸುವುದಕ್ಕೆ ಯಾವುದು ಸಾಧ್ಯವಿದೆ ಅದನ್ನು ನಾವು ನೋಡಬೇಕಾಗಿದೆ. ಭಾಷಣ ಪ್ರಾರಂಭ ಮಾಡುವಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾ ಪರಿಷತ್ತಿನ ವಿಚಾರ ಮತ್ತು ಮಂಡಲ ಪಂಚಾಯಿತಿಗಳ ವಿಚಾರ ಹೇಳಿದರು. ೬೦ ಸಾವಿರ ಮಂದಿಯನ್ನು ಬೆಂಗಳೂರಿಗೆ ತಾವು ಕರೆಸಿದಿರಿ. ಅವರ ಕಣ್ಣಿನ ಥಳುಕನ್ನು ನೋಡಿ ತಮ್ಮ ಮೈ ಜುಮ್ ಎನ್ನಿಸಿರಬಹುದು. ಏಕೆಂದರೆ ೬೦ ಸಾವಿರ ಮಂದಿ ಚುನಾಯಿತ ಪ್ರತಿನಿಧಿಗಳು ಇವತ್ತು ಬೆಂಗಳೂರಿಗೆ ಬಂದಿದ್ದಾರೆ. ಹಿಂದೆ ಕೂಡ ಪಂಚಾಯಿತಿ ವ್ಯವಸ್ಥೆಯಲ್ಲಿ ಸಣ್ಣ ಸಣ್ಣ ಪಂಚಾಯಿತಿಗಳು ಇದ್ದವು. ತಾಲ್ಲೂಕು ಬೋರ್ಡುಗಳಿದ್ದವು. ಜಿಲ್ಲಾ ಬೋರ್ಡುಗಳಿದ್ದವು. ಕರ್ನಾಟಕದಲ್ಲಿ ನಾವು ಅದನ್ನು ಕಂಡಿದ್ದೇವೆ; ಅನುಭವಿಸಿದ್ದೇವೆ. ಗ್ರಾಮಾಂತರ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದ್ದೇವೆ ಪಂಚಾಯಿತಿ ಸದಸ್ಯರು. ತಾಲ್ಲೂಕು ಬೋರ್ಡ್ ಸದಸ್ಯರು ಮತ್ತು ಜಿಲ್ಲಾ ಬೋರ್ಡ್ ಸದಸ್ಯರು ಎಲ್ಲಾ ಸೇರಿಸಿ ಎರಡೂವರೆ ಮೂರು ಲಕ್ಷ ಮಂದಿ ಜನತಾ ಪ್ರತಿನಿಧಿಗಳು ಹಿಂದೆ ಇದ್ದರು. ಇವತ್ತು ದೊಡ್ಡ ಮೀನುಗಳನ್ನು ನುಂಗಿದವು ಎನ್ನುವಂತೆ ಮೂರು ಲಕ್ಷ ಮಂದಿಯನ್ನು ನುಂಗಿ ೬೦ ಸಾವಿರ ಮಂದಿ ಬಂದಿರಬಹುದು. ಜನತೆಯ ಹತ್ತಿರದಲ್ಲಿ ಕೆಲಸ ಮಾಡತಕ್ಕ ಜನರನ್ನು ಬಿಟ್ಟು ಸ್ವಲ್ಪ ವಿಶಾಲ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕ ಒಂದು ರೀತಿಯಲ್ಲಿ ಪಂಚಾಯಿತಿ ವ್ಯವಸ್ಥೆಯ ಸಿದ್ಧಾಂತವನ್ನು ಜಾರಿಗೊಳಿಸುವುದಾದರೆ ಆ ಪ್ರಯೋಗವನ್ನು ಮುಂದೆ ನೋಡಬೇಕಾಗುತ್ತದೆ. ಇದರ ಬಗ್ಗೆ ನಾನು ಹೆಚ್ಚು ವಿಸ್ತರಿಸುವುದಕ್ಕೆ ಹೋಗುವುದಿಲ್ಲ. ಈ ವರ್ಷ ಯೋಜನೆಗಳನ್ನು ಜಾರಿಗೆ ತರುವಾಗ ಜಿಲ್ಲಾ ಪರಿಷತ್ತಿಗೆ ಯೋಜನಾ ಡಾಕ್ಯುಮೆಂಟನ್ನು ೧೯೮೭-೮೮ ರದ್ದನ್ನು ಮಂಜೂರು ಮಾಡಿ ತಂದಿದ್ದೀರಿ, ಅದನ್ನು ನವೆಂಬರ್ ೮೬ರಲ್ಲಿ ಯೋಜನಾ ಆಯೋಗಕ್ಕೆ ಅರ್ಪಿಸಿದ್ದೀರಿ ಅದರ ಪ್ರಕಾರ 1987-88 would be a training period for both the Zilla Parishads & Mandal Panchayats ಎಂದು ಹೇಳಿದ್ದೀರಿ. ಆದ್ದರಿಂದ ಇದು ವಾಸ್ತವಿಕವಾಗಿ ಈ ವರ್ಷ ಜಾರಿಗೆ ಬರುವುದಿಲ್ಲ. ಇದನ್ನು ತಾವು ಗಮನಿಸಬೇಕು. ಈ ೬೦ ಸಾವಿರ ಜನ ಪ್ರೊಬೇಷನರ್‌ಗಳಿಗೆ ಕರ್ನಾಟಕದಲ್ಲಿ ಮಾಡಿದಂಥ ಪ್ರಯೋಗಗಳನ್ನು ರಾಜಕೀಯ, ಸಾಮಾಜಿಕ, ಆರ್ಥಿಕ ಪ್ರಯೋಗಗಳನ್ನು ಇಡೀ ರಾಷ್ಟ್ರದಲ್ಲಿ ಅನುಷ್ಠಾನ ಮಾಡಬೇಕೆಂದು ಹೇಳಿದರೆ ಹೇಗೆ ? ಒಂದು ಮಾತನ್ನ ತಮಾಷೆಯಾಗಿ ಹೇಳುವುದಾದರೆ ಸನ್ಮಾನ್ಯ ರಾಜೀವ್ ಗಾಂಧಿಯವರು ಹೇಳಬಹುದು, "Elected M.L.A s could be taken to Delhi and they could be put on probation for one year." ಎಂದು. ಅದನ್ನು ಮಾಡಬಹುದು. ಜನತೆಯಲ್ಲಿ ತಮಗೆ ವಿಶ್ವಾಸ ಮತ್ತು ನಂಬಿಕೆ ತಮಗಿದ್ದರೆ ೬೦ ಸಾವಿರ ಮಂದಿಯನ್ನು ಬೆಂಗಳೂರು ಅರಮನೆಯಲ್ಲಿ ಸೇರಿಸಿ ಅವರಲ್ಲಿ ಒಂದು ರೀತಿಯ ಪ್ರತಿನಿಧಿಗಳಾಗಿ ಕೆಲಸ ಮಾಡತಕ್ಕ ಪ್ರಜಾಪ್ರಭುತ್ವದ ಶಕ್ತಿಯನ್ನು ತಾವು ಎಬ್ಬಿಸತಕ್ಕ ಒಂದು ಪ್ರಾಮಾಣಿಕ ಕಳಕಳಿ ಅಥವಾ ಆಸಕ್ತಿ ತಮ್ಮಲ್ಲಿ ಇದ್ದಿದ್ದರೆ ಹೇಳಬಹುದಾಗಿತ್ತು. ನಾವು ತಕ್ಷಣ ಅಧಿಕಾರ ಹಸ್ತಾಂತರ ಮಾಡುತ್ತೇವೆ ಎಂದು ಹೇಳಿದ್ದೀರಿ ಬರೀ ರಾಜಕೀಯ ಅಧಿಕಾರ ಅಲ್ಲ. ಆರ್ಥಿಕ, ಸಾಮಾಜಿಕ ಅಧಿಕಾರವನ್ನು ಕೂಡ ಹಸ್ತಾಂತರ ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದರೆ ಜನತೆಗೆ ಅಧಿಕಾರ ಕೊಡುತ್ತಾರೆ ಎಂಬುದನ್ನು ನಂಬಬಹುದಾಗಿತ್ತು. ಆದರೆ ವಾಸ್ತವವಾಗಿ ಕಾರ್ಯಗತವಾಗುವಾಗ ಯಾವರೀತಿಯ ತೊಂದರೆಗಳು ಆತಂಕಗಳು ಬರುತ್ತದೋ ಯೋ ಅದನ್ನು ಪ್ರಯೋಗದಲ್ಲಿ ನಾವು ನೋಡಬೇಕಾಗಿದೆ. ಅದನ್ನು ನೋಡೋಣ. ಡಿಸ್ಟ್ರಿಕ್ಟ್ ಸೆಕ್ಟಾರ್‌ನಲ್ಲಿ ಪ್ರತಿನಿಧಿಗಳು ಏನು ಆಲೋಚನೆ ಮಾಡಿದ್ದಾರೆ. ಎಂದರೆ ಏನೋ ಹೊಸ ಹಣ, ವಿಶೇಷವಾದ ಸಂಪನ್ಮೂಲಗಳು ಬರುತ್ತವೆ, ವಿಶೇಷವಾದ ಸಂಪನ್ಮೂಲದಿಂದ ಹೊಸ ಕಾರ್ಯಕ್ರಮ

ಗಳನ್ನು ಹಾಕಿಕೊಳ್ಳುವುದಕ್ಕೆ ಸಾಧ್ಯ ಎಂದು. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯ ಗಳಿಗೆ ಏನು ಖರ್ಚಾಗಬೇಕೋ ಆ ಹಣಕ್ಕಿಂತ ಒಂದು ಕಿಲುಬು ಕೂಡ ಹೆಚ್ಚು ಬರುವುದಿಲ್ಲ. ಹಳ್ಳಿಗಳಲ್ಲಿ ಖರ್ಚು ಮಾಡತಕ್ಕದ್ದು ಏನು ಕಾಣುತ್ತದೆ ಅದಕ್ಕಿಂತ ಹೆಚ್ಚು ಆಗುವುದಿಲ್ಲ. ಡಿಸ್ಟ್ರಿಕ್ಟ್ ಸೆಕ್ಟಾರ್‌ನಲ್ಲಿ ಪ್ರಾವಿಜನ್ ಮಾಡಿದ್ದೀರಿ. ಆ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇದರ ಉದ್ದೇಶ ಜಿಲ್ಲಾ ಪರಿಷತ್ತು ಡಿಸ್ಟ್ರಿಕ್ಟ್ ಸೆಕ್ಟಾರ್‌ನಲ್ಲಿ ಬರುತ್ತದೆ. ೯೨೦ ಕೋಟಿ ರೂಪಾಯಿ ಗಳ ಯೋಜನೆಯನ್ನು ತಾವು ಪ್ರಪೋಸ್ ಮಾಡಿದ್ದೀರಿ. ಈಗ ಸದನದಲ್ಲಿ ಮಂಜೂರಾತಿ ಕೇಳಿರು ವಂತಹದ್ದು ೮೫೦ ಕೋಟಿ ರೂಪಾಯಿಗಳಿಗೆ. ಇಂದ ಮೇಲೆ ಪ್ರಪೋಸ್ ಮಾಡಿದ್ದ ಯೋಜನೆ ವೆಚ್ಚ ದಲ್ಲೂ ಕಡಿಮೆ ಮಾಡಿದ ಹಾಗೆ ಆಯಿತು. ಆದರೆ ೯೨೦ ಕೋಟಿ ಎಂದು ತೆಗೆದುಕೊಂಡರೂ ಅದರಲ್ಲಿ ಬಡ್ಜೆಟ್ ಪ್ಲಾನ್ ಡಾಕ್ಯುಮೆಂಟ್‌ನಲ್ಲಿ ಹೇಳಿರುವಂತೆ ೭೭೦-೮೦೦ ಕೋಟಿ ರೂಪಾಯಿಗಳು ಮಾತ್ರ. ಎಲ್ಲಾ ಜಿಲ್ಲೆಗಳ ಜಿಲ್ಲಾಪರಿಷತ್ತಿನ ಅಧ್ಯಕ್ಷರು ಹಾಗೂ ಮಂಡಲ್ ಪಂಚಾಯಿತಿ ಅಧ್ಯಕ್ಷರು ಯೋಜನಾ ಬಾಬಿನಲ್ಲಿ ಖರ್ಚು ಮಾಡುವುದಕ್ಕೆ ಶಕ್ತಿ ಇರುತ್ತದೆ. ಅದರಲ್ಲೂ ಕೂಡ ಶೇಕಡ ೩೦ ರಷ್ಟು ಹಣ ಒಟ್ಟು ಪ್ಲಾನ್‌ನಲ್ಲಿ ಡಿಸ್ಕ್ರಿಷನರಿ ಗ್ರಾಂಟ್ ಎಂದು ೧೯೮೭-೮೮ನೇ ಸಾಲಿಗೆ ಇಟ್ಟಿರುವಂತಹದ್ದು ಕೇವಲ ೭ ಕೋಟಿ ಮಾತ್ರ. ಈ ೭ ಕೋಟಿ ಹಣವನ್ನು ೧೯ ಜಿಲ್ಲೆಗಳಿಗೂ ಹಂಚಬೇಕು. ಇದು ತಾವು ನೀಡ ತಕ್ಕ ಡಿಸ್ಕ್ರಿಷನರಿ ಗ್ರಾಂಟ್. ನಂತರ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ಸುಮಾರು ೧೦೦೦ ಕೋಟಿಗೂ ಹೆಚ್ಚು ಬರಬಹುದು. ನಮಗೆ ಗೊತ್ತಿದ್ದ ಹಾಗೆ ಈ ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಎನ್ ಆರ್. ಇ.ಪಿ. ಹಾಗೂ ಆರ್ ಎಲ್ ಇ.ಜಿ.ಪಿ. ಕಾರ್ಯಕ್ರಮದಲ್ಲಿ ಒಂದೊಂದು ತಾಲ್ಲೂಕಿನಲ್ಲೂ ೩೦-೪೦ ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡುತ್ತಿದ್ದೆವು. ಒಂದೊಂದು ಗ್ರಾಮದ ಅಭಿವೃದ್ಧಿ ಕಾರ್ಯಕ್ರಮ ಗಳಿಗೂ ೫-೧೦ ಲಕ್ಷ ರೂಪಾಯಿಗಳವರೆಗೆ ಒಂದೊಂದು ವರ್ಷ ಖರ್ಚು ಮಾಡಿದ್ದೇವೆ. ತಾವು ಈ ವಿಚಾರವನ್ನು ಆಲೋಚನೆ ಮಾಡಬೇಕು. ಅದರ ಬಗ್ಗೆ ನಾನು ವಿಶೇಷವಾಗಿ ವಿಶ್ಲೇಷಣೆ ಮಾಡು ವುದಕ್ಕೆ ಹೋಗುವುದಿಲ್ಲ. ಅದರ ವಿವರ ಬಂದಾಗ ನಾನು ಆ ಬಗ್ಗೆ ವಿಶೇಷವಾಗಿ ಮಾತನಾಡುತ್ತೇನೆ. ಯಾವ ರೀತಿಯಲ್ಲಿ ಲೋಕಲ್ ಫೈನಾನ್ಸ್ ವ್ಯವಸ್ಥೆಯಲ್ಲಿ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ ಎಂಬುದಕ್ಕೆ ತಮ್ಮ ವರದಿ ಇಲ್ಲ. ಅದರ ಬಗ್ಗೆ ಅಧಿಕಾರಿಗಳ ಒಂದು ಸಮಿತಿಯನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರದವರು ಗಾಡ್ಗಿಲ್ ಫಾರ್ಮುಲಾ ಪ್ರಕಾರ ಯಾವ ರೀತಿ ವರ್ಗಾವಣೆ ಯನ್ನು ಮಾಡುತ್ತಿದ್ದಾರೋ ಅದೇ ಫಾರ್ಮುಲಾ ಪ್ರಕಾರ ಆಟೋಮ್ಯಾಟಿಕ್ ಆಗಿ ವರ್ಗಾವಣೆಯಾಗು ತ್ತದೆಂದು ಹೇಳಬಹುದು, that will not happen. ನಂತರ ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ೩೦ ಕೋಟಿ ರೂಪಾಯಿಗಳವರೆಗೆ ಬರುತ್ತದೆ. ೯೨೦ ಕೋಟಿ ರೂಪಾಯಿಗಳಲ್ಲಿ ನಾನ್ ಪ್ಲಾನ್ ಎಕ್ಸ್ ಪೆಂಡೀಚರ್ ಎಷ್ಟಾಗುತ್ತದೆಂಬುದು ಗೊತ್ತಿದೆ. ಅಲ್ಲಿ ಮುಖ್ಯ ಕಾರ್ಯದರ್ಶಿ, ಡೆಪ್ಯುಟಿ ಸೆಕ್ರಟರಿ ಎಲ್ಲಾ ಇರುತ್ತಾರೆ, A mini-Government will be created. ೩೭೦ ಕೋಟಿ ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಸೆಕ್ಟಾರ್‌ಗೆ ಏನು ಇಟ್ಟಿದ್ದೀರಿ, ಅದರಲ್ಲಿ ಬಹುತೇಕ ಅಮೌಂಟ್ ನಾನ್ ಡೆವಲಪ್‌ಮೆಂಟ್ ಹಾಗೂ ಅದರ ಮೈನ್‌ಟೈನ್‌ಗಾಗಿ ಖರ್ಚು ಮಾಡತಕ್ಕ ಪರಿಸ್ಥಿತಿ ಉದ್ಭವವಾಗುತ್ತದೆ. ೩೫೦ ಕೋಟಿ ಕೂಡ ನಮಗೆ ಸಿಕ್ಕುತ್ತಿಲ್ಲ. ಅದಕ್ಕೆ ಅಡಿಷನಲ್ ಸ್ಟಾಫ್ ಬೇಕು. ಇದನ್ನೆಲ್ಲಾ ನೋಡಿದರೆ ಕನಿಷ್ಠ ೨೦-೩೦ ಪರ್ಸೆಂಟ್‌ಗಿಂತ ಹೆಚ್ಚು ಖರ್ಚು ಮಾಡತಕ್ಕ ಪರಿಸ್ಥಿತಿ ಬಂದಾಗ ೪೫ ಪರ್ಸೆಂಟ್‌ವರೆಗೆ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗಾಗಿ ಖರ್ಚು ಮಾಡಬೇಕಾಗಿ ಬರುತ್ತವೆ. ಈ ರೀತಿ ಆದರೆ ಹೇಗೆ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಇವತ್ತು ಮಾಡುತ್ತಿದ್ದೀರಿ ಎಂಬುದಾಗಿ ಕೇಳಿದಾಗ ಹೇಳಬಹುದು ನಾವು ಒಂದು ಪ್ರಯೋಗ ಮಾಡಿದ್ದೇ ವೆಂದು. ಆದರೆ ಪ್ರಯೋಗವನ್ನು ಮಾಡತಕ್ಕ ಸಂದರ್ಭದಲ್ಲಿ ಅದರ ಹತೋಟಿ ತಮ್ಮ ಕೈಯಲ್ಲಿ ಇರ ಬೇಕಾಗುತ್ತದೆ. ಆರ್ಥಿಕ ವ್ಯವಸ್ಥೆಯನ್ನು ಹೇಗೆ ಮಾಡುತ್ತೀರಿ ? ರಾಜಕೀಯ ಅಧಿಕಾರವನ್ನು ಹೇಗೆ ವ್ಯವಸ್ಥೆ ಮಾಡುತ್ತೀರಿ ಎಂಬುದರ ಬಗ್ಗೆ ಇವತ್ತಿಗೂ ಕೂಡ You have not documented it. Except the law and the rules governing it we are still in confusion ಇಲ್ಲಿ ನಾವು ಬರೀ ಕಾನೂನನ್ನು ಇಟ್ಟುಕೊಂಡರಾಗುವುದಿಲ್ಲ. ಎಲ್ಲಾ ಅಧಿಕಾರಿಗಳೂ ಕೆಲಸವನ್ನು ಮಾಡಬೇಕಾಗುತ್ತದೆ. ಅಧಿಕಾರಿಗಳು ಮುಖಾಂತರ ಜಿಲ್ಲಾಪರಿಷತ್ತಿನ ಅಧ್ಯಕ್ಷರು ಹಾಗೂ ಮಂಡಲ್ ಪಂಚಾಯಿತಿ ಅಧ್ಯಕ್ಷರು ಕೆಲಸವನ್ನು ಮಾಡಿಸಬೇಕಾಗಿದೆ. ಯಾವ ರೀತಿ ಯಲ್ಲೂ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ರೂಪರೇಷೆಗಳನ್ನು ಕೂಡ ಕೊಟ್ಟಿಲ್ಲ One year probationery Period ಎಂದು ಇವತ್ತಿನ ದಿವಸ ಸಹಜ

ವಾಗಿ ಹೇಳಿದ್ದೀರಿ. What will happen in next year and It is in utter confusion. ಸಾಮಾಜಿಕ ಹಾಗೂ ಆರ್ಥಿಕ ಅನುಕೂಲತೆಯನ್ನು ತೋರಿಸುವುದಕ್ಕಾಗಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳು ಅಥವಾ ಜನತಾ ಸರ್ಕಾರ ಏನುಮಾಡುತ್ತಿದೆ ಎಂದರೆ they are riding on a un-brided horse or on a horse which has gone amock. ಆ ರಥದ ಛಾಟಿ, ಲಗಾಮು ನಿಮ್ಮ ಕೈಯಲ್ಲಿ ಇದೆ ಎಂದು ಹೇಳಬಹುದು. ಆ ರಥ ಎಲ್ಲಿಗೆ ಹೋಗಿ ನಿಲ್ಲುತ್ತದೆಯೋ ಪರಮಾತ್ಮನೇ ಬಲ್ಲ. ಆದುದರಿಂದ ತಾವು ಏನು ಈ ಜಿಲ್ಲಾಪರಿಷತ್ತುಗಳ ವಿಚಾರದಲ್ಲಿ ಆಶಾಭಾವನೆಯನ್ನು ಜನರಲ್ಲಿ ಮೂಡಿಸುವುದಕ್ಕೆ ಪ್ರಯತ್ನ ಮಾಡಿದ್ದೀರೋ ಅದು ಪ್ರಾಮಾಣಿಕ ಆಗಿಲ್ಲ, ಅದರಲ್ಲಿ ಸತ್ಯಾಂಶ ಇಲ್ಲ ಇವತ್ತು ಗ್ರಾಮಾಂತರ ಪ್ರದೇಶದ ಜನರ ಅಭಿಪ್ರಾಯ if not more, atleast for one or two years that will be totally in a chaos and that will deteriorate. ಮತ್ತು ಯಾರ ಲಂಗೂ ಲಗಾಮೂ ಇಲ್ಲದೇ ಹುಚ್ಚು ಕುದುರೆಯಾಗಿ ಈ ಕರ್ನಾಟಕ ಹೋಗುತ್ತದೆಂಬುದನ್ನು ಇಲ್ಲಿ ವಿಶ್ಲೇಷಣೆ ಮಾಡಬೇಕಾಗಿದೆ, ವ್ಯವಸ್ಥಿತ ರೂಪದಲ್ಲಿ, ತಮ್ಮ ರಾಜಕೀಯ ಇಚ್ಛಾಶಕ್ತಿಯ ಮುಖಾಂತರ ಅದನ್ನು ನಿರ್ವಹಿಸುತ್ತೇವೆ, ನಿಭಾಯಿಸುತ್ತೇವೆ, ಎನ್ನುವ ಮಾತನ್ನು ಹೇಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಇಲ್ಲಿ ಹೇಳಬೇಕಾಗಿದೆ. ಸನ್ಮಾನ್ಯ ಮುಖ್ಯ ಮಂತ್ರಿಯವರು ಅನೇಕ ಸಂದರ್ಭಗಳಲ್ಲಿ ಕೇಂದ್ರ ಹಾಗೂ ರಾಜ್ಯಗಳ ಒಂದು ಸಂಘರ್ಷಣೆಯ ಸಮರದಲ್ಲಿ we want to be always active ಎಂದು ಹೇಳಿದ್ದಾರೆ ಕೆಲವು ಸಂದರ್ಭದಲ್ಲಿ ಅದಕ್ಕೆ ಏನಾದರೂ ಸಾಫ್ಟ್ ಪೆಡಲ್ ಡಿಕ್ಲೇರ್ ಮಾಡಬೇಕು. ಕಳೆದ ಬಡ್ಜೆಟ್‌ನಲ್ಲೂ ಇದೇ ಮಾಡಿ ಮತ್ತೆ ಈ ಸಾರಿಯೂ he has again declared a war. ಸುಮಾರು ೧೪ ಪ್ಯಾರಾಗ್ರಾಫ್‌ನಲ್ಲಿ ಸಂಪೂರ್ಣವಾಗಿ ಕೇಂದ್ರ ರಾಜ್ಯದ ಸಂಘರ್ಷಣೆ ಸಮರದ ಒಂದು ಸಂಕೇತಗಳು ಅಡಗಿವೆ. ಘೋಷಣೆಗಳು ಅಡಗಿವೆ ರಾಜಕೀಯ ಬ್ರಹ್ಮಾಸ್ತ್ರ ನನ್ನ ಕೈಯಲ್ಲಿ ಇದೆ ಎಂದು ಅವರು ಹೇಳಬಹುದು. You naturally as an experienced politician, may say that I could be the champion of this cause. Nothing wrong about it. ಇವತ್ತು ತಾವು ಚಾಂಪಿಯನ್ ಆಗಿದ್ದಿರಿ. National conclave of Opposition parties. ಮಾಡಲು ಹೊರಟಿರಿ. ಈಗ ನೋಡಿದರೆ ತಮ್ಮ ಜೊತೆ ಯಾರೂ ಉಳಿದಹಾಗೆ ಕಾಣುವುದಿಲ್ಲ. ಬೆಂಗಳೂರಿನಲ್ಲಿ, ವಿಜಯವಾಡದಲ್ಲಿ ಕಾನ್‌ಫರೆನ್ಸ್ ಮಾಡಿದಿರಿ. ಇದನ್ನು ಏಕೆ ನಿಲ್ಲಿಸಿ ಬಿಟ್ಟಿರೋ ನಮಗೆ ಗೊತ್ತಾಗುತ್ತಾ ಇಲ್ಲ. ತಮ್ಮ ಜೊತೆ ಅವರು ಯಾರು ಇಲ್ಲ. ಈಗ ನನಗನ್ನಿಸುತ್ತದೆ. ತಾವು ಕೇಂದ್ರ-ರಾಜ್ಯಗಳ ಸಂಘರ್ಷಣೆಗೆ ತಾವು ಈ ಸಮರವನ್ನು ಸಾರಿದ್ದೀರಿ. ಈ ಬಗ್ಗೆ ಹೊಸ ಸೈನ್ಯ ಕಟ್ಟಲು ವಿಚಾರ ಮಾಡುತ್ತೀರಿ. ನಾಳೆ ತಾವು ಡೆಲ್ಲಿಗೆ ಹೋಗುತ್ತಿದ್ದೀರಿ. ಮುಂದಿನ ತಮ್ಮ ಹೆಜ್ಜೆಯನ್ನು ನೋಡೋಣ. ಕಡಿಮೆ ಪಕ್ಷ ಎಂದರೆ ಎನ್. ಟಿ. ಆರ್. ಅವರು, ಪಶ್ಚಿಮ ಬಂಗಾಳದ ಜ್ಯೋತಿಬಸು ಅವರಾದರೂ ನಿಮ್ಮ ಜೊತೆ ಇರಬೇಕು. ಬರ್ನಾಲಾ ಅವರ ವಿಷಯ ಬಿಡಿ. ಶರದ್ ಪವಾರ್ ಅವರು ಇಲ್ಲವೇ ಇಲ್ಲ, ಫರೂಕ್ ಅಬ್ದುಲ್ಲಾ ಅವರೂ ಇಲ್ಲ. ಪಾಂಡಿಚೇರಿಯವರೂ ಕೂಡಾ ಇಲ್ಲ, ಎಂ.ಜಿ ಆರ್. ಅವರೂ ಬರುವುದಿಲ್ಲ. ಯಾರೂ ನಿಮ್ಮ ಜೊತೆ ಬರುವುದಿಲ್ಲವೆಂದರೆ ಹೇಗೆ? ಆದರೆ ನನಗನ್ನಿಸುತ್ತದೆ, ಎನ್.ಟಿ.ಆರ್. ಅಥವಾ ಜ್ಯೋತಿ ಬಸು ಅವರಾದರೂ ಕೂಡಾ ಈ ಕೇಂದ್ರ-ರಾಜ್ಯಗಳ ಸಂಘರ್ಷಣೆಯಲ್ಲಿ ನಿಲ್ಲುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಇವರ್‍ಯಾರೂ ತಮ್ಮ ಜೊತೆಯಲ್ಲಿ ಇಲ್ಲ. ಇವತ್ತು ತಮ್ಮ ರಾಜಕೀಯ ಬ್ರಹ್ಮಾಸ್ತ್ರ ಟುಸ್ ಆಗಿದೆ. ಏನೂ ಉಳಿದಿಲ್ಲ. ಆ ಬಿಸಿ, ಆ ಕಾವು ಇಲ್ಲ. ಆದರೆ ಒಂದು ಸಾಧನೆಯನ್ನು ಮಾಡಿದ್ದೀರಿ. ಸರ್ಕಾರಿಯಾ ಕಮಿಷನ್‌ನ್ನು ಸನ್ಮಾನ್ಯ ಪ್ರಧಾನಿಗಳು ನೇಮಕ ಮಾಡತಕ್ಕ ಪರಿಸ್ಥಿತಿ ಬಂತು. ಏಕೆಂದರೆ, It is natural that there is a response and he has responded to it. ಇವತ್ತು ಅದನ್ನೂ ನೇಮಕ ಮಾಡಿದ್ದಾರೆ. ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತೆ ನಾನು ಪ್ರತಿ ಪ್ಯಾರಾಗ್ರಾಫ್‌ನ್ನು ನಾನು ಪ್ರತ್ಯೇಕವಾಗಿ ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ, ಈಗ ಬ್ಯಾಂಕ್‌ಗಳ ಪರಿಸ್ಥಿತಿಯನ್ನು ನೋಡಿದರೆ

I have got this Economic Survey which is published by the Government of India. ಇದನ್ನು ಸ್ವಲ್ಪ ನೋಡಬೇಕು. ಏಕೆಂದರೆ ಈ ಬ್ಯಾಂಕುಗಳ ಬಗ್ಗೆ ನಿಮಗೆ ಸ್ವಲ್ಪ ಮಮತೆ ಜಾಸ್ತಿ. ಲೋನ್ ಮೇಳ ಎಂದು ಶ್ರೀ ಜನಾರ್ಧನ ಪೂಜಾರಿಯವರ ಬಗ್ಗೆ ದೊಡ್ಡ ಪುಸ್ತಕವನ್ನೇ ಅಚ್ಚುಮಾಡಿದ್ದಾರೆ. ನನಗನ್ನಿಸುತ್ತದೆ ಏನೆಂದರೆ, ಏನು ಪ್ರಚಾರ ಮಾನ್ಯ

ಜನಾರ್ಧನಪೂಜಾರಿ ಅವರಿಗೆ ಕೊಡಬಾರದು ಎಂದು ಮಾಡಿದ್ದರೋ, ಆದರೆ ಇದರಿಂದ ಅವರ ಪರ ವಾಗಿಯೇ ಹೆಚ್ಚು ಪ್ರಚಾರ ಸಿಗುತ್ತಾ ಇದೆ ಎಂದು ನನ್ನ ಭಾವನೆ. ಆದ್ದರಿಂದ ಇವತ್ತು ಏನು ಕರ್ನಾಟಕ ರಾಜ್ಯದಲ್ಲಿನ ಬ್ಯಾಂಕುಗಳು ಕರ್ನಾಟಕದ ಜನರಿಂದ ಹಣ ಡಿಪಾಸಿಟ್ ತೆಗೆದುಕೊಂಡಿದ್ದಾರೆ. Practically everything is spent in Karnataka. Deposits upto December 86 ie., Bank Deposits–Rs. ೩೭೬೭ Crores. ಆದರೆ ಪ್ರಾಕ್ಟಿಕಲ್ ಆಗಿ ಬ್ಯಾಂಕ್‌ಗಳು ಕ್ರೆಡಿಟ್ ಅನ್ನು ಕೊಟ್ಟು ಬಿಟ್ಟಿದ್ದಾರೆ. ೩೨೭೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. That means praclically everything is given. ಹೀಗಿರುವಾಗ ನಮ್ಮ ಬ್ಯಾಂಕುಗಳು ಜನರಿಂದ ಹಣ ತೆಗೆದುಕೊಳ್ಳುತ್ತವೆ, ಅದು ಎಲ್ಲೋ ಹೋಗುತ್ತದೆ, ಎಂಬ ವಾದ ಪತ್ರಿಕೆಯಲ್ಲಿ ನೋಡಿದಾಗ ಜನರಿಗೆ ಇದರಲ್ಲಿ ಏನೋ ಇದೆಯೆಂದು ಭಾಸವಾಗುವುದು ಸಹಜ ಎಕನಾಮಿಕ್ ಸರ್ವೆಯಲ್ಲಿ ಸ್ಪಷ್ಟವಾಗಿ ಇವತ್ತು ಇದನ್ನು ಕಾಣಿಸಿದ್ದಾರೆ. ಈ ಲೆಕ್ಕ ನೋಡಿದರೆ ಅನೇಕಬೇರೆಬೇರೆ ರಾಜ್ಯಗಳಲ್ಲಿ ಉತ್ತರ ಭಾರತದಲ್ಲಿರತಕ್ಕಂಥ ದಕ್ಷಿಣ ಭಾರತದಲ್ಲಿರತಕ್ಕಂಥ ಅನೇಕ ರಾಜ್ಯಗಳನ್ನು ಬಿಟ್ಟು ಉತ್ತರ ಪ್ರದೇಶವನ್ನು ಮಾತ್ರ ತೆಗೆದುಕೊಳ್ಳುತ್ತೇನೆ. ಏಕೆಂದರೆ ಇವರಿಗೆ ಯಾವಾಗಲೂ ಉತ್ತರ ಪ್ರದೇಶದ ಮೇಲೆ ಕಣ್ಣು. ಏಕೆಂದರೆ ನಮ್ಮ ಪ್ರಧಾನಿಯವರು ಈ ರಾಜ್ಯದಿಂದ ಬರತಕ್ಕದ್ದು. ಬೇರೆ ರಾಜ್ಯಗಳ ವಿವರ ಕೊಡುವುದಕ್ಕೆ ನಾನು ಹೋಗುವುದಿಲ್ಲ. ಉತ್ತರ ಪ್ರದೇಶವನ್ನೇ ತೆಗೆದುಕೊಂಡರೆ Deposit which was mobilised and bank credit given was Rs. 3524 Crores. That means not even half. This is in U.P. ಅರ್ಧಪಾಲು ಕೂಡ ಕ್ರೆಡಿಟ್‌ನ್ನು ಇನ್‌ವೆಸ್ಟ್‌ಮೆಂಟ್ ಮಾಡುತ್ತಿಲ್ಲ, ಆದರೂ ಕೇಂದ್ರ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ ಎಂದು ಭಾಷಣ ಮಾಡುತ್ತಾರೆ. ಉತ್ತರ ಪ್ರದೇಶದಲ್ಲಿ ಮಾಡಬಹುದಾಗಿತ್ತಲ್ಲಾ ? ಕರ್ನಾಟಕದಲ್ಲಿ ಏನು ಮಾಡಿದ್ದಾರೆ ? Practically ೦೦೦% of the bank deposits which was mobilised by the banks in Karnataka are reinvested here· ಇಲ್ಲಿ ಮಾಡಿದ್ದಾರೆ ತಮಿಳುನಾಡಿನಲ್ಲೂ ಅಷ್ಟು ಮಾಡಿಲ್ಲ. Even in Tamil Nadu, it is very much less. ಆದ್ದರಿಂದ ಈ ವಾದ ಖಂಡಿತವಾಗಿಯೂ ಸರಿ ಇಲ್ಲಯೆಂಬುದನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ೮೩ನೇ ಪುಟದಲ್ಲಿ ಸೆಕ್ಟೋರಲ್ ಡಿಪ್ಲಾಯ್‌ಮೆಂಟ್ ಬಗ್ಗೆ ಹೇಳಲಾಗಿದೆ. ನಾನು ಎಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ. ಕೆಲವು ವಿಚಾರವನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದನ್ನು ಕೂಡ ಇವತ್ತು This is just to show how the priority sector advances in the Banks are given ಏಕೆಂದರೆ ಬ್ಯಾಂಕಿನವರು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಹಣ ಕೊಡುತ್ತಾರೆಯೇ ಹೊರತು ಪ್ರಿಯಾರಿಟಿ ಸೆಕ್ಟರ್‌ಗೆ ಕೊಡುವುದಿಲ್ಲ ಎಂಬ ವಾದವನ್ನು ಯಾವಾಗಲೂ ಮಾಡುತ್ತಾರೆ. ೪೨.೪ ಪರ್ಸೆಂಟ್‌ನ್ನು ಪ್ರಿಯಾರಿಟಿ ಸೆಕ್ಟರ್‌ಗೆ ಕೊಡಲಾಗಿದೆ. ಮೀಡಿಯಂ ಅಂಡ್ ಲಾರ್ಜ್ ಇಂಡಸ್ಟ್ರೀಸ್‌ಗೆ ೧೯೮೩–೮೪ರಲ್ಲಿ ೧೦.೧ ಪರ್ಸೆಂಟ್ ಇದ್ದರೆ ಈಗ ೦.೮ ಪರ್ಸೆಂಟ್. ಇದು ಪ್ರಿಯಾರಿಟಿ ಸೆಕ್ಟರ್ ಅಲಾಟ್‌ಮೆಂಟ್‌ನ್ನು ತೋರಿಸುತ್ತದೆ ಅಗ್ರಿಕಲ್ಚರಲ್ ಸೆಕ್ಟರ್, ಮೇಲೆ, ರೂರಲ್ ಸೆಕ್ಟರ್ ಮೇಲೆ, ಇವತ್ತು ಕೇಂದ್ರ ಸರ್ಕಾರದ ಆಡಳಿತ ಅವರ ಹತೋಟಿಯಲ್ಲಿದೆ. ಅಗ್ರಿಕಲ್ಚರಲ್ ಸೆಕ್ಟರ್, ರೂರಲ್ ಸೆಕ್ಟರ್ ಮೇಲೆ ಸ್ವಲ್ಪ ಹೇಳಬೇಕು, ಏಕೆಂದರೆ ಇದರ ಮೇಲೆ ಸಾಕಷ್ಟು ಪುಸ್ತಕಗಳನ್ನು ಅಚ್ಚುಹಾಕಿದ್ದಾರೆ. ಇನ್ನು ಈ ಪಬ್ಲಿಕ್ ಎಂಟರ್‌ಪ್ರೈಸಸ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಸಾಕಷ್ಟು ಸಂಶೋಧನೆ ಮಾಡಿದೆ. ಎಲ್ಲಿ ಈ ವಿಶ್ಲೇಷಣೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸಿಕ್ಕಿತು ಎಂದು ನಾನು ಬಹಳ ಹುಡುಕುತ್ತಿದ್ದೆ. ಆದರೆ Some private agencies, some monitoring agencies might have given the information. It is not a reliable information. Of course, I could not lay my hands on this. Public enterprises Survey Volume I – Which was published by the Government of India.

೨.೩೦ ಪಿ. ಎಂ.

ಅದರ ಪ್ರಕಾರ, ೧೯೮೪–೮೫ರಲ್ಲಿ, as per gross investment by public sector nndertakings, Karnataka stands at 11th place in the entire country.

Even in 1985-86 it maintains the same place. Investment by public sector undertakings in Karnataka in 1985-86 is 1542.14 crores. In 1984-85, it is Rs. 1327.53 crores. That means Rs, 200 crores more has been invested in 1985-86. Even in West Bengal, it is below that. In Kerala, it is below that. ಬಾಕಿ ಅನೇಕ ರಾಜ್ಯಗಳ ಪಿಚ್ಚರ್ ನನ್ನ ಹತ್ತಿರ ಇದೆ. ಆದ್ದರಿಂದ ಪಬ್ಲಿಕ್ ಸೆಕ್ಟರ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ಕೇಂದ್ರಸರ್ಕಾರ ಮಾಡುತ್ತಾ ಇಲ್ಲ ಎಂದು ಹೇಳುವುದು ಸರಿಯಲ್ಲ. ಪಬ್ಲಿಕ್ ಸೆಕ್ಟರ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ಸಾಧ್ಯ ಇದೆ. ಆ ವಾತಾವರಣವನ್ನು ತಯಾರು ಮಾಡಬೇಕಾಗುತ್ತದೆ. ಇನ್ನು ಪವರ್ ಬಗ್ಗೆ. ಕೈಗಾ ಅಣು ಸ್ಥಾವರ ಮಾಡಬೇಕೆಂದು ಹೇಳಿ, ಕೇಂದ್ರಸರ್ಕಾರ ಯೋಜನೆಯನ್ನು ಮಂಜೂರ್ಮಾಡಿದೆ. ಆದರೆ ಯಾರು ಆತಂಕ ಮಾಡುತ್ತಿದ್ದಾರೆ ಅವರಿಂದಲೇ ಜನತಾ ಲೆಜಿಸ್ಲೇಚರ್ ಪಾರ್ಟಿಯಲ್ಲಿ ಭಾಷಣ ಮಾಡಿಸುತ್ತೀರಿ. ಸೆಂಟ್ರಲ್ ಇನ್‌ವೆಸ್ಟ್‌ಮೆಂಟ್‌ಗೆ ಎಷ್ಟರ ಮಟ್ಟಿಗೆ ವಾತಾವರಣವನ್ನು ಕ್ರಿಯೇಟ್ ಮಾಡುತ್ತಿದ್ದೀರಿ. For thermal power plant, at any time they are prepared, but you have not located the place. ಇವತ್ತಿಗೂ ಇಂತಹ ಪ್ಲೇಸ್‌ನಲ್ಲಿ ಮಾಡಿ ಎಂದು ಕೇಂದ್ರಸರ್ಕಾರಕ್ಕೆ ಕಳುಹಿಸಿಲ್ಲ. ಕೈಗಾ ಅಣು ಸ್ಥಾವರಕ್ಕೆ ಸರಿಯಾದಂಥ ವಾತಾವರಣವನ್ನು ಕಲ್ಪಿಸಿಕೊಡಬೇಕು. ಇನ್ನು ಮಂಗಳೂರು ತೈಲಾಗಾರ ಕಾರ್ಯಗತ ಮಾಡಲು ಸರಿಯಾದ ಜಾಗವನ್ನು ಸಿದ್ಧತೆ ಮಾಡಿಲ್ಲ. ಅನೇಕ ಸದಸ್ಯರು ಭಾಷಣ ಮಾಡುತ್ತಾರೆ. ಭಾಷಣ ಮಾಡುವುದು ಸುಲಭ. ಸರಿಯಾದ ವಾತಾವರಣವನ್ನು ಒದಗಿಸತಕ್ಕ ಜವಾಬ್ದಾರಿ ರಾಜ್ಯಸರ್ಕಾರದ್ದು ಇದೆ. ಪ್ರಧಾನಿ ರಾಜೀವ್ ಗಾಂಧಿಯವರು ವೆಸ್ಟ್ ಬಂಗಾಳಕ್ಕೆಹೋಗುತ್ತಾರೆ, ರಾಜಾಸ್ಥಾನಕ್ಕೆ ಹೋಗುತ್ತಾರೆ. ಅನೇಕ ಸ್ಕೀಮ್ಸ್‌ಗಳನ್ನು ಅನೌನ್ಸ್ ಮಾಡುತ್ತಾರೆಂದು ಹೇಳುತ್ತಾರೆ. ಇದರ ಬಗ್ಗೆ ಒಂದು ವ್ಯಾಖ್ಯಾನ ಕೂಡ ಮಾಡಿದರು, ಅದರ ಬಗ್ಗೆ ಇಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಆದರೆ ಅವರು ಯಾವ ಯೋಜನೆಗಳನ್ನು ಮಂಜೂರ್ಮಾಡಿದ್ದಾರೆ. ಅವು ಎಲ್ಲವೂ 7ನೇ ಯೋಜನೆಯಲ್ಲಿ ಇವೆ. Red tapism. bureaucracy ಯಿಂದ ತಡೆ ಬರಬಾರದು ಸಂಬಂಧಪಟ್ಟ ಅಧಿಕಾರಿಗಳನ್ನು, ಸಂಬಂಧಪಟ್ಟ ವಿಜ್ಞಾನಿಗಳನ್ನು, ಸಂಬಂಧಪಟ್ಟ ತಜ್ಞರನ್ನು ಜೊತೆಯಲ್ಲಿ ಸೇರಿಸಿ, ಅಲ್ಲಿ ಒಂದು ನಿರ್ಣಯ ಮಾಡಿ, ಕೆಡಕನ್ನು ಬಗೆಹರಿಸಬೇಕು. Package approach for the clearance of schemes has been instituted by the Prime Minister. It has been instituted at the instance of Mr. Jyoti Basu who is the West Bengal Chief Minister. ಇವತ್ತು ವೆಸ್ಟ್ ಬಂಗಾಳ ಸರ್ಕಾರ, ಕೇಂದ್ರಸರ್ಕಾರದ್ದಲ್ಲ, ಅದು ಕಮ್ಯುನಿಸ್ಟ್ ಸರ್ಕಾರ. ಇದನ್ನು ಮರೆಯಬಾರದು.

ಏತಕ್ಕೆಂದು ಹೇಳಿದರೆ, ಈ ತರಹ ಮಾಡಿದರೆ, ಅಟ್ ಲೀಸ್ಟ್ ಟು ದಟ್ ಎಕ್ಸ್‌ಟೆಂಟ್ ರೆಡ್ ಟೇಪಿಸಮ್ ಕಡಿಮೆಯಾಗಬಹುದು. ಬ್ಯೂರಾಕ್ರಟಿಕ್ ಇನ್‌ಫ್ಲುಯೆನ್ಸ್ ಕಡಿಮೆಯಾಗಬಹುದು. ಈ ಪ್ರೊಸೆಸ್ ಇವತ್ತು ಮಾಡಬೇಕು ಎಂಬ ನಿರ್ಮಲಾಂತ, ಕರಣದಿಂದ ಪ್ರಧಾನಿಯವರು ಹೊರಟರೆ, ಅದರ ಮೇಲೆ ನೀವು ಟೀಕೆ ಮಾಡುತ್ತೀರಿ. ಈಗಲೂ ಕೂಡಾ ಕಾಲ ಮಿಂಚಿಲ್ಲ. ಕರ್ನಾಟಕದ ಯೋಜನೆಗಳನ್ನು ಸಿದ್ಧಪಡಿಸಿ, ವೇದಿಕೆಯನ್ನು ಸಿದ್ಧಪಡಿಸಿ. ಇಂತಹ ಯೋಜನೆಗಳನ್ನು ಸೆವನ್ತ್ ಪ್ಲಾನ್‌ನಲ್ಲಿ ಸೇರಿಸುವುದಕ್ಕೆ ಎಷ್ಟು ಪ್ರಯತ್ನ ಮಾಡಿದ್ದೀರಿ ? ಅದನ್ನು ಕ್ಲಿಯರೆನ್ಸ್ ಮಾಡುವುದಕ್ಕೆ ಎಷ್ಟರಮಟ್ಟಿಗೆ ಪ್ರಧಾನಿಯವರ ಹತ್ತಿರ ಮೀಟಿಂಗ್ ತೆಗೆದುಕೊಂಡಿರಿ. ಬರೀ ಭಾಷಣ ಮಾಡಿದರೆ ಸಾಲದು. ಕರ್ನಾಟಕದಲ್ಲಿ ಇಂತಹ ಯೋಜನೆಗಳು ಇದ್ದರೆ, ತಮ್ಮ ಹತ್ತಿರ ಇಂತಹ ಯೋಜನೆಗಳು ಇದ್ದರೆ, ಏಳನೇ ಯೋಜನೆಗೆ ಇಂತಹ ಯೋಜನೆಗಳನ್ನು ಸೇರಿಸುವುದು ಇದ್ದರೆ Please invite the Prime Minister to Karnataka. Let us have a package approach even for Karnataka so that we can have the projects for Karnataka. ಈ ಒಂದು ಮನೋಧರ್ಮ ಬೇಕು. ಕರ್ನಾಟಕದ ಜನರ ಹಿತಾಸಕ್ತಿಯನ್ನು ಈ ರೀತಿ ರಕ್ಷಣೆ ಮಾಡತಕ್ಕ ಮನೋಧರ್ಮ ಇರಬೇಕೇ ಹೊರತು. ಕರ್ನಾಟಕದ ಜನರನ್ನು ರಾಜಕೀಯ ಗೊಂದಲದಲ್ಲಿ ಸಿಲುಕಿಸಿ ಮುಳುಗಿಸತಕ್ಕಂಥ ಪ್ರಯತ್ನವನ್ನು ರಾಜಕೀಯ ಲಾಭಕ್ಕಾಗಿ ಮಾಡಿದರೆ, ಅದರಿಂದ ಯಾರಿಗೂ ಲಾಭ ಇಲ್ಲ. ಮುಂದೆ ಬರತಕ್ಕಂಥ ಪೀಳಿಗೆ ನಮ್ಮನ್ನು

ಹೀಯಾಳಿಸುತ್ತದೆ, ಇಂತಹ ಯೋಚನೆಯನ್ನೂ ಕೂಡಾ ಮಾಡುವುದಕ್ಕೆ ಬಾರದು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. Even in employment area as far as publi sector undertakings of Govt. of India is concerned Karnataka enjoys the p ime place. In the 5th plan, employment provided was 1·19 lakhs and in the 6th Five year Plan, we enjoy sixth place in providing employment to 1.18 lakh-. ಇನ್ನೂ ಬೇರೆ ಬೇರೆ ರೇಟ್ಸ್ ಇವೆ. ಇನ್ನು ರೀಜನಲ್ ಡೆವಲಪ್‌ಮೆಂಟಿಗೆ ಸಂಬಂಧಪಟ್ಟಂತೆ ತಾವು ಮೊದಲು ಅನೇಕ ರಾಜ್ಯಗಳ ಮಾಹಿತಿ ತಿಳಿದುಕೊಳ್ಳಬೇಕು ಆನಂತರ ಬೇಕಾದರೆ ಗಲಾಟೆ ಮಾಡಬಹುದು, ಘೋಷಣೆ ಮಾಡಬಹುದು, ಸಂಘರ್ಷಣೆಗೆ ಇಳಿಯಬಹುದು. ಹಿನ್ನೇ ಜಾಗದಲ್ಲಿದ್ದ ನಮ್ಮ ರಾಜ್ಯವನ್ನು ಒಂದನೇ ಸ್ಥಾನಕ್ಕೆ ತನ್ನಿ ಎಂದು ಸುಲಭವಾಗಿ ಹೇಳಬಹುದು. ದೇಶವನ್ನು, ಇಡೀ ಸಮಗ್ರ ರಾಷ್ಟ್ರವನ್ನು ಜೊತೆಯಲ್ಲಿ ಪ್ರಗತಿಯಮಾರ್ಗದಲ್ಲಿ ಕೊಂಡು ಹೋಗತಕ್ಕ ಜವಾಬ್ದಾರಿ ಇವತ್ತು ಕೇಂದ್ರ ಸರಕಾರದಮೇಲೆ ಇದೆ ನಿಮ್ಮ ಸರ್ಕಾರ ಬರಲಿ ಅಥವಾ ನಮ್ಮ ಪಕ್ಷದ ಸರಕಾರವೇ ಬರಲಿ ಈ ಜವಾಬ್ದಾರಿಯನ್ನು ಮರೆತು ಕೆಲಸ ಮಾಡಿದಾಗ ಏನು ಪರಿಣಾಮವಾಗುತ್ತದೆ ಎಂಬುದನ್ನು ಎಂದಿಗೂ ಕೂಡಾ ಮರೆಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆಂದು ಹೇಳಿದರೆ, ಎಂಪ್ಲಾಯ್‌ಮೆಂಟಿನಲ್ಲಿ ಕೂಡಾ ಪೊಟೆನ್‌ಷಿಯಲ್ ಇದೆ. ಬೇರೆ ಬೇರೆ ರಾಜ್ಯಗಳು, ಬಿಹಾರ, ಗುಜರಾತ್, ಹರ್ಯಾಣ-ಇಲ್ಲೂ ಕೂಡಾ ಇಷ್ಟು ಎಂಪ್ಲಾಯ್‌ಮೆಂಟ್ ಪೊಟೆನ್‌ಷಿಯಲ್ ಇಲ್ಲ. ಅಲ್ಲಿ ಕೂಡಾ ಜನ ಕೆಲಸ ಬೇಕೆಂದು ಹೇಳುತ್ತಿದ್ದಾರೆ. Regional balance has to be maintained. ಕರ್ನಾಟಕದಲ್ಲಿ ತಾವು ಬಹಳ ಹೆದರಿಸಿ ಬಿಟ್ಟಿದ್ದೀರಿ ಎಂದು ರಾಜೀವ್ ಗಾಂಧಿಯಾಗಲೀ ಅಥವಾ ಯಾರೇ ಪ್ರಧಾನಿಯಾಗಲೀ. ಅಲ್ಲಿ ಸಿಕ್ಕಾಪಟ್ಟೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಒಂದು ಸಿದ್ಧಾಂತವನ್ನು, ಇದೊಂದು ರಾಷ್ಟ್ರೀಯ ಸಿದ್ಧಾಂತವನ್ನು, ಇಡೀ ರಾಷ್ಟ್ರದ ಭಾವೈಕ್ಯತೆಯನ್ನು ಕಾಯ್ದುಕೊಂಡು, ಇಡೀ ರಾಷ್ಟ್ರದ ಸರಿಸಮಾನವಾದ ಅಭಿವೃದ್ಧಿಯನ್ನು ಸಾಧನೆ ಮಾಡಬೇಕಾದಂಥ ಈ ಸಿದ್ಧಾಂತವನ್ನು, ರಾಜಕೀಯಕ್ಕಾಗಿ ಬಲಿ ಕೊಡುವುದಕ್ಕೆ ಯೋಚನೆ ಕೂಡಾ, ರಾಜೀವ್ ಗಾಂಧಿಯವರಾಗಲೀ ಅಥವಾ ಯಾವುದೇ ಪ್ರಧಾನಿಯಾಗಲೀ ಮಾಡಲು ಸಿದ್ಧರಿಲ್ಲ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ.

ಇನ್ನು ಟ್ರಾನ್ಸ್‌ಫರ್ ಆಫ್ ಫಂಡ್ಸ್ ಬಗ್ಗೆ, ನಾನು ಈಗಲೇ ಅದನ್ನು ಮುಗಿಸಿ ಬಿಡುತ್ತೇನೆ. ಇದರಲ್ಲಿ ಪ್ರಮುಖವಾದಂಥ ವಿಚಾರ ಏನಿದೆ ಎಂದು ಹೇಳಿದರೆ, ತಾವು ಯಾವಾಗಲೂ ಕೂಡಾ ಕೇಂದ್ರದಲ್ಲಿ ನಮಗೆ ಹಣ ಕೊಡುತ್ತಿಲ್ಲ ಎಂದು ಹೇಳುತ್ತೀರಿ. ಅಲ್ಲಿ ಕೇಂದ್ರದ ಬೇರೆ ಬೇರೆ ಬಾಬುಗಳಿಂದ ಹಣ ಬರುತ್ತದೆ, ಎಲ್. ಐ ಸಿ. ಯಿಂದ ಬರುತ್ತದೆ, ಐ. ಸಿ. ಎಸ್. ನಿಂದ ಬರುತ್ತದೆ. ಪಿ. ಎಫ್ ನಿಂದ ಬರುತ್ತದೆ, ಸ್ಮಾಲ್ ಸೇವಿಂಗ್ಸ್‌ನಿಂದ ಬರುತ್ತದೆ. ಕೇಂದ್ರದ ಲೋನ್ಸ್ ಅಂಡ್ ಅಡ್ವಾನ್ಸಸ್ ಬಾಬತ್ತಿನಲ್ಲಿ ನಾವು ತೆಗೆದುಕೊಂಡರೆ. ಸುಮಾರು ೧೯೮೫-೮೬ರಲ್ಲಿ ರಸೀಟ್ಸ್ ಫ್ರಮ್ ದಿ ಸೆಂಟ್ರಲ್ ಗೌರ್ನಮೆಂಟ್ ಎಂದರೆ, ಇದರಲ್ಲಿ ಎಕ್ಸ್‌ಕ್ಲೂಡಿಂಗ್ ಸ್ಮಾಲ್ ಸೇವಿಂಗ್ಸ್, ಪಿ. ಎಫ್. ಲೋನ್ಸ್ ಅಂಡ್ ಅಡ್ವಾನ್ಸಸ್ ಫ್ರಮ್ ದಿ ಗೌರ್ನಮೆಂಟ್ ಆಫ್ ಇಂಡಿಯಾ ಫಾರ್ ೧೯೮೫-೮೬-೧೬೮೬.೮೪ ಕ್ರೋರ್ಸ್ ಬಂದಿದೆ.

In respect of receipts from the Central Government excluding Small Savings and Provident Fund, the opening balance was Rs. 1851 crores. In the next year, it was Rs. 1686.84 crores. In this, we got Rs 217 crores in the form of overdraft. It wats an advance which was paid to us. The Budget propsal for 1984—85 was Rs. 1346 84 crores This is from the Government of India and various other institutions sponsored by the Government of India. This is excluding Small Savings and Provident Fund. The estimate for 1986—87 of Rs 1118 crores may be more than 1400 crores. It might have been including the advance given to drought and many other items. It also included funds from NABARD, Reservebank of

India and other nationalised Banks. ಕೇಂದ್ರ ಸರ್ಕಾರ ೧೫೦ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟರು, ೧೮೦ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟರು ಎಂದು ನೀವು ಯಾವಾಗಲೂ ಚಾಲೂಕು ಮಾತುಗಳನ್ನು ಹೇಳುತ್ತಿರುತ್ತೀರಿ. ಈ ಅಕೌಂಟ್ಸನ್ನು ನಾನು ಸೃಷ್ಟಿ ಮಾಡಿ ಹೇಳುತ್ತಿಲ್ಲ. ನೀವು ಕೊಟ್ಟಿರತಕ್ಕಂಥ ಡಾಕ್ಯುಮೆಂಟ್‌ನಲ್ಲಿಯೇ ಇದೆ. ಈ ಅಂಕಿ ಅಂಶಗಳನ್ನು ಹೊಸದಾಗಿ ಬ್ರಹ್ಮ ಸೃಷ್ಟಿ ಮಾಡಿ ಕೊಟ್ಟ ಅಂಕಿ ಅಂಶಗಳಲ್ಲ. You can just go through this document and ascertain as to how much you are getting per year. Now, I come to the financial management and repayment. In 1982—83 as against the receipt of 651.46 crores towards the advance and loans from the Government of India, the repayment was Rs. 504.97 crores. It is still more in 1981—82 i. e. Rs. 566 crores as against Rs. 632 crores. In respect of repayment, you mus be grateful to the Government of india, In 1984—85 as against the receipt of Rs. 1346 crores, you have repaid Rs. 994 crores. In the next year, as against the receipt of Rs. 1696 crores, you have repaid Rs. 1139 crores. ದಾವಾಪಿ ಪಬ್ಲಿಕ್ ಡೆಟ್ ಅನ್ನು ಜನರ ಮೇಲೆ ಹೇರಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಆದರೆ ಅದನ್ನು ಜಾರಿಸತಕ್ಕಂಥಾದ್ದು ಮಾಡಿಲ್ಲ. You have not managed your finances efficiently. In respect of Small Savings and Provident Fund, in 1982—83, the receipt was Rs. 51.80 crores, in 1983—84, it was Rs. 54 crores and in 1985—86 it was Rs. 69 crores and in 1986—87 it was Rs. 80 crores. ನೀವು ಎಷ್ಟು ಎಫೆಕ್ಟೀವ್ ಆಗಿ ಕೆಲಸ ಮಾಡಿದ್ದೀರಿ ಎಂಬುದು ಗೊತ್ತಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಸೆಂಟ್ರಲ್ ಇನ್‌ವೆಸ್ಟ್‌ಮೆಂಟ್ ಆಗಲಿ ಲೋನ್ ಆಗಲಿ, ಸೆಂಟ್ರಲ್ ಗೌರ್ನಮೆಂಟ್ ಸ್ಪಾನ್ಸರ್ಡ್ ಪಬ್ಲಿಕ್ ಇನ್‌ವೆಸ್ಟ್‌ಮೆಂಟ್ ಆಗಲಿ ಕರ್ನಾಟಕ ರಾಜ್ಯ ಯಾವಾಗಲೂ ಪ್ರಥಮ ಸ್ಥಾನದಲ್ಲಿಯೇ ಇದೆ. ಇದರಲ್ಲಿ ಎಳ್ಳಷ್ಟು ಅಸತ್ಯವಿಲ್ಲ. ಆದರೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಯಾವಾಗಲೂ ಮಲತಾಯಿ ಧೋರಣೆಯನ್ನು ತೋರಿಸಿಲ್ಲ, ತಾವು ಏನು ಆ ಒಂದು ವಾದವನ್ನು ಹೇಳುತ್ತೀರೋ ಅದು ಸತ್ಯಸಂಗತಿಯಲ್ಲ. ಇನ್ನು ಡೆವೊಲ್ಯೂಶನ್ ಆಫ್ ಫಂಡ್ ಬಗ್ಗೆ ತಮ್ಮ ಬಡ್ಜೆಟ್ ಭಾಷಣದಲ್ಲಿ ವಿವರವಾಗಿ ಕಾಣಿಸಿದ್ದೀರಿ. ಸರ್ಕಾರಿಯಾ ಕಮಿಷನ್ ನೇಮಕವಾದ ಬಗ್ಗೆ ತಾವು ಅದರ ವರದಿಯನ್ನು ನಿರೀಕ್ಷೆ ಮಾಡುತ್ತಿದ್ದೀರೆಂದು ಕಾಣುತ್ತದೆ.

ಎನ್. ಡಿ. ಸಿ. ಯಲ್ಲಿ ಗಾಡ್ಗಿಲ್ ಫಾರ್ಮುಲಾ ಸರಿಯಾಗಿಲ್ಲವೆಂದೂ ಬೇರೆ ಫಾರ್ಮುಲಾವನ್ನು ಅನುಸರಿಸಲು ನೀವು ಸಲಹೆ ಮಾಡಿತ್ತೀರೆಂದು ನಾನು ತಿಳಿದುಕೊಂಡಿದ್ದೆ. ಆದರೆ, ನೀವು ಅದನ್ನು ಮಾಡದೇ ಕರ್ನಾಟಕದ ಜನತೆಯನ್ನು ದಾರಿತಪ್ಪಿಸತಕ್ಕಂಥ ಪ್ರಯತ್ನವನ್ನು ಏಕೆ ಮಾಡುತ್ತೀರಿ ? ಎನ್. ಡಿ. ಸಿ, ಯಲ್ಲಿ ಗಾಡ್ಗಿಲ್ ಫಾರ್ಮುಲಾ ತಮಗೆ ಬೇಡದೇ ಇದ್ದರೆ ರಾಮಕೃಷ್ಣಹೆಗಡೆ ಎನ್ನುವ ಫಾರ್ಮುಲಾವನ್ನೇ ತಾವು ಕೊಡಿ. ಅದು ಇಡೀ ರಾಷ್ಟ್ರದ ಎಲ್ಲಾ ಪ್ರದೇಶಗಳಿಗೆ ಬ್ಯಾಲೆನ್ಸ್ಡ್ ರೀಜನಲ್ ಗ್ರೋತ್ ಆಗುವುದಿದ್ದರೆ ರಾಮಕೃಷ್ಣ ಹೆಗಡೆ ಎನ್ನುವ ಸೂತ್ರವೇ ಇರಲಿ, ಸನ್ಮಾನ್ಯ ಮುಖ್ಯ ಮಂತ್ರಿಯವರಿಗೆ ಎಲ್ಲಾವೂ ಗೊತ್ತಿದೆ. ಜನತಾ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಗಾಡ್ಗಿಲ್ ಫಾರ್ಮುಲಾನೇ ಇತ್ತು. ಗಾಡ್ಗಿಲ್ ಫಾರ್ಮುಲಾದಿಂದ ಜನರಿಗೆ ಬಹಳ ಅನ್ಯಾಯವಾಗುತ್ತದೆ ಎಂದಾದರೆ ತಾವೇ ಬೇರೆ ಫಾರ್ಮುಲಾವನ್ನೇ ಮಾಡಬಹುದಾಗಿತ್ತು. ಇನ್‌ಫ್ಯಾಕ್ಟ್, ಜನತಾ ಗೌರ್ನಮೆಂಟ್ ಅಧಿಕಾರಕ್ಕೆ ಬಂದ ಮೇಲೆ They have introduced another formul which gave more weightage to Northern States. The ITDT formula was just to distort the whole development. In 1980, the State Government did argue to give up that formula in the Sixth Five Year plan as it was it was going to destroy the balance of development of the states like Karnataka and many other States. The ITDT Formula was given up at the instance of late Prime Minister Smt. Indira Gandhi, In the NDC meeting, protest was

launched and it is our Government, Congress Government which got rid of that. We just set aside and Gadgil Formula was prevalent, otherwise, Uttar Pradesh and other States would have got more share to the detrimental interest of the Government of Karnataka.

ಇಡೀ ರಾಷ್ಟ್ರದ ಒಂದು ಸಮಗ್ರ ಅಭಿವೃದ್ಧಿ ದೃಷ್ಟಿ ಪ್ರಧಾನಿಯವರಿಗೆ ಇದೆ. ವಿಂಧ್ಯ ಪರ್ವತಕ್ಕೆ ಉತ್ತರದಲ್ಲಿರತಕ್ಕಂಥ ರಾಜ್ಯಗಳಿಗೆ ಮಾತ್ರ ಈ ಐ. ಟಿ. ಡಿ. ಪಿ. ಯೋಜನೆಯಿಂದ ಅನುಕೂಲ ವಾಗುತ್ತಿತ್ತು. ಇಡೀ ದಕ್ಷಿಣ ಭಾರತದ ಆರ್ಥಿಕ ವ್ಯವಸ್ಥೆಯನ್ನು ಅದಲು ಬದಲು ಮಾಡತಕ್ಕಂಥ ಫಾರ್ಮುಲಾ ಇವರು ತಂದಿದ್ದಂತ ಯೋಜನೆಯಲ್ಲಿ ಇತ್ತು ಅಧ್ಯಕ್ಷರೆ, Now, you say that schemes are thrust upon you. ನೀವು ಮಾಡಿ ಕಳುಹಿಸಿದ ಯಾವ ಯೋಜನೆಯನ್ನು ಕೇಂದ್ರದವರು ಕೈಬಿಟ್ಟಿದ್ದಾರೆ ಎಂಬ ಬಗ್ಗೆ ಒಂದು ಉದಾಹರಣೆಯನ್ನು ಕೊಡಿ. ಯೋಜನೆಗಳನ್ನು ಅಪ್ರೂವ್ ಮಾಡುವುದು ಕೇಂದ್ರ ಸರ್ಕಾರವಲ್ಲ, ಅಥವಾ ಎನ್.ಡಿ.ಸಿ.ಯೂ ಅಲ್ಲ. ಯೋಜನೆಗಳಿಗೆ ಒಪ್ಪಿಗೆ ಕೊಡುವವರು ಯೋಜನಾ ಆಯೋಗದವರು. There have been certain programmes which were there even before 1980 when Janatha Government was in power You again please refer to the speech of the late Prime Minister Indira Gandhi in the NDC wherein you will find that many of the useful schemes to the respective States were given up. For example, Handloom Project which was hundred percent Centrally sponsored scheme was given up. Even now there are certain States which are still hankering upon and arguing to take up those schemes which are useful to respective States, ಇವತ್ತು ಯಾವ ರೀತಿಯಲ್ಲಿ ಸ್ಕೀಮುಗಳು ಇವೆ ಎಂಬುದು ತಮಗೂ ಗೊತ್ತು. ಕರ್ನಾಟಕವನ್ನು ಬಿಟ್ಟು ಬೇರೆ ಯಾವ ರಾಜ್ಯಗಳಿಗೆ ಕೇಂದ್ರ ಸರ್ಕಾರದವರು ಹೆಚ್ಚು ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆ ಎಂಬುದನ್ನು ತಾವು ಹೇಳಬೇಕು. ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರದ ವಿವಿಧ ಯೋಜನೆಗಳಿಗೆ ಹಣ ಕೊಡಬೇಕಾದರೆ ಅದಕ್ಕೆ ಒಂದು ನೀತಿ ಇರಬೇಕಾಗುತ್ತದೆ. Even for drought, the Central Study Team applies certain criteria and norms. After discussion only they give this. ಈಗ ಕ್ರೈಟೀರಿಯಾ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ಕೆಲವು ಕ್ರೈಟೀರಿಯಾಗಳನ್ನು ಅಂದರೆ ಫೈನಾನ್ಸ್ ಕಮಿಷನ್‌ನವರು ತಿರಸ್ಕರಿಸಿದಂತಹವುಗಳನ್ನು ಕೇಂದ್ರ ಸರಕಾರ ಸ್ವೀಕಾರ ಮಾಡಿದೆ ಎಂಬುದನ್ನು ಹೇಳಿದ್ದೀರಿ. ಅದು ಯಾವುದು ಎಂಬುದನ್ನು ದಯಮಾಡಿ ಹೇಳಬೇಕು. ಯಾವ ಸ್ಕೀಮ್‌ನ್ನು ಫೈನಾನ್ಸ್ ಕಮಿಷನ್‌ನವರು ರಿಜೆಕ್ಟ್ ಮಾಡಿದ್ದನ್ನು ಕೇಂದ್ರ ಸರಕಾರ ಸ್ವೀಕಾರ ಮಾಡಿದೆ ಎಂಬುದನ್ನು ಕೂಡ ದಯಮಾಡಿ ಹೇಳಬೇಕು.

ಈಗ ಪರ್‌ಕ್ಯಾಪಿಟ ಔಟ್‌ಲೇ ಬಗ್ಗೆ ಕೂಡ ಹೇಳಿದ್ದೀರಿ. ಇವೊತ್ತು ರಾಷ್ಟ್ರಮಟ್ಟದ ರಾಜಕಾರಣಕ್ಕೆ ಹೋಗತಕ್ಕಂಥ ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಮಾತನ್ನ ಹೇಳಬಾರದು. ಈ ಮಾತನ್ನು ಅವರು ಡೆಲ್ಲಿಯಲ್ಲಿ ಹೇಳಬೇಕು. ಏಕೆಂದರೆ ಇವೊತ್ತು ಅನೇಕ ಬ್ಯಾಕ್‌ವರ್ಡ್ ಸ್ಟೇಟ್ಸ್ ಇವೆ. ಪರ್‌ಕ್ಯಾಪಿಟ ಔಟ್‌ಲೇಯನ್ನು ಇವೊತ್ತು ನಿಷ್ಕರ್ಷೆ ಮಾಡುವಾಗ ಗಾಡ್ಗೀಳ್ ಫಾರ್ಮುಲ ಪ್ರಕಾರ ಇದರ ವೈಟೇಜ್ ಎಲ್ಲಾ ಬ್ಯಾಕ್‌ವರ್ಡ್ ಸ್ಟೇಟ್ಸ್‌ಗೆ ಕೊಡಬೇಕೆಂದು ಹೇಳಿಲ್ಲ. ಯಾವ ವಾದವನ್ನು ಇವೊತ್ತು ನೀವು ಕರ್ನಾಟಕದಲ್ಲಿ ಮಾಡಬಹುದು, ಅದು ಸ್ವಾರ್ಥ ಮತ್ತು ಸಂಕುಚಿತ ಮನೋಭಾವನೆಯಿಂದ ಕೂಡಿದ್ದುದು. ರಾಷ್ಟ್ರೀಯ ಮನೋಭಾವನೆಯ ಮೇಲೆ ಹೋಗತಕ್ಕಂಥಾದ್ದನ್ನು, ಹೀಗೆ ರಾಷ್ಟ್ರ ನಾಯಕರು ಮಾಡುವುದಕ್ಕಾಗುವುದಿಲ್ಲ.

ಎನ್.ಡಿ.ಸಿ.ಯಲ್ಲಿ ಮಾತನಾಡಿದ್ದಾರೆ. ಬ್ಯಾಕ್‌ವರ್ಡ್ ಸ್ಟೇಟ್ಸ್‌ಗೆ ವಿಶೇಷ ಸವಲತ್ತುಗಳನ್ನು ಕೊಡಬೇಕೆಂದು ನಮ್ಮ ವಾದ ಇದೆ. Alright, what is best policy you tell me ?

Do you think that ITDT formula which was adopted during Charan Singh's period is the right policy which is going to give more weightage to the Northeren States? Do you want to repeat that?

ಶ್ರೀ ಎಸ್.ಆರ್. ಬೊಮ್ಮಾಯಿ.—ಅದರ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ಮುಖ್ಯಮಂತ್ರಿಯವರು ಕರ್ನಾಟಕದ ಪರವಾಗಿ ಏನು ವಾದವನ್ನು ಎನ್‌ಡಿಸಿಯಲ್ಲಿ ಮಾಡಿದ್ದಾರೆ ಅದರಲ್ಲಿ ಸ್ಪಷ್ಟವಾಗಿ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮುಖ್ಯಮಂತ್ರಿಯವರು ಸಂಕುಚಿತ ವಾದವನ್ನು ಮಾಡಿದ್ದಾರೆ ಎಂದು ನಾನು ಹೇಳುತ್ತೇನೆ. This argument cannot be accepted at the national plane. You have failed to present a proper document before the Finance Commission. You cannot derive political profit out of it.

ಶ್ರೀ ಎಸ್. ಆರ್. ಬೊಮ್ಮಾಯಿ.—ಕರ್ನಾಟಕಕ್ಕೆ ನ್ಯಾಯ ಆಗಬೇಕಾದುದನ್ನು ಹೇಳುತ್ತಿದ್ದಾರೆ....

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಿಂದ ಕರ್ನಾಟಕಕ್ಕೆ ನ್ಯಾಯ ಆಗುವುದಿಲ್ಲ. You have got to blame yourself when you have failed to effectively take up your case before the Finance Commission. ಫೈನಾನ್ಸ್ ಕಮಿಷನ್‌ನಿಂದ ನಷ್ಟ ಆಯಿತು, ತೊಂದರೆ ಆಯಿತು ಎಂದು ಹೇಳುತ್ತೀರಿ. ಯಾರಿಗೆ ಇದನ್ನು ಹೇಳುತ್ತಿದ್ದೀರಿ? ನಿಮ್ಮ ತಲೆಯ ಮೇಲೆ ನೀವೇ ಹೊಡೆದು ಕೊಳ್ಳುತ್ತಿದ್ದೀರಿ. You cannot blame the Central Government The Finance Commission has got independent power to suggest their own methods and methodology for devolution of funds. ನೀವು ಕೇಂದ್ರ ಸರಕಾರವನ್ನು ದೂರಲಿಕ್ಕೆ ಆಗುವುದಿಲ್ಲ. ತಮ್ಮ ಅಂಕಿ ಅಂಶಗಳ ಮುಖಾಂತರ, ಅದು ಕರ್ನಾಟಕ ರಾಜ್ಯದವರು ತಯಾರು ಮಾಡಿದಂತಹದ್ದನ್ನು ಫೈನಾನ್ಸ್ ಕಮಿಷನ್‌ನವರಿಗೆ ಕೊಡುತ್ತೀರಿ. ಆ ಅಂಕಿಅಂಶಗಳ ಪ್ರಕಾರ 20% is meant for poorer State whose per capita income is lower than the National per capita income. ಅದನ್ನು ಹೇಳಿ. ಅಂಕಿಅಂಶಗಳನ್ನು ತಯಾರು ಮಾಡುವುದರಲ್ಲಿ ಹೆಚ್ಚು ಕಡಿಮೆ ಇದ್ದರೆ ಅದನ್ನು ಸರಿಪಡಿಸೋಣ, ದುರಸ್ತಿ ಮಾಡೋಣ. ಈಗ ಈ ವಾದವನ್ನು ಇವೊತ್ತು ಏನು ಇಟ್ಟಿದ್ದೀರಿ ಅದು ವಿತ್ತಂಡವಾದವಾಗುತ್ತದೆಯೇ ಹೊರತು ಈ ವಾದ ಆರ್ಥಿಕ ದೃಷ್ಟಿಯಿಂದ ಸಂಪೂರ್ಣವಾದಂತಹ ನಿಷ್ಪಕ್ಷವಾದಂತಹ ಒಂದು ವಾದವನ್ನು ತಾವುಗಳು ಇಟ್ಟಹಾಗೆ ಖಂಡಿತಾ ಆಗುವುದಿಲ್ಲ. When compared to other States, ours is not as poor as other States. You substantiate your statement with facts and then we will say that we are lying with many other poorer States who are getting better weightage.

೧೯೮೧ರ ಪಾಪ್ಯುಲೇಷನ್ ಮೇಲೆ ತಾವು ಲೆಕ್ಕ ಹಾಕಿದ್ದೀರಿ. ಏಕೆಂದರೆ ಕೇಂದ್ರಕ್ಕೆ, ಕರ್ನಾಟಕದ ಜನಕ್ಕೆ ತೋರಿಸಬೇಕಲ್ಲ. In the Sixth and Seventh Five Year Plan, the devolution has taken place on the basis of 1971 census and not on 1981 census. ೧೯೮೧ರ ಪಾಪ್ಯುಲೇಷನ್ ತೆಗೆದುಕೊಂಡರೆ You will get less ಜಾಸ್ತಿ ಬರುವುದಿಲ್ಲ. Please go through the Table The average per capita has been worked out on the basis of 1981 population and not 1971. The whole devolution has taken place either in the Sixth Five Plan or in the Seventh Five year Plan. on the basis of 1971 population and not on the basis of 1981 population. ಇದನ್ನು ದಯವಿಟ್ಟು ತಾವು ಪುನಃ ಪರಿಶೀಲನೆ ಮಾಡಬೇಕು, ಸರಿಯಾದ ಚಿತ್ರವನ್ನು ಸದನದ ಮುಂದೆ ಇಡಬೇಕಾಗಿದೆ. Coming to

the deficit financing, either in the Nation or States, they live with deficit finance. ಡೆಫಿಸಿಟ್ ಫೈನಾನ್ಸ್ ಎಂದರೆ ಅದು ದೊಡ್ಡ ಶಾಪ, ಆದ್ದರಿಂದ ಅದನ್ನು ಮಾಡಲೇಬಾರದೆಂಬ ಕಾಲ ಹೊರಟು ಹೋಗಿದೆ ಅಧ್ಯಕ್ಷರೇ, ಇದರಲ್ಲಿ ನಾನು ಒಂದು ಹೇಳುವುದು ಕೇಂದ್ರ ಸರ್ಕಾರ ಡೆಫಿಸಿಟ್ ಫೈನಾನ್ಸ್ ಬಗ್ಗೆ ಯಾವ ಹತೋಟಿ ಇಟ್ಟುಕೊಂಡಿದೆಯೋ ಆ ಹತೋಟಿ ಯನ್ನು ಇಲ್ಲಿನ ಡೆಫಿಸಿಟಿ ಫೈನಾನ್ಸ್ ಬಗ್ಗೆ ನೀವು ಇಟ್ಟುಕೊಂಡಿದ್ದೀರಾ ಎಂಬುದನ್ನು ಅಂಕಿ ಸಂಖ್ಯೆಗಳ ಮೂಲಕ ಪ್ರತಿಪಾದಿಸಿ. I am referring to the Economic Survey 1986-87 of the Government of India, Page-82, Table 7.3. ಇಲ್ಲಿ ಯಾವ ರೀತಿ ಕಡಿಮೆ ಯಾಗಿದೆ ಎಂಬುದನ್ನು ನೋಡೋಣ. ಆ ರೀತಿ ಕಂಟ್ರೋಲ್ ಮಾಡಿದರೆ ಸರಿ, ನಾವು ಕೇಳುವುದಿಲ್ಲ. ಆದರೆ ಅಷ್ಟರ ಮಟ್ಟಿಗೆ ತಾವು ಅಭಿವೃದ್ಧಿಯ ರಥವನ್ನು ನಡೆಸಬಲ್ಲಿರಾ? This reflects, how they are controlling deficit finance in terms of total kitty, both Plan and Non-plan. In 1983-84, the variation in deficit finance was 17.5% whereas in 1985-86, the provisional was 13% and ended up with 9.3%. The Government of India did exercise control. In 1986-87, the variation in deficit finance came down to 13% from 7.5%. In the course of 2-3 years, they could bring it down ಆದ್ದರಿಂದ ಡೆಫಿಸಿಟ್ ಫೈನಾನ್ಸ್ ಮಾಡಿದರೂ ಕೂಡ ಸಂಪೂರ್ಣ ಹತೋಟಿ ಇಟ್ಟುಕೊಂಡು ಹಣಕಾಸಿನ ವ್ಯವಹಾರ ನಡೆಸುವ ಕೆಲಸ ಕೇಂದ್ರ ಮಾಡಿದೆ. ಅವರು ಮಾಡಿದ್ದಾರೆ. ಆದ್ದರಿಂದ ನಾನು ಮಾಡುತ್ತೇನೆಂದು ಎಂದು ಹೇಳಿ ನೀವು ತೆಪ್ಪಗೆ ಕೂತುಕೊಂಡರೆ ಕರ್ನಾಟಕದ ಜನರನ್ನು ತೃಪ್ತಿಪಡಿಸಲು ಸಾಧ್ಯವಾಗುವುದಿಲ್ಲ. ಅಭಿವೃದ್ಧಿ ಮತ್ತು ಅದರ ಜೊತೆಗೆ ಡೆಫಿಸಿಟ್ ಫೈನಾನ್ಸ್ ಎರಡೂ ಸಮನ್ವಯತೆ ಮಾಡಿ ಹಣಕಾಸಿನ ವ್ಯವಹಾರವನ್ನು ನಡೆಸುವುದರಲ್ಲಿ ಚಾಣಾಕ್ಷತನ ತೋರಿಸಬೇಕೇ ಹೊರತು ಅವರು ಮಾಡಿದ್ದಾರೆ ನಾನೂ ಮಾಡುತ್ತೇನೆ ಎಂದು ಹೇಳುವುದರಲ್ಲಿ ಅರ್ಥವಿಲ್ಲದ ವಾದ ಆಗುತ್ತದೆ ಅನ್ಯಥಾ ಅಲ್ಲ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. The deficit finance in the Government of India is mainly because of expenditure on Defence. Now, the financial position of the State Government ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. Let us see Accounts from 1983-84. ೧೯೮೪-೮೫ರವರೆಗೆ ಮಾತ್ರ ಕರೆಕ್ಟ್ ಅಕೌಂಟ್ಸ್ ಇದೆ.

ಇದರ ಬಗ್ಗೆ ನಾನು ಒಂದು ಚಿತ್ರವನ್ನು ತೋರಿಸುತ್ತೇನೆ. ರೆವಿನ್ಯೂ ಅಕೌಂಟ್ ಡೆಫಿಸಿಟ್ ಬಾಬ್ತಿನಲ್ಲಿ in 1983-84 minus 10-63, 1984-85 minus 97.36%, 1985-86 minus 71.55%...

೩-೦೦ ಪಿ ಎಂ.

೧೯೮೫-೮೬ರಲ್ಲಿ-೭೧.೫೫% ಆದರೆ ೧೯೮೬-೮೭ರ ಎಸ್ಟಿಮೇಟ್‌ನಲ್ಲಿ ತೋರಿಸಿದ್ದಾರೆ. Plus 149.34. That is going to be again minus. 87-88ರಲ್ಲಿ again it is 60 96% Is it the proper way of managing the finences ? Revenue account, the very foundation of our economic system, has been totally eroded Look back, at no time during our regime or my regime we ran even a pie of revenue deficit. It is all plus ನೀವು ಅಧಿಕಾರ ಕೈಗೊಂಡ ಕೂಡಲೇ you should run into revenue account deficit? ತಾವು ಏನು ಹತೋಟಿ ಇಟ್ಟು ಕೊಂಡ ಹಾಗೆ ಆಗಿದೆ? Even on capital account capital deficit in 83-84 is 65.51 in 84-85, it was minus 107.74. in 86-87, it was-259, and in 87-88, it was-197 86-87 it was 197, Over all deficit. ಕೂಡ ಅದೇ ಪರಿಸ್ಥಿತಿ ಇದೆ. Closing cash balance in 1983-84, it was 64-63; in 84-85, it was-195.21, in 85-86, it was-110 in

86-87, it was-39, In 87-88, it was-137. ಎಲ್ಲಾ ಮೈನಸ್ ಆಗಿ ಬಿಟ್ಟಿದೆ. This again does not refleet the true picture. I am culling out the figures from your own documents. ಅದನ್ನೇ ನೋಡಿದರೂ ಕೂಡ ಇವತ್ತು ಈಗ ಯಾವುದೇ ರೀತಿಯಾದಂತಹ ಒಂದು ಹತೋಟಿಯನ್ನು ತಾವು ಇಟ್ಟುಕೊಂಡಿಲ್ಲವೆಂದು ನಾನು ಹೇಳ ಬೇಕಾಗಿದೆ. ಇವತ್ತು ತಾವು mobilisation of resources ಕೂಡ ಏಕೆ ತಾವು ನಡೆಸುತ್ತಿಲ್ಲ ಎಂಬುದು ಅರ್ಥವಾಗುತ್ತಿಲ್ಲ ತಾವು ಬರೀ ಸೇಲ್ಸ್ ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ಹೇಳಿದ್ದೀರಿ, ಈಗ as late as February 1987, the latest figure of Sales Tax is+7.0%, as against 34 2% increase in 81-82. A similar 18% in 1980-81. ಅಧ್ಯಕ್ಷರೇ. ಈ ರೀತಿ ಫೈನಾನ್ಸ್ ಇವತ್ತು ನಿರ್ವಹಿಸಿಕೊಂಡು ಹೋದರೆ ಯಾವ ರೀತಿಯಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯ? Even entertainment tax, In 1986-87, it was 5.%, in 85-86. it was 11.1%, 84-85 it was 6,9%. ಈ ರೀತಿಯ ಒಂದು ನಿರ್ವಹಣೆಯಿಂದ ಇವತ್ತು ಕರ್ನಾಟಕ ರಾಜ್ಯದ ಒಂದು ಬೊಕ್ಕಸವನ್ನು ತಾವು ತುಂಬಲಿಕ್ಕೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. Even of excise collections, 81-82 percentage of annual growth rate ನೋಡಿ. Even ST you have given here. 81-82 it is 25.6%. We have managed it. In 82-83, it was 7.8% in 83-84, it was 17.4% in 84-85, it was 16.7% in 85-86, it was 9%.

ಎಲ್ಲಿ ಹೋಯಿತು ಈ ಹಣ ೨೫ ಪರ್ಸೆಂಟ್, ೯ ಪರ್ಸೆಂಟ್ ಅಂದರೆ that means crores and crores of rupees have gone.

ಆದರೆ ಈ ಹಣ ಎಲ್ಲಾ ಹೋಯಿತು? ಇವತ್ತು ತಾವು ಏನು ಟ್ಯಾಕ್ಸ್ ಹಾಕಿದ್ದೀರಿ ಅದರ ಇಮ್ಮಡಿ ಅದಕ್ಕಿಂತಲೂ ಮುಮ್ಮಡಿ ಇವತ್ತು ಹಣವನ್ನು ತಾವು ವಸೂಲು ಮಾಡತಕ್ಕಂತಹ ಕೆಲಸ ಉಳಿದಿದೆ. ಇವತ್ತು ಖಜಾನೆಯನ್ನು ಬರಿದು ಮಾಡಿಬಿಟ್ಟಿದ್ದೀರಿ. ನಾವು ಎಲ್ಲಾ ಇದು ಅವಲಕ್ಷಣ ವೆಂದು ಹೇಳುವುದಿಲ್ಲ. ಆದರೆ ನಿರ್ವಹಣೆ ಮಾಡತಕ್ಕಂತಹ ಒಂದು ರಾಜಕೀಯ ಇಚ್ಛಾ ಶಕ್ತಿ ಸಂಪೂರ್ಣವಾಗಿ ಅಲ್ಲಿ ಕಡಿಮೆಯಾಗಿದೆ. ಅಥವಾ ಶೂನ್ಯವಾಗಿದೆ ಎಂಬುದನ್ನು ಇವತ್ತು ನಾವು ಖಂಡಿತ ವಾಗಿಯೂ ಹೇಳಬೇಕಾಗಿದೆ. Machinery of collection has collapsed. There is a total demoralisation in the administration, That direction will have to be given by the political bosses. The party which is holding the reigns of the Government will have to give it.

Whether the Chief Minister or the Governement is holding the reigns of the Government or some invisible hands are exploiting it ? ಇನ್ನು Arrears ಬಗ್ಗೆ ಹೇಳಬೇಕಾದರೆ ೧೯೮೧ರಲ್ಲಿ ೫.೦೪ ಕೋಟಿ ಎಕ್ಸೈಸ್‌ನಲ್ಲಿ ಇತ್ತು. ಈಗ ಅದು ಮೂರು ನಾಲ್ಕು ವರ್ಷಗಳಲ್ಲಿ ೫೯ ಕೋಟಿಯಾಗಿದೆ, ಇವತ್ತು ಕೋರ್ಟಿನಲ್ಲಿ ಇದೆಯೆಂದು ಹೇಳಬಹುದು. ಹಿಂದೆ ಕೂಡ ಹೈಕೋರ್ಟ್ ಇತ್ತು. ಜಿಲ್ಲಾ ಪರಿಷತ್ ಮಂಡಲ ಪಂಚಾಯತಿ ಆದ ಹಾಗೆ ನಿನ್ನೆ ಮೊನ್ನೆ ಇದ ಪ್ರಾರಂಭವಾದುದಲ್ಲ ಹೈಕೋರ್ಟ್ ಆಗಲೂ ಇತ್ತು, ಈಗಲೂ ಇದೆ. ಇದೇ ರೀತಿಯಲ್ಲಿ ಸೇಲ್ಸ್ ಟ್ಯಾಕ್ಸ್‌ನಲ್ಲಿ ಕೂಡ ಹೆಚ್ಚಾಗಿದೆ. ೩೧-೩-೮೧ರಲ್ಲಿ ೪೪ ಕೋಟಿಯಿದ್ದರೆ it is Rs. 138.66 crores. ಆದ್ದರಿಂದ ಈಗ ೧೪೦ ಕೋಟಿಯಷ್ಟು ತೆರಿಗೆಯನ್ನು ಏಕೆ ಹಾಕಬೇಕು ? ವಾಟರ್ ರೇಟ್ ಏತಕ್ಕೆ ಹೆಚ್ಚು ಹಾಕಬೇಕು, ಟ್ಯಾಡಿಗೆ ಏಕೆ ಹೆಚ್ಚು ತೆರಿಗೆ ಹಾಕಬೇಕು, ಫರ್ಟಿಲೈಸರ್‌ಗೆ ಏಕೆ ಹಾಕಬೇಕು? ಈ ರೀತಿಯ ಕಾರ್ಯಕ್ರಮದಿಂದ ಅಥವಾ ಆರ್ಥಿಕ ವ್ಯವಸ್ಥೆಯಿಂದ ತಾವು ಖಂಡಿತವಾಗಿಯೂ ಸರಕಾರವನ್ನು ನಡೆಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನಿಮಗೆ ಇನ್ನೂ ಎಷ್ಟು ನಿಮಿಷ ಬೇಕು ?

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ೩-೩೦ಗೆ ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನಿಮಗೆ ೭೫ ನಿಮಿಷ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಪಾರ್ಟಿಯಿಂದ ಅಡ್ಜಸ್ಟ್ ಮಾಡೋಣ. ಅವಕಾಶ ಕೊಡಿ.

(ಶ್ರೀಮತಿ ಪುಷ್ಪಾವತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

SRI M. VEERAPPA MOILY.—This gives a total dismal picture A very simple example. Your overall deficit is Rs 147.95 crores. ಕಂಟ್ರಾಕ್ಟರ್ಸ್‌ಗೆ ಕೊಡತಕ್ಕಂತಹದ್ದು ೭೦ ಕೋಟಿ ರೂಪಾಯಿ ಬ್ಯಾಲೆನ್ಸ್ ಇದೆ. That mean. he has not presented a true picture of the deficit. That itself will come to Rs. 217.75 crores. Overdraft position ಬಗ್ಗೆ ಹೇಳಬೇಕಾದರೆ, ೧೯೮೫-೮೬ರಲ್ಲಿ ಕೇಂದ್ರ ತಮ್ಮ ಸಹಾಯಕ್ಕೆ ಬರದಿದ್ದರೆ there would have been total financial, constitutional crisis but for the rescue of the Government of India in 1985-86. ಈಗ ಮತ್ತೆ ಅದೇ ಪರಿಸ್ಥಿತಿ ಬಂದಿದೆ. ಮಾರ್ಚ್ ಕೊನೆಗೆ ಇನ್ನೂ ಹೆಚ್ಚಾಗುತ್ತದೆ. ಅದಕ್ಕೆ ನಾನು ಹೇಳುತ್ತಿದ್ದೇನೆ the deficit in the current running year will be not less than about Rs. 350to Rs. 400 crores. ಇಷ್ಟು ಕೊರತೆಯನ್ನು ಇಟ್ಟುಕೊಂಡು ಯಾವ ರೀತಿಯಲ್ಲಿ ಅಧಿಕಾರವನ್ನು ನಿಭಾಯಿಸುತ್ತೀರಿ ಎಂಬ ಪ್ರಶ್ನೆ ಇವತ್ತು ನಿಮ್ಮ ಮುಂದೆ ಇದೆಯೆಂದು ಹೇಳಲು ಇಚ್ಛಿಸುತ್ತೇನೆ. ಯಾವುದಾದರೂ ಅಭಿವೃದ್ಧಿ ಕೆಲಸಕ್ಕೆ ಹೆಚ್ಚಿನ ಹಣವನ್ನು ಒದಗಿಸುತ್ತಿದ್ದಾರೆಯೋ ಎಂಬುದನ್ನು ಕಂಡು ಹಿಡಿಯಲು ಇವತ್ತು ಕೆಲವು ಇಂಡಿಕೇಟರ್ಸ್ ಅನ್ನು ಇಟ್ಟುಕೊಂಡು ನೋಡಿದರೆ ಅದು ಕೂಡ ಖಂಡಿತವಾಗಿಯೂ ಇಲ್ಲ. ಯಾವಾಗಲೂ ಅನಾನುಕೂಲವಾದಾಗ ವರ್ಷೇ ವರ್ಷ ನಿಮ್ಮ ಕೆಲವು ಪುಸ್ತಕಗಳ ವೈಖರಿ ಬದಲಾವಣೆಯಾಗುತ್ತದೆ. ಇದರಲ್ಲಿ ಬಹಳ ಬುದ್ಧಿವಂತಿಕೆಯಿಂದ ಮಾಡಿದ್ದೀರಿ, ಪುಸ್ತಕ ಅಚ್ಚುಕಟ್ಟಾಗಿ ಪ್ರಿಂಟ್ ಮಾಡುವುದರಲ್ಲಿ ಫಿಗರ್ಸ್ ಅನ್ನು ಮ್ಯಾನಿಪ್ಯುಲೇಷನ್ ಮಾಡುವುದರಲ್ಲಿ ನಿಮ್ಮಷ್ಟು ಬುದ್ಧಿವಂತರು ಯಾರು ಇಲ್ಲವೆಂದು ನಿಮಗೆ ಶಿಫಾರಸ್ಸು ಮಾಡಬೇಕಾಗುತ್ತದೆ. ಏಕೆಂದರೆ, ನಾನು ನೋಡಿದ್ದೇನೆ ಈ ಕಾಲಂ ಪ್ಯಾಟ್ರನ್ ಆಫ್ ಅಕೌಂಟ್ಸ್ ಪ್ರಸೆಂಟೇಷನ್ ಕಳೆದ ವರ್ಷದಲ್ಲಿ ಇದ್ದದ್ದು ಈ ವರ್ಷ ಇಲ್ಲ. ಈಗ ಏನು ಮಾಡಿದ್ದೀರಿ ಎಂದರೆ you have merged the figure with some other. It is very difficult to go through it. ಅದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತದೆ. ೧೯೮೪-೮೫ರಲ್ಲಿ ಮೇಜರ್ ಅಂಡ್ ಮೀಡಿಯಮ್ ಇರಿಗೇಷನ್‌ನಲ್ಲಿ ಲೆಕ್ಕದ ಪ್ರಕಾರ ೮೪.೯೬ ಕೋಟಿ ರೂಪಾಯಿಗಳನ್ನು ಕೊಟ್ಟರು. what is provied is Rs. 87.82 crores. 86-87ರಲ್ಲಿ ೧೧೪.೪೦ ಕೋಟಿ ರೂಪಾಯಿಗಳು, ೮೭-೮೮ರಲ್ಲಿ ೭೮೭.೮೫ ಕೋಟಿ ರೂಪಾಯಿಗಳು. ತಾವು ಅದರ ಬಗ್ಗೆ ಎಷ್ಟರಮಟ್ಟಿಗೆ ಮಾಡುತ್ತೀರೋ ನನಗಂತೂ ಗೊತ್ತಿಲ್ಲ. ೮೫-೮೬ರಲ್ಲಿ ೧೨೭.೦೨ ಕೋಟಿ ರೂಪಾಯಿಯನ್ನು ಕೊಟ್ಟಿದ್ದೀರಿ. ೮೭.೮೨ ಕೋಟಿ you have provided because that has not been audited. It is not actual, it is epproximate, provisional figures. ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳಬೇಕಾಗಿದೆ. ಇದರಲ್ಲಿ ಯಾರೇ ಎಕ್ಸ್‌ಪರ್ಟ್ಸನ್ನು ಕೇಳಿದರೂ ಕೂಡಾ Minor Irrigation is the core of irrigation concept ಎಂದು ಹೇಳುತ್ತಾರೆ. Externally assisted projects, world bank assisted projects ಗಳಿವೆ. ೮೫-೮೬ರಲ್ಲಿ ೩೧.೧೩ ಕೋಟಿ ರೂಪಾಯಿ ೮೬-೮೭ ರಲ್ಲಿ ೩೬ ಕೋಟಿ ರೂಪಾಯಿ ಖರ್ಚಾಗಿರುವುದು Where is the growth rate ಎಲ್ಲಿ ಮೈನರ್ ಇರಿಗೇಷನ್‌ನಲ್ಲಿ ಹೆಚ್ಚು ಖರ್ಚು ಮಾಡಿದ್ದೀರಿ ತಾವು? Even in flood control ನಲ್ಲಿ ಗೊಂದಲ ಮಾಡಿದ್ದು ಮಾಡಿದ್ದೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ You have provided only 62 lakhs, 59 lakhs, 85 lakhs. ಮಾನ್ಯ ಕೃಷ್ಣಾರೆಡ್ಡಿಯವರು, ಮಂತ್ರಿಗಳು, ಭಾಷಣ ಮಾಡಿದ್ದು ಮಾಡಿದ್ದೇ sea erosion ಬಗ್ಗೆ...at least you could have asked for a loan. ಈ ಪ್ರೊಜೆಕ್ಟನ್ನು ಕೇಂದ್ರ ಸರ್ಕಾರದವರು ಹಾಕಿಲ್ಲ. ಇನ್ನು ಪವರ್ ಸೆಕ್ಟಾರ್‌ನಲ್ಲಿ ಕೂಡಾ ಏನು ಮಾಡುತ್ತೀರಿ ? ಅದರ ಲಾಸ್ ಬಗ್ಗೆ ಕಂಟ್ರೋಲ್ ಮಾಡಬೇಕಿತ್ತು. ಪವರ್ ಪ್ರಾಜೆಕ್ಟ್ ಬಗ್ಗೆ ಇಷ್ಟೆಲ್ಲಾ ಅಕೌಂಟ್‌ಗಳನ್ನು ಕೊಡುತ್ತಾರೆ. ಒಂದೊಂದು ರೀತಿಯಲ್ಲಿ ಒಂದೊಂದು ಸಾರಿ ಕೊಡುತ್ತಾರೆ. Even for the power projects your expenditure is ೧೬೦ ಕೋಟಿ ರೂಪಾಯಿ You have provided in 1984-85, whereas you have provided only around

146 crores in 1985-86, ಇದು ಕಡಿಮೆಯಾಗಿದೆಯೇ ಹೊರತು ಜಾಸ್ತಿಯಾಗುತ್ತಿಲ್ಲ. Of course you have said 208.56 crores. Even on small scale industries, during 84-85 you have provided Rs. 39 crores. In 85-86 you have given only Rs. 36 crores. It is less. ಈ ರೀತಿ ಅದರಲ್ಲಿ ಸಣ್ಣ ಕೈಗಾರಿಕೆಗಳು ಹೇಗೆ ಅಭಿವೃದ್ಧಿ ಆಗಬೇಕು ? Even for example housing, it is celebrated as Homeless people's year but what is the progress achieved ? ಅದಕ್ಕೆ ತಾವು ಕೂಡಾ ೮೪-೮೫ರಲ್ಲಿ ೩೩.೩೭ ಕೋಟಿ ಇಟ್ಟಿದ್ದು. ಮುಂದಿನ ವರ್ಷ ಮೂರು ಕೋಟಿ ರೂಪಾಯಿ ಕಡಿಮೆ ಆಯಿತು. ನಿಜವಾಗಿ ಪ್ರೊವೈಡ್ ಮಾಡಿದ್ದು ೨೧ ಕೋಟಿ ರೂಪಾಯಿ ಮಾತ್ರ. ೮೫-೮೬ರಲ್ಲಿ ೨೧ ಕೋಟಿ ರೂಪಾಯಿ, ಖರ್ಚು ಮಾಡಿದ್ದಾರೆ, ಮತ್ತೆ ೨೩ ಕೋಟಿ ರೂಪಾಯಿ, ಮತ್ತೊಂದು ಕಡೆ ೩೦ ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ. ಇದರ ನಿಘಂಟು ನೋಡಲಿಕ್ಕೆ ಆ ಪರಮಾತ್ಮನಿಗೆ ಒಬ್ಬನಿಗೇ ಗೊತ್ತು, ಸರ್ಕಾರದ ಲೆಕ್ಕಗಳು ಎರಡೆರಡು ಇದೆ. ಇದು ನೋಡಿದಾಗ ರಾಮನ ಲೆಕ್ಕ ಒಂದು, ಕೃಷ್ಣನ ಲೆಕ್ಕ ಒಂದು. ಈ ರೀತಿಯಾಗಿ ಲೆಕ್ಕಗಳನ್ನು ಏತಕ್ಕೆ ಇಡುತ್ತೀರಿ ? ಎರಡೆರಡು ಲೆಕ್ಕಗಳನ್ನು ಏತಕ್ಕೆ ಕೊಡಂತ್ತಾರೋ ನನಗಂತೂ ಗೊತ್ತಿಲ್ಲ. You must be honest in submitting a report. Alright if you say we are facing crisis. Face the challenge, take the people, the House into confidence and run the Governmemt. Then you will get all credit. ೮೬-೮೭ ರಲ್ಲಿ ೩೯.೭೯ ಕೋಟಿ ಪ್ರೊವೈಡ್ ಮಾಡಿದ್ದುದು. ನಿಜವಾಗಿ ಕೊಟ್ಟಿದ್ದು ೨೩.೫೦ ಕೋಟಿ During 87-88 what you have provided is 29.50 crores. ಜನರು ಮನೆ ಇಲ್ಲದೇ ನಿರ್ಗತಿಕರಾಗಿ ವಾಸ ಮಾಡುತ್ತಿದ್ದಾರೆ. ಅವರ ಬಗ್ಗೆ ಏನೂ ಆಶಾಭಾವನೆ ಏನೂ ಇಲ್ಲ. There is no message for them as far as homeless people of Karnataka is concerned. ವೆಲ್‌ಫೇರ್ ಆಫ್ ಎಸ್. ಸಿ, ಎಸ್. ಟಿ. ಮತ್ತು ಬಿ. ಸಿ. ಗಳ ಬಗ್ಗೆ ಹೇಳಬೇಕಾದರೆ ಇವರುಗಳನ್ನು ಡಿಕ್ಷನರಿಯಿಂದಲೇ ಅಳಿಸಿಬಿಟ್ಟಿದ್ದಾರೆ. ಅವರು ಮುಖ್ಯಮಂತ್ರಿಯಾಗಿ ಬಂದಮೇಲೆ ಬ್ಯಾಕ್‌ವರ್ಡ್ ಶಬ್ದದ ಚೈತನ್ಯವನ್ನೇ ಅಳಿಸಿ ಹಾಕಿಬಿಟ್ಟಿದ್ದಾರೆ.

ಆದುದರಿಂದ ಅದನ್ನು ತಾವು ಡಿಕ್ಷನರಿಯಲ್ಲಿ ಅಳಿಸಿಬಿಟ್ಟಿದ್ದೀರಿ ಎಂದು ಹೇಳಬೇಕಾಗಿದೆ. ಈ ಮೈನಾರಿಟೀಸ್ ಕಾರ್ಪೊರೇಷನ್ ಎಂದು ಏನು ಇದೆ ಇದು ಹೆಸರಿಗೆ ಮಾತ್ರ ಇದೆ. Not even a pie of loan given to minorities even to-day from this Corporation. ಈಗ ನೀವು ಎಸ್‌ಸಿ/ಎಸ್‌ಟಿ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗೆ ನೀವು ಕೊಟ್ಟಿರತಕ್ಕಂಥ ಹಣ ೧೯೮೪-೮೫ ರಲ್ಲಿ ೧೧.೪೬ ಕೋಟಿ. ೧೯೮೫-೮೬ ರಲ್ಲಿ ೧೧.೭೪ ಕೋಟಿ ರೂಪಾಯಿ. ಮತ್ತೊಂದು ಕಡೆ ೧೭.೮೧ ಕೋಟಿ ರೂಪಾಯಿಗಳು ಎಂದು ತೋರಿಸಿದ್ದೀರಿ. ಹಾಗೆಯೇ ೮೬-೮೭ ರಲ್ಲಿ ನೋಡಿದರೆ ೨೩-೭೩ ಕೋಟಿ ಇದೆ. ತಾವು ಎಸ್.ಸಿ ಮತ್ತು ಎಸ್.ಟಿ ಅವರನ್ನು ಬಹಳ ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. Look at this special programme for rural development. ಇನ್ನು ತಾವು ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳಿಗೆ ಹೆಚ್ಚು ಹಣ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಇದರ ಬಗ್ಗೆ ಸ್ಪೆಷಲ್ ಪ್ರೋಗ್ರಾಂ ಏನಾದರೂ ಹಾಕಿದ್ದೀರಾ ? ೧೯೮೪-೮೫ ರಲ್ಲಿ ಮತ್ತು ೧೯೮೫-೮೬ ರಲ್ಲಿ ೧೮.೭೫ ಕೋಟಿ ರೂಪಾಯಿಯನ್ನು ಸ್ಪೆಷಲ್ ರೂರಲ್ ಡೆವಲಪ್‌ಮೆಂಟ್ ಪ್ರೋಗ್ರಾಂಗೆ ಹಣ ಕೊಟ್ಟಿದ್ದೀರಿ. ಮತ್ತು ೧೯೮೬-೮೭ ಕ್ಕೆ ೧೬.೫೫ ಕೋಟಿ ರೂಪಾಯಿ ಮತ್ತು ಈಗ ೨೦.೭೧ ಕೋಟಿ ರೂಪಾಯಿ ಕೊಟ್ಟಿದ್ದೀರಿ. ಈಗ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗೆ ಎಷ್ಟು ಹಣ ಕೊಡಬೇಕೆಂಬುದು ನಿಮ್ಮ ತಲೆಗೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. Where is the message? Either you have not conveyed the message or they have not taken the message. There is total communication gap between what you said, what you say, what you shouted from big platform of Bangalore Palace and what is communicated to the people. ಇನ್ನು ರೂರಲ್ ಡೆವಲಪ್‌ಮೆಂಟ್‌ನಲ್ಲಿ ೮೫-೮೬ ಕ್ಕೆ ೫೯.೬೮ ಕೋಟಿ ರೂಪಾಯಿ, ಅದು ಆರ್‌ಎಲ್‌ಇಜಿಪಿ ನಲ್ಲೇ ಇರಬಹುದು ಮತ್ತೊಂದೇ ಇರಬಹುದು, ಪ್ರಾವಿಷನ್ ಮಾಡಿದ್ದೀರಿ. ಹಾಗೆಯೇ ೧೨.೬೧ ಕೋಟಿ ರೂಪಾಯಿಯನ್ನು ರೂರಲ್ ಡೆವಲಪ್‌ಮೆಂಟ್‌ಗೆ ಖರ್ಚು ಮಾಡುವುದಕ್ಕೆ

ನೀವು ಏನು ಹೇಳುತ್ತೀರಿ ಎಂದರೆ you are going to provide employment to them. ನೀವು ರೂರಲ್ ಡೆವೆಲಪ್‌ಮೆಂಟ್‌ಗೆ ೩೩.೭೫ ಕೋಟಿ ರೂಪಾಯಿ ಏನು ಕೊಡುತ್ತೀರಿ ಬಹುಶಃ ಅದು ಬ್ಲಾಕ್ ಗ್ರಾಂಟ್ ಆಗಿ ಇರಬೇಕು. ಅದನ್ನು ಡಿವೈಡ್ ಮಾಡಿದರೆ ಒಂದೊಂದಕ್ಕೂ ಕೋಟ್ಯಾಂತರ ರೂಪಾಯಿ ಬರುತ್ತದೆ. This is your provision for Zilla Parishad and Mandal Panchayat. ಇದರ ಬಗ್ಗೆ ವಿಕ್ರಮ ಸಾಧಿಸಿದ್ದೇವೆ ಎಂದು ಹೇಳುತ್ತಿದ್ದೀರಿ. ಇನ್ನು ಅಗ್ರಿಕಲ್ಚರ್ ಬಗ್ಗೆ ಹೇಳುವುದಾದರೆ, ಇದು ಕೋರ್ ಸೆಕ್ಟರ್ ಇದ್ದ ಹಾಗೆ. ಈ ಕೃಷಿ ಏನು ಇದೆ ಇದು ನಮ್ಮ ನಮ್ಮ ಕರ್ನಾಟಕದಲ್ಲಿ ರೈತರ ಜೀವನಾಳ ಇದ್ದ ಹಾಗೆ. Do you know the provision they have made this year? ಇನ್ನೂ ಮುಂದುವರೆದು ಹೇಳುವುದಾದರೆ, ೧೯೮೪-೮೫ ರಲ್ಲಿ ೪೧.೮೩ ಕೋಟಿ ರೂಪಾಯಿಗಳನ್ನು ತೋರಿಸಿದ್ದಾರೆ ಹಾಗೆಯೇ ೧೯೮೫-೮೬ ರಲ್ಲಿ ೧೧.೭೩ ಕೋಟಿ ರೂಪಾಯಿ ತೋರಿಸಿದ್ದಾರೆ. ಮತ್ತೊಂದು ೩೬.೫೫ ರೂಪಾಯಿ ಇದೆ. ಇವೆಲ್ಲಾ ಅಕೌಂಟ್‌ಗೆ ಬರಬೇಕು ಆವಾಗ ನಿಮ್ಮ ಚಿತ್ರ ಗೊತ್ತಾಗುತ್ತದೆ. ಒನ್‌ಸೈಡ್ ೧೩.೬೩ ಕೋಟಿ ರೂಪಾಯಿ ಅನದರ್ ಸೈಡ್‌ನಲ್ಲಿ ೩೯ ಕೋಟಿ ರೂಪಾಯಿ ಇದೆ ಹಾಗೆಯೇ ೧೯೮೬-೮೭ ರಲ್ಲಿ ೧೬.೧೧ ಕೋಟಿ ರೂಪಾಯಿ ತೋರಿಸಿದ್ದಾರೆ. ೧೯೮೭-೮೮ ರ ಡೆವಲಪ್‌ಮೆಂಟ್ ಸ್ಕೀಂನಲ್ಲಿ ಯು ಹ್ಯಾವ್ ಪ್ರೊವೈಡೆಡ್ ಎಂದು ಹೇಳಿದ್ದೀರಿ. I do not know where you are taking the people. ಇದನ್ನು ನೋಡಿದರೆ ನೀವು ಜನತೆಯನ್ನು ಯಾವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುತ್ತಿದ್ದೀರಿ ಅನ್ನುವುದು ಗೊತ್ತಾಗುತ್ತದೆ. ಎಕನಾಮಿಕ್ ಸರ್ವೆ ಆಫ್ ಇಂಡಿಯಾದಲ್ಲಿ ಪೇಜ್ ನಂಬರ್ ೩೧ ರಲ್ಲಿ ೧೯೮೬-೮೭ ರಲ್ಲಿ ನೀವು ಏನು ಮಾಡಿದ್ದೀರಿ ಅನ್ನುವುದು ಸ್ಪಷ್ಟವಾಗಿ ತೋರಿಸುತ್ತದೆ.

ಇನ್ನು ಡ್ರಾಟ್ ಬಗ್ಗೆ ಹೇಳುವುದಾದರೆ, ಕಳೆದ ಬಾರಿ ನಾನು ಮಾತನಾಡಿದ್ದೇನೆ. ಈ ಸಾರಿ ನೀವು ಅದರ ಬಗ್ಗೆ ವಿವರಗಳನ್ನು ಕೊಟ್ಟಿರುವುದು ಬಹಳ ಸಂತೋಷ. ತಮ್ಮ ಡ್ರಾಟ್ ಎಕ್ಸ್‌ಪೆಂಡೀಚರ್ ೮೪-೮೫, ೮೫-೮೬ ಮತ್ತು ೧೯೮೬-೮೭ ರಲ್ಲಿ ಎಷ್ಟು ಅನ್ನುವುದನ್ನು ಎಕನಾಮಿಕ್ ಸರ್ವೆನಲ್ಲಿ ಕೊಟ್ಟಿದ್ದೀರಾ ? ಅಲ್ಲಿಗೆ ಇದರ ಬಗ್ಗೆ ನಮ್ಮ ನಿಮ್ಮ ಚರ್ಚೆ ಮುಕ್ತಾಯವಾಯಿತು ಎಂದು ನಾನು ತಿಳಿದುಕೊಂಡಿದ್ದೇನೆ. ಏತಕ್ಕೆ ತಾವು ಈ ರೀತಿ ಕೊಟ್ಟಿದ್ದೀರೋ, ಇದನ್ನು ತಮ್ಮ ಗಮನಕ್ಕೆ ಬಂದು ಕೊಟ್ಟಿದ್ದೀರೋ ಅಥವಾ ಯಾರಾದರೂ ಬರೆದು ಕೊಟ್ಟಿದ್ದಾರೋ ಗೊತ್ತಿಲ್ಲ. ಆದರೆ ಇದರ ನಿಜ ಚಿತ್ರವನ್ನು ಕೊಟ್ಟಿದ್ದೀರಾ ? ೧೯೮೫-೮೬ರ ವರೆಗೆ ಡ್ರಾಟ್‌ಗಾಗಿ ತಾವು ಖರ್ಚು ಮಾಡಿರುವುದು ೧೪೪ ಕೋಟಿ ರೂಪಾಯಿ ಮೊನ್ನೆ ರಾಜ್ಯಪಾಲರ ಭಾಷಣದಲ್ಲೂ ಕೂಡ ನಾನು ಹೇಳಿದೆ. ತಾವು ಒಟ್ಟು ೫೩೧ ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ಮಾನ್ಯ ರಾಜ್ಯಪಾಲರ ಭಾಷಣದ ಸಮಯದಲ್ಲಿ ನಾನು ಇದನ್ನು ಹೇಳಿದಾಗ, ನನ್ನ ಮಾತನ್ನು ಅಲ್ಲಗಳೆದರು ಆಗ ನನಗೆ ೧೯೮೬-೮೭ ರಲ್ಲಿ ೩೦೦ ಕೋಟಿ ರೂಪಾಯಿಗಳನ್ನು ಬರಗಾಲಕ್ಕಾಗಿ ಖರ್ಚು ಮಾಡಿರಬಹುದೆಂಬ ಅನುಮಾನ ಬಂತು. ಆದರೆ ಈಗ ಇಲ್ಲಿ ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದಾಗ ಆ ದಿನ ನಾನು ಹೇಳಿದ್ದೇ ಸರಿಯಾಗಿದೆ. ಈಗ ನಿಜವಾದ ಚಿತ್ರ ಹೊರಗಡೆಗೆ ಬಂದಿದೆ. ಈ ಬಾಬಿಗೆ ರಾಜ್ಯ ಸರ್ಕಾರ ೧೯೮೬-೮೭ ರಲ್ಲಿ ಬಿಡುಗಡೆ ಮಾಡಿದ್ದು ೪೮ ೯೮ ಕೋಟಿ ರೂಪಾಯಿಗಳು. ಇದರ ಜೊತೆಗೆ ನೀವು ಬರಗಾಲದ ಕಾಮಗಾರಿಗಳಿಗೆಂದು ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಹಣ ಖರ್ಚು ಮಾಡಿದ್ದೀರಿ. ಈ ಬಾಬಿಗೆ ಕೇಂದ್ರ ಸರ್ಕಾರದವರು ಬಿಡುಗಡೆ ಮಾಡಿದ ಹಣ ೫೦ ಕೋಟಿ ರೂಪಾಯಿಗಳು. ಈ ಬಾಬಿನಲ್ಲಿ ಉಳಿದ ಹಣವನ್ನು ಅಕ್ಟೋಬರ್ ತಿಂಗಳ ನಂತರ ಖರ್ಚು ಮಾಡಿದ್ದೇವೆಂದು ತಾವು ಹೇಳಬಹುದು. ಈ ೫ ತಿಂಗಳುಗಳಲ್ಲಿ ನೀವು ೪೦ ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಿರಬಹುದೇ ಹೊರತು ೩೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಎಲ್ಲಿ ಸಾಧ್ಯವಾಗುತ್ತದೆ ? As against the Government of India's ceiling of Rs 50 crores you have spent only Rs.4[illegible].44 crores in 19[illegible]6-87. ಇದರ ಜೊತೆಗೆ ರಾಜ್ಯಸರ್ಕಾರದ ಹಣದಿಂದ ಅಂದರೆ ೪೮ ಕೋಟಿ ರೂಪಾಯಿಗಳಿಗೆ ಬದಲು ೨೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಇನ್ನೂ ೧೫೦ ಕೋಟಿ ರೂಪಾಗಳನ್ನು ಬಿಡುಗಡೆ ಮಾಡಿ ಎಂದು ನೀವು ಕೇಂದ್ರ ಸರ್ಕಾರದವರನ್ನು ಕೇಳಬಹುದಾಗಿತ್ತು. ನೀವು ಖರ್ಚು ಮಾಡಿದ್ದೇವೆ, ಹಣ ಬಿಡುಗಡೆ ಮಾಡಿ ಎಂದು ಹಠ ಮಾಡಬಹುದಾಗಿತ್ತು ಆದರೆ ನಾವು ಈ ಕೆಲಸ ನೀ ಮಾಡಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ತಾವು ಇದನ್ನು ತಿಳಿದುಕೊಂಡು ಮಾತನಾಡಿದ್ದರೆ ಅದು ಬೇರೆ ಮಾತಾಗುತ್ತಿತ್ತು. ತಾವು ಈ ಹಿಂದೆ ಅರ್ಥ ಮಂತ್ರಿಗಳಾಗಿದ್ದೀರಿ. ಆದ್ದರಿಂದ ಈ ಸೀಲಿಂಗ್‌ನ ಅರ್ಥ ನಿಮಗ

ತಿಳಿದಿರಬೇಕಾಗಿತ್ತು. ಈಗ ನಾವು ಈ ಬರಗಾಲ ಕಾಮಗಾರಿಗಳಿಗೆಂದು ಈ ಡ್ರಾಟ್ ರಿಲೀಫ್ ಕೆಳಗೆ ಏನು ಹಣ ಖರ್ಚು ಮಾಡುತ್ತೇವೆ, ಅದರ ಜೊತೆಗೆ ನಮ್ಮ ಪ್ಲಾನ್‌ನಲ್ಲಿಯೂ ಸಹ ಈ ಬಾಬಿಗೆ ಹಣವನ್ನು ಖರ್ಚು ಮಾಡುತ್ತೇವೆ. ಆದ್ದರಿಂದ ತಾವು ಪ್ಲಾನ್‌ನಲ್ಲಿ ಖರ್ಚು ಮಾಡಿರುವ ಹಣವನ್ನು ಈ ಲೆಕ್ಕಕ್ಕೆ ಸೇರಿಸಿಕೊಳ್ಳದಿದ್ದರೆ ತಮಗೆ ಸರಿಯಾದ ಚಿತ್ರ ಗೊತ್ತಾಗುವುದಿಲ್ಲ.ನಾವು ಇದು ಎರಡನ್ನೂ ಸೇರಿಸಿ ೫೩೫ ಇಲ್ಲವೇ ೫೩೬ ಕೋಟಿ ರೂಪಾಯಿಗಳು ಎಂದು ಹೇಳಿದ್ದು. ನಾವು ಖರ್ಚು ಮಾಡಿದಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಟ್ಟಿಲ್ಲ. ನಿಮ್ಮ ಕಾಲದಲ್ಲಿಯೂ ಸಹ ನೀವು ಖರ್ಚು ಮಾಡಿದಷ್ಟು ಹಣವನ್ನು ಕೊಟ್ಟಿಲ್ಲ. ಕೇಂದ್ರಸರ್ಕಾರದವರು ಈ ಬಾಬಿಗೆ ಹಣವನ್ನು ಸುಮ್ಮನೆ ಕೊಡುವುದಿಲ್ಲ. ಪ್ಲಾನ್ ಅಸಿಸ್ಟೆಂಟ್ಸ್‌ನಲ್ಲಿ ಅಡ್ವಾನ್ಸ್ ಆಗಿ ಕೊಡುತ್ತಾರೆ. ತಾವು ಅರ್ಥ ಮಂತ್ರಿಗಳಾಗಿದ್ದಿರಿ, ಆದ್ದರಿಂದ ತಮಗೆ ಇಷ್ಟೂ ಗೊತ್ತಿಲ್ಲವೇ ?

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಸಹ ಈ ಬಗ್ಗೆ ಸರಿಯಾಗಿ ತಿಳಿದುಕೊಂಡು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ತಮಗೆ ಇದು ಗೊತ್ತಿಲ್ಲದೆ ರಾಜಕೀಯ ಮಾಡಿದ್ದೀರಿ. ತಮಗೆ ಇದು ಗೊತ್ತಿದ್ದೂ ರಾಜಕೀಯ ಮಾಡಿದ್ದರೆ ನಾವು ಕನಿಕರ ಪಡಬಹುದಾಗಿತ್ತು. ಪ್ಲಾನ್‌ನಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ಮತ್ತು ನಾನ್‌ಪ್ಲಾನ್‌ನಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ಎಂಬ ವಿವರಗಳನ್ನು ಇಲ್ಲಿ ಕೊಟ್ಟಿದ್ದೀರಿ. ನೀವು ಪ್ಲಾನ್‌ನಲ್ಲಿ ಹಣ ಖರ್ಚು ಮಾಡಿದರೆ ಅದು ನಾರ್ಮಲ್ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಹೋಗುತ್ತದೆ. ನೀವು ಬರಗಾಲದ ಖರ್ಚಿನ ಬಗ್ಗೆ ಕೇಂದ್ರ ಸರ್ಕಾರದಿಂದ ಕ್ಲೇಮ್ ಮಾಡಬೇಕಾಗಿದ್ದರೆ ಈ ಬಾಬಿನ ಕೆಳಗೆ ನೀವು ಹಣ ಖರ್ಚು ಮಾಡಬೇಕಾಗುತ್ತದೆ. ನೀವು ಹಣ ಖರ್ಚು ಮಾಡದೆ ಅವರು ಹಣ ಕೊಡಬೇಕೆಂದು ಕೇಳಿದರೆ ಅವರು ಯಾವ ಕಾನೂನು ಪ್ರಕಾರ ಕೊಡುತ್ತಾರೆ ? ಅದಕ್ಕೆ ಯಾವ ಒಂದು ಕಾನೂನು ಇಲ್ಲ. ಕೇಂದ್ರ ಸರ್ಕಾರ ಒಂದು ಆರ್ಥಿಕ ವ್ಯವಸ್ಥೆಯನ್ನು ಹಮ್ಮಿಕೊಂಡು ಕೆಲಸ ಮಾಡುತ್ತಿದೆ. ಈಗಿನ ಆರ್ಥಿಕ ವ್ಯವಸ್ಥೆಯನ್ನು ಅಸ್ತವ್ಯಸ್ತ ಮಾಡುವಂತಹ ಆರ್ಥಿಕ ವ್ಯವಸ್ಥೆ ಅಲ್ಲಿಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು. ಇನ್ನು In page 135 of the Economic Survey you have given an Appendix relating to trends in Development and Non-Development Expenditure in Karnataka. In 1981-82 the percentage of non-development expenditure was 28.2. In 1986-87 it is 34%. You think it is the symbol of the efficient management of finances in raising the non-development expenditure to the extent of 6% and more? Is it the most efficient management of the finances of the State? I am yet to learn.

Even in the trends of development of irrigation ಏನಾಗಿದೆ ಎಂಬುದನ್ನು ಹೇಳುತ್ತೇನೆ. ಅದನ್ನು ನಾನು ಪ್ರತ್ಯೇಕ ಪ್ರತ್ಯೇಕವಾಗಿ ಓದಲಿಕ್ಕೆ ಹೋಗುವುದಿಲ್ಲ. Even investment in the power corporation ತೆಗೆದುಕೊಳ್ಳಿ. ಅದೆಲ್ಲಾ ಹೊರಟು ಹೋಯಿತು. ಅದು agricultural Sectorಗೆ ಹೋಯಿತು. ಅಲ್ಲಿಗೆ Dis investment ಆಗಿದೆ. ಆ ಬಗ್ಗೆ ಅಂತೂ ಅದು ಅದಕ್ಕಿಂತ ದೊಡ್ಡದುರಂತ ಕರ್ನಾಟಕದ ಅಭಿವೃದ್ಧಿಯ ಒಂದು ಕ್ಷೇತ್ರದಲ್ಲಿ ಮತ್ತೊಂದು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. I. A. S. officerಗಳ merit theory ಎಂದು ತಾವು. ಏನು propagate ಮಾಡುತ್ತಿದ್ದೀರಿ, ಆ ಮೆರಿಟ್ ಥಿಯರೀ ಏನಾಯಿತೆಂದು ತಾವು ದಯಮಾಡಿ ಹೇಳಬೇಕಾಗುತ್ತದೆ. ಈಗ ತಾವು ಅನೇಕ ಸಾರಿ ಹೇಳುತ್ತೀರಿ ನಾವು ಜನತಾ ಪಕ್ಷ ನಾವು ಬಹಳ ಚೆನ್ನಾಗಿ ಕೆಲಸ ಮಾಡುತ್ತೇವೆಂದು. you have left the State in 1979-80 with the GNP of -4.7% In 1986-87 it is 5% In Agriculture production you have left the State with -15.2% and now it is 1% food grains production was 16.8% when you left the State in 1979-80 and it is now +3%. When you left the State in 1979-80, the industrial production was -1.7% and it is now 7% to 8%. You have shattered the economy and you are going to shatter the economy in Karnataka. You have done it. It is your legacy and we cannot compliment.

You are misleading on every front. ಇನ್ನು ಅಧ್ಯಕ್ಷರೇ, ಈ ಪವರ್‌ನ ಬಗ್ಗೆ ಅಂದರೆ "ಭಾಗ್ಯಜ್ಯೋತಿ" ವೀಕರ್ ಸೆಕ್ಷನ್ ಬಗ್ಗೆ ಬಹಳ ಆಸಕ್ತಿ ಇದೆ ಎಂದು ಹೇಳತಕ್ಕಂತಹ ಕಾರ್ಯಕ್ರಮ. ೧೯೮೫-೮೬ರಲ್ಲಿ ೫೮ ಲಕ್ಷ ಕೊಟ್ಟಿದ್ದರೆ, ೧೯೮೬-೮೭ ರಲ್ಲಿ ೨೪ ಲಕ್ಷ ಮಾತ್ರ ಕೊಟ್ಟಿದ್ದಾರೆ. ೧೯೮೭-೮೮ ರಲ್ಲಿ ೨೫ ಲಕ್ಷ ಮಾತ್ರ ಅರ್ಧಕ್ಕೆ ಅರ್ಧ ಇಲ್ಲವೆಂದರೆ ಇನ್ನು ಈ ಭಾಗ್ಯಜ್ಯೋತಿ ಹೇಗೆ ಬರಬೇಕು ?

ಇನ್ನು ಇರಿಗೇಷನ್ ಬಗ್ಗೆ ನಾನು ಹೆಚ್ಚು ವಿವರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇಷ್ಟು ಹೇಳುತ್ತೇನೆ, ಇದರ ಬಗ್ಗೆ ಮೊನ್ನೆ ಇವರು ಹೇಳಿದರಲ್ಲಾ ಈ Technical approval ಕೊಟ್ಟು ಬಿಜಾಪುರದಲ್ಲಿ ನಾವು ಮುಖ್ಯಮಂತ್ರಿಯವರ ಮುಖಾಂತರ ಶಂಕುಸ್ಥಾಪನೆ ಮಾಡಿದ್ದೇವೆ, ಎಂದು ಭಾಷಣ ಮಾಡಿದ್ದೀರಿ. ಏಕೆಂದರೆ ದಿನಕ್ಕೊಂದು privilege motionನ್ನು ನಾವು ತರಬೇಕಾಗಿದೆ ಈ ಮಂತ್ರಿ ಮಂಡಲದ ಮೇಲೆ You are misleading on every front ;.

ಏಕೆಂದರೆ ಇವರಲ್ಲಿ ಮಂತ್ರಿಮಂಡಲ ಬೇರೆ, ಮುಖ್ಯಮಂತ್ರಿಗಳು ಬೇರೆ, ಈಗ ನಾನು ನೋಡಿದ ನೀರಾವರಿ ಪುಸ್ತಕದಲ್ಲಿ. ಮೇಲಾಗಿ ಏನು ಇವತ್ತು ಇಲ್ಲವೇ ಇಲ್ಲ. ಒಂದು ನಯಾ ಪೈಸೆನೂ ಕೊಟ್ಟಿಲ್ಲ there are no entries found here ಬಿಜಾಪುರದಲ್ಲಿ ಲಕ್ಷಾಂತರ ಮುಂದಿಗೆ "ಕಾಮಧೇನು" ವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆಂದು ಜಿಲ್ಲಾ ಪರಿಷತ್ತಿನ ಚುನಾವಣೆಯ ನೋಟಿಫಿಕೇಷನ್ ಆಗುವ ಮೊದಲು , ತಮ್ಮ ಹಣದಲ್ಲಿ ಒಂದು ನಯಾ ಪೈಸೆ ಇಲ್ಲ. Upper Bhadra ಭಾರೀ engineering office ಮಾಡಲಿಕ್ಕೆ ೨೫ ಲಕ್ಷ ಅಷ್ಟೆ ಆದರೆ ಅಪ್ಪರ್ ಭದ್ರ ನಾನು ಕೇಳುತ್ತೇನೆ, ತಾವು ದಯುಮಾಡಿ You place the records on the table of the house. Kindly do not mislead this house.

ಒಬ್ಬ ಸದಸ್ಯರು.—ನಿಮ್ಮ ವಿಜಯನಗರದ ಉಕ್ಕಿನ ಕಾರ್ಖಾನೆ ಏನಾಯಿತು ಎಂದು ಕೇಳುತ್ತೇನೆ?

ಶ್ರೀ ಎಂ. ವೀರಪ್ಪಮೊಯ್ಲಿ.—ಈಗ ಅಪ್ಪರ್ ಭದ್ರ ಬಗ್ಗೆ ಅವರು ಹೇಳಿದರು. Are you sent that project to the Government of India ? Even till today you have not sent the Upper Bhadra Project to the Government of India for clearance. You have given a promise which is false in Chitra-durga just on the eve of the Zilla Parishad or during the election. ಆದರಿಂದ ಇವತ್ತು ತುಮಕೂರು ಕೆನ್ನಾಲ್‌ಗೆ ಇನ್ನೂ Chief Engineering Office ಮಾಡಿ ಬಿಟ್ಟರು. ಆದರೆ ನಾನು ಸರ್ಚ್ ಮಾಡಿದೆ, ಎಲ್ಲಿಯಾದರೂ ಪಾಪ ವೈ. ಕೆ. ರಾಮಯ್ಯನವರಿಗೆ ಇದರಿಂದ ಏನಾದರೂ ಪ್ರಯೋಜನ ಆಗುತ್ತದೆಯೆನೋ ಎಂದು. They have provided Rs. 10 Lakhs for Tumkur Canal Project in the Hemavathi Project where as Rs. 56 crores is provided to Hemavathi Project.

೩-೩೦ ಪಿ. ಎಂ.

ಇನ್ನು ಅಪ್ಪರ್‌ಕೃಷ್ಣ ಪ್ರಾಜೆಕ್ಟ್, ಬಗ್ಗೆ ಹೇಳಬೇಕಾದರೆ, ಇದು ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್. ನಾವು ಇದರಿಂದ ಬಹಳ ನಿರೀಕ್ಷೆ ಮಾಡಿದ್ದೆವು. Do you know the increase for the U. K. P. ಮಾನ್ಯ ಕಡಪಟ್ಟಿಯವರು ಮಾತನಾಡಿದ್ದೇ ಮಾತನಾಡಿದ್ದು ಹೇಮಾವತಿ ಪ್ರಾಜೆಕ್ಟ್‌ಗೆ ಹೋದ ವರ್ಷ ೩೫ ಕೋಟಿ ರೂಪಾಯಿಗಳಿಂದ ೫೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಯು. ಕೆ. ಪಿ. ಯನ್ನು ೨೦೦೦ ಎ. ಡಿ. ಯಲ್ಲಿ ಮಾಡುತ್ತೀರಾ ಅಥವಾ ೨೫೦೦ ಎ. ಡಿ. ಯಲ್ಲಿ ಮಾಡುತ್ತೀರಾ ತಿಳಿಸಬೇಕು. Even the instalment in irrigation.

ಇನ್ನು ಟ್ಯಾಕ್ಸೇಷನ್ ಬಗ್ಗೆ ಹೇಳುವುದಾದರೆ ಅಲ್ಪ ವಿರೋಧಿಯಾಗಿದೆ. ಇದು ಜನವಿರೋಧಿಯಾಗಿದೆ, ಬಡಜನರ ವಿರೋಧಿಯಾಗಿದೆ. ಆದರೆ ಈ ಟ್ಯಾಕ್ಸೇಷನ್ ಮೆಂಜರ್ಸ್ ವಿರೋಧವಾಗಿಲ್ಲವೆಂದು ಹೇಳುತ್ತೀರಾ ? Fertilizers diesel Coffee and Tea etc,. ಈಗ fleet owners of the lorry have been helped.

ಇನ್ನು ಫಿಲಂ ಅಂತೂ ನಾಶವಾಗುತ್ತಿದೆ. ಈಚೆಗೆ ಥಿಯೇಟರ್‌ಗಳನ್ನು ಒಡೆದು ಹಾಕುತ್ತಿದ್ದಾರೆ. ಈಗ ಯಾವುದು ಲಾಭದಾಯಕವಲ್ಲವೋ ಅದನ್ನು ಒಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಬಜೆಟ್‌ನಲ್ಲಿ ಮನರಂಜನೆ ತೆರಿಗೆ ಹೆಚ್ಚು ಮಾಡಿದ್ದಾರೆ. ಈಗಾಗಲೇ ಟಿ. ವಿ. ಹಾಗೂ ರೇಡಿಯೋಗಳು ಬಂದಿರುವುದರಿಂದ ಕನ್ನಡದ ಫಿಲಂ ಇಂಡಸ್ಟ್ರೀ ನಾಶವಾಗುತ್ತಿದೆ. ಅದನ್ನು ಸಂಪೂರ್ಣವಾಗಿ ನಾಶ ಮಾಡುವುದಕ್ಕೆ ಅದಕ್ಕೆ ಒಂದು ಸಮಾಧಿಯನ್ನು ಕಟ್ಟಿಬಿಡೋಣ ಎಂದು ಮನರಂಜನೆ ತೆರಿಗೆಯನ್ನು ಸಂಪೂರ್ಣವಾಗಿ ಏರಿಸಿಬಿಟ್ಟಿದ್ದಾರೆ. ಇದರಿಂದ ಖಂಡಿತವಾಗಿಯೂ ಕನ್ನಡದ ಫಿಲಂ ಇಂಡಸ್ಟ್ರೀ ಬೆಳೆಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಇನ್ನು ತಾವು ಕೆಲವು ಮಲ್ಟಿಪಾಯಿಂಟ್‌ಗಳನ್ನು ಈ ತೆರಿಗೆಯಲ್ಲಿ ಮಾಡಿದ್ದೀರಿ, stainless steel ಅದರಲ್ಲಿ ಯಾರೇ ಆದರೂ ಸ್ಟೈಯಿನ್‌ಲೆಸ್ ಸ್ಟೀಲ್ ತೆಗೆದುಕೊಳ್ಳುವುದಿದ್ದರೆ ಅವರು ೧ ಹೋಲ್‌ಸೇಲ್ ಅಥವಾ ರಿಟೇಲ್ ಪರ್ಸೆಂಟ್ ಪಾವತಿ ಮಾಡಬೇಕು. ಅದೇರೀತಿ ಇನ್ನು ಅನೇಕ ಐಟಮ್‌ಗಳಿವೆ. ಈಗ ಇಲ್ಲಿ ಯಾರೂ ಸೇಫ್ಟಿ ಮ್ಯಾಚಸ್ ಮ್ಯಾನುಫ್ಯಾಕ್ಚರ್ ಮಾಡುವಹಾಗಿಲ್ಲ ಏಕೆಂದರೆ ಅದರ ಬದಲು ೧೦% ಪರ್ಸೆಂಟ್ ಕೊಟ್ಟು ಹೊರಗಿನಿಂದ ತಂದು ಇಲ್ಲಿ ಮಾರಬಹುದು. The local industries manufacturing units ಇಲ್ಲಿ ಪ್ರೋತ್ಸಾಹ ಇಲ್ಲ. ನಾನು ಕಳೆದ ಬಾರಿ ಟರ್ನ್‌ಓವರ್ ಟ್ಯಾಕ್ಸ್‌ನಲ್ಲಿ ಜನ ತಪ್ಪಿಸಿಕೊಳ್ಳುತ್ತಾರೆ ಎಂದು ಹೇಳಿದ್ದೆ. ಮಾನ್ಯ ಮುಖ್ಯಮಂತ್ರಿಯವರಿಗೇ ನಮ್ಮ ಪ್ರಶ್ನೆಗಳನ್ನು ಕೇಳಲು ವ್ಯವಧಾನವೇ ಇರುವುದಿಲ್ಲ. ಈಗ ಸ್ವಲ್ಪವಾದರೂ ಕೇಳಿದ್ದಾರೆ. ಉತ್ತರ ಕೊಡುವುದಕ್ಕೆ ಅವರಿಗೆ ಅವಕಾಶವೇ ಇಲ್ಲದೇ ಇರುವುದರಿಂದ ಕೆಲವು ಸಾರಿ ಅದೇ ಟ್ಯಾಕ್ಸ್‌ನ್ನು ಪುನಃ ಹಾಕುತ್ತಾರೆ.

ಇನ್ನು ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಹೇಳಬೇಕಾದರೆ, ಅದನ್ನು ಹೆಚ್ಚು ಮಾಡಿದ್ದೀರಿ. ಪ್ರೊಫೆಷನ್ ಟ್ಯಾಕ್ಸ್ ತೆಗೆಯುತ್ತೇವೆ ಎಂದು ಹೇಳಿ ಈಗ ಅನೇಕ ಸಾವಿರಾರು ಮಂದಿಯನ್ನು ಈ ಪ್ರೋಫೆಷನಲ್ ಟ್ಯಾಕ್ಸ್ ನೆಟ್ಟಿನಲ್ಲಿ ಸೇರಿಸಿಕೊಳ್ಳುವ ಪ್ರಯತ್ನವನ್ನು ಬಹಳ ನಾಜೂಕಾಗಿ ಚಾಣಾಕ್ಷತನದಿಂದ ಮಾಡಿದ್ದೀರಿ ತಾವು ಎಲೆಕ್ಷನ್ ಟೈಮಿನಲ್ಲಿ ಕೊಟ್ಟಂತಹ ಮಾತುಗಳನ್ನು ಬಹಳ ಸುಲಭದಲ್ಲಿ ಮರೆಯುತ್ತೀರಿ. ಕ್ವಾಲಿಫಿಕೇಷನ್, ಫೀಸ್‌ನಲ್ಲಿ ಅದೇ ರೀತಿ ಮಾಡಿದ್ದೀರಿ. ಪ್ರೋಫೆಷನ್ ಟ್ಯಾಕ್ಸ್‌ನಲ್ಲೂ ಅದೇರೀತಿ ಮಾಡಿದ್ದೀರಿ.

ಇನ್ನು ಎಂಟ್ರಿಟ್ಯಾಕ್ಸ್ ಬಗ್ಗೆ ಕಳೆದ ಬಾರಿ ಹೇಳಿದ್ದೇನೆ,

ಇನ್ನು ವಾಟರ್‌ರೇಟ್ ಬಗ್ಗೆ ನಮ್ಮ ಸ್ನೇಹಿತರಾದ ಮಾನ್ಯ ಚೌಡಯ್ಯನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ, ಇದರಿಂದ ರೈತರಿಗೆ ಸಂಪೂರ್ಣವಾಗಿ ತೊಂದರೆ ಯಾಗುತ್ತಿದೆ. ಈಗಾಗಲೇ ಹಾಕಿರುವಂಥ ವಾಟರ್ ರೇಟನ್ನು ವಸೂಲು ಮಾಡತಕ್ಕಂಥ ಪ್ರಯತ್ನವನ್ನು ತಾವು ಏನೂ ಮಾಡಿಲ್ಲ. ಆದರೆ ಹೆಚ್ಚು ಮಾಡತಕ್ಕಂಥ ಪ್ರಯತ್ನವನ್ನು ಮಾಡಿದ್ದೀರಿ. ಏಕೆಂದರೆ ಟ್ಯಾಕ್ಸೇಷನ್ ಮಾಡುವಾಗ ಎಲ್ಲಿ ಹೆಚ್ಚು ಲಾಭ ಇರುತ್ತದೆಯೋ ಆ ಏರಿಯಾಕ್ಕೆ ಕೈಹಾಕಬೇಕೇ ಹೊರತು ಯಾರು ಹೆಚ್ಚು ಹೊರಲಾರದ ಹೆಚ್ಚು ಸಂಕಷ್ಟವನ್ನು ಅನುಭವಿಸುತ್ತಿರುತ್ತಾರೆ ಅವರಿಗೇ ಮತ್ತೆ ಹೆಚ್ಚು ಹಾಕುವುದು. ತಮ್ಮ ಈ ಟ್ಯಾಕ್ಸೇಷನ್ ಪಾಲಿಸಿ ಆಗಿದೆ ಎಂದು ಹೇಳಿ ಈ ಬಜೆಟ್ ಸಂಪೂರ್ಣವಾಗಿ ಜನವಿರೋಧಿಯಂತೂ ಖಂಡಿತವಾಗಿಯೂ ಆಗಿದೆಯೆಂದು ಹೇಳುತ್ತೇನೆ.

It reflects the total sickness of the Government. ಇದು ಸಂಪೂರ್ಣವಾಗಿ ಹತೋಟಿಯನ್ನು ತಪ್ಪಿದಂಥ ಒಂದು ಹುಚ್ಚು ಕುದುರೆ, ಲಗಾಮಿಲ್ಲದ ಕುದುರೆ ಈ ಸರ್ಕಾರ ಆದುದರಿಂದ ಆರ್ಥಿಕ ಪರಿಸ್ಥಿತಿಯನ್ನು ಈ ರೀತಿ ಮುಂದೆ ಕೊಂಡೊಯ್ದರೆ ಕರ್ನಾಟಕದ ಪ್ರಗತಿಗೆ ಸಂಪೂರ್ಣವಾಗಿ ನಷ್ಟವಾಗುತ್ತದೆ. ಹಾಗೂ ಕುಂಠಿತವಾಗುತ್ತದೆ ಎಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

† ಶ್ರೀ ಸಿ. ಎಂ. ಉದಾಸಿ. (ಹಾನಗಲ್).—ಸನ್ಮಾನ್ಯ ಅಧ್ಯಕ್ಷರೆ, ೧೯೮೭–೮೮ನೇ ಸಾಲಿಗೆ ಮಂಡಿಸಿದ ಆಯವ್ಯಯವನ್ನು ಅನುಮೋದಿಸಿ ನನ್ನ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛೆ ಪಡುತ್ತಾ ಇದ್ದೇನೆ. ಬಹಳಷ್ಟು ವಿರೋಧ ಪಕ್ಷದ ಸದಸ್ಯರುಗಳು ಜಿಲ್ಲಾ ಪರಿಷತ್ ಹಾಗೂ

ಮಂಡಲ್ ಪಂಚಾಯಿತಿಯ ಚುನಾವಣೆ ಬಗ್ಗೆ ಮಾತನಾಡುವಾಗ ಇದು ಒಂದು ಭಾರಿ ನಾಟಕ ಎನ್ನುವಂಥ ಮಟ್ಟಿಗೆ ಮಾತನಾಡಿದರು. ಮತ್ತು ೬೦ ಸಾವಿರ ಜನರನ್ನು ಇಲ್ಲಿ ಕರೆಸಿ ಅವರ ಕಣ್ಣಿನಲ್ಲಿ ಕಂಡಂಥ ಬೆಳಕಿಗೆ ಮಂಗಳದಲಿಸಿ ಕೆಲವರು ಮಾತನಾಡಿದರು. ದೇಶದಲ್ಲಿ ಒಂದು ಬದಲಾವಣೆ ತರಬೇಕಾದಾಗ, ಜನರಿಗೆ ಅಧಿಕಾರ ಕೊಡಬೇಕು, ಜನತೆಗೆ ಸ್ವಾತಂತ್ರ್ಯ ಕೊಡಬೇಕು ಎನ್ನುವಂಥಾದ್ದು ಬಂದಾಗ, ಅರ್ಥ ವ್ಯವಸ್ಥೆ ಮತ್ತು ಅಧಿಕಾರ ಅವರ ಕೈಗೆ ಕೊಟ್ಟು ಗ್ರಾಮಗಳ ಅಭಿವೃದ್ಧಿ ಬಗ್ಗೆ ಸದುದ್ದೇಶದಿಂದ ಮಾಡಿರುವಂಥ ಕಾನೂನನ್ನು ದೇಶಾದ್ಯಂತ ಸಾಧಿಸಬೇಕಾದಾಗ ಇದನ್ನು ಎಲ್ಲರೂ ಯಾವುದೇ ಪಕ್ಷದವರು ಚುನಾವಣೆಯಲ್ಲಿ ಆರಿಸಿಬಂದಿರಬಹುದು ಸ್ವಾಗತ ಮಾಡಬೇಕಾಗಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ರೀತಿ ಭಾವಿಸಿಕೊಳ್ಳದೆ ಎಲ್ಲ ಸಂದರ್ಭದಲೂ ವಿರೋಧವಾಗಿ ಮಾತನಾಡಲಿಕ್ಕೆ ಬರುತ್ತಾರೆ. ಯಾವುದೇ ಒಂದು ಘಟನೆ ನಡೆದಾಗ ಅದನ್ನು ವಿರೋಧಿಸುವುದಕ್ಕೆ ಕಾರಣ ಬೇಕಾದಷ್ಟು ತೆಗೆದುಕೊಂಡು ಹೇಳಲಿಕ್ಕೆ ಬರುತ್ತದೆ ಯಾವುದಾದರೂ ಒಂದು ಆಕ್ಸಿಡೆಂಟ್ ಆದರೆ ಡ್ರೈವರ್ ಕುಡಿದಿದ್ದ ಎಂದು ಹೇಳುವುದು, ಯಾರಾದರೂ ಚುನಾವಣೆಯಲ್ಲಿ ಸೋತು ಬಿಟ್ಟರೆ ನನ್ನ ಎದುರು ಪಕ್ಷದವರ ದುಡ್ಡು ಖರ್ಚು ಮಾಡಿದ ಅಥವಾ ಹೆಂಡ ಕುಡಿಸಿಬಿಟ್ಟ ಎಂದು ಹೇಳುವ ರೂಢಿ ಬಂದಿದೆ. ಈ ಭಾವನೆಯನ್ನು ನಾವು ಬಿಡಬೇಕು ಚುನಾವಣೆಯಲ್ಲಿ ಸೋಲು ಗೆಲುವಿನ ನಂತರ ಮಾನಸಿಕ, ವೈಚಾರಿಕತೆ ಬದಲಾವಣೆಯಾಗಬೇಕು ಚುನಾವಣೆ ನಂತರ ಪರಿವರ್ತನೆ ಬಗ್ಗೆ ಚಿಂತನೆ ಮಾಡಬೇಕು. ಮುಂದಿನ ೫ ವರ್ಷಗಳ ಪ್ರಗತಿ ಬಗ್ಗೆ ಹಿಂದೆ ಮಾಡಿದಂಥ ಸಾಧನೆ ಎನ್ನು ಪ್ರಾಮಾಣಿಕತೆಯಿಂದ ನೋಡಬೇಕು. ಕಳೆದ ೪ ವರ್ಷಗಳಲ್ಲಿ ಗ್ರಾಮೀಣ ಭಾಗದಲ್ಲಿ ಆಗುವ ಬದಲಾವಣೆಯನ್ನು ನಾನು ಹೆಮ್ಮೆಯಿಂದ ಒಪ್ಪಿಕೊಳ್ಳುತ್ತಾ ಇದ್ದೇನೆ ಬಹುತೇಕ ಸ್ಥಳಗಳಲ್ಲಿ ನಮ್ಮ ಪಕ್ಷ ಆಡಳಿತಕ್ಕೆ ಬಂದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಹೀಗಿರುವಾಗ ನನಗೆ ಒಂದು ಸಂಶಯ ಬರುತ್ತದೆ. ರಾಜ್ಯದ ಒಟ್ಟು ಜನಸಂಖ್ಯೆ ೧೯೮೧ನೇ ಇಸವಿಯ ಆಧಾರದ ಮೇಲೆ ಅಂದರೆ ೧೯೮೧ರ ಜನಗಣತಿಯ ಆಧಾರದ ಮೇಲೆ ಗ್ರಾಮಗಳ ಜನಸಂಖ್ಯೆ ೨ ಲಕ್ಷ ೬೪ ಸಾವಿರ ೬೦೮ ಇದ್ದರೆ ಪಟ್ಟಣದ ಜನಸಂಖ್ಯೆ ೧ ಕೋಟಿ ೭ ಲಕ್ಷ ೨೯ ಸಾವಿರದ ೬೦೬ ಇದ್ದಲ್ಲಿ ೨೫೨ ಪುರಸಭೆಗಳು. ಆ ಸಂದರ್ಭದಲ್ಲಿ ಇದೇ ಜನಸಂಖ್ಯೆ ಆಧಾರದ ಮೇಲೆ ಬರೆದಿದ್ದಾರೆ ಈ ೨೫೨ ಪುರಸಭೆಗಳಲ್ಲಿ ೪೦ ಪುರಸಭೆಗಳು ಮಂಡಲ್ ಪಂಚಾಯಿತಿಗಳಾಗಿ ಪರಿವರ್ತನೆಯಾಗಿವೆ. ೧೫೦ ಪುರಸಭೆಗಳು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರುತ್ತವೆ. ಇದನ್ನು ಯಾವ ರೀತಿ ಬದಲಾವಣೆ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ನಾವು ಪ್ರತಿಯೊಬ್ಬರೂ ಚಿಂತನೆ ಮಾಡಬೇಕಾಗಿದೆ ಈ ೧೭೨ ಪುರಸಭೆಗಳ ವ್ಯಾಪ್ತಿಯಲ್ಲಿ ಬರುವಂಥ ಜಮೀನುಗಳ ಸುಧಾರಣೆ ವಿಚಾರದಲ್ಲಾಗಲಿ ಒಕ್ಕಲುತನ ವಿಚಾರದಲ್ಲಾಗಲಿ ತೋಟಗಾರಿಕೆಯಲ್ಲಿ ಆಗಬೇಕಾದ ಅಭಿವೃದ್ಧಿ ವಿಚಾರದಲ್ಲಾಗಲಿ, ನೀರಾವರಿ ಅಭಿವೃದ್ಧಿ ವಿಚಾರದಲ್ಲಾಗಲೀ, ಕೃಷಿ ಕಾರ್ಮಿಕರ ವಿಚಾರದಲ್ಲಾಗಲೀ, ಕುಶಲಕರ್ಮಿಗಳ ವಿಚಾರದಲ್ಲಾಗಲೀ ಯಾವ ರೀತಿ ಒಂದು ಅನುಕೂಲಕರವಾದ ತೀರ್ಮಾನವನ್ನು ಸರ್ಕಾರ ಕೈಗೊಳ್ಳುತ್ತದೆ ಎನ್ನುವುದನ್ನು ನಾವು ನೋಡಬೇಕಾಗಿದೆ. ಗ್ರಾಮೀಣ ಭಾಗದಲ್ಲಿ ಅಭಿವೃದ್ಧಿ ಕೆಲಸಗಳಾಗಬೇಕಾಗುತ್ತದೆ. ಇವತ್ತು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಜಿಲ್ಲಾ ಆಸ್ಪತ್ರೆಗಳು ಬರುತ್ತವೆ. ಹಾನಗಲ್ ಪುರಸಭೆ ವ್ಯಾಪ್ತಿಯಲ್ಲಿ ಪಬ್ಲಿಕ್ ಸೆಂಟರ್ ಬರುತ್ತದೆ. ಪ್ರಾಥಮಿಕ ಶಾಲೆಗಳು ಮತ್ತು ಮಾಧ್ಯಮಿಕ ಶಾಲೆಗಳು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲೇ ಬರುತ್ತವೆ. ಪಟ್ಟಣದಲ್ಲಿರುವಂಥ ಪ್ರಾಥಮಿಕ ಶಾಲೆಗಳು ಮತ್ತು ಮಾಧ್ಯಮಿಕ ಶಾಲೆಗಳು ಯಾವ ಉಸ್ತುವಾರಿಯಲ್ಲಿ ಬರುತ್ತವೆ ಎನ್ನುವ ಸಮಸ್ಯೆ ಬರುತ್ತದೆ. ಜಮೀನುಗಳ ಸುಧಾರಣೆ ಕೆಲಸ ಕೃಷಿಕರ ವಿಚಾರದಲ್ಲಿ ಯಾವ ರೀತಿ ವ್ಯವಸ್ಥೆ ಮಾಡುತ್ತಾರೆನ್ನುವುದನ್ನು ನೋಡಬೇಕಾಗುತ್ತದೆ ಇವತ್ತು ಪುರಸಭೆಗಳಿಗೆ ನಿಖರವಾದಂಥ ಆದಾಯ ಇದೆ ಅವರಿಗೆ ಕೆಲಸಗಾರರಿಗೆ ಸಂಬಳ ಕೊಡಲಿಕ್ಕೂ ಮಾತ್ರ ಸಾಧ್ಯವಾಗುತ್ತಿಲ್ಲ. ಪಟ್ಟಣ ನೀರು ಸರಬರಾಜು ಮಂಡಲಿ ಹಾಗೂ ಕೊಳಚೆ ನಿರ್ಮೂಲನಾ ಮಂಡಲಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತವೆ ೨೫,೦೦೦ ಜನಸಂಖ್ಯೆ ಕಡಿಮೆ ಇರತಕ್ಕ ಪಟ್ಟಣಗಳಲ್ಲಿ ಯಾವುದೇ ಅಭಿವೃದ್ಧಿಯ ಕೆಲಸಗಳನ್ನು ಕೂಡ ಮಾಡುವುದಕ್ಕೆ ಆಗುತ್ತಿಲ್ಲ. ಇವತ್ತು ೫೦೦ ಜನಸಂಖ್ಯೆಗಿಂತ ಜಾಸ್ತಿ ಇರತಕ್ಕ ಗ್ರಾಮಸಭೆಗಳನ್ನು ಮಾಡುವುದಕ್ಕೆ ಕಷ್ಟವಾಗಬಹುದು. ಪ್ರತಿಯೊಂದು ಗ್ರಾಮ ಸಭೆಗಳಲ್ಲೂ ರಾಜಕೀಯ ಪಕ್ಷಗಳು ಇದ್ದು ಭಿನ್ನ ಭಿನ್ನ ಅಭಿಪ್ರಾಯ ಇರುತ್ತದೆ. ಆರು ತಿಂಗಳಿಗೊಮ್ಮೆ ಸಭೆ ಸೇರಿದಾಗ ಅನೇಕ ಸಮಸ್ಯೆಗಳು ಬರುತ್ತವೆ. ಅವುಗಳನ್ನು ಯಾವ ರೀತಿ ಬಗೆಹರಿಸಬೇಕೆಂಬುದನು ಮುಖ್ಯವಾದುದು ಕಳೆದ ನಾಲ್ಕು ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆ, ವಿಶೇಷ ಘಟಕ ಯೋಜನೆ ಕುಡಿಯುವ ನೀರಿನ ವಿಚಾರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಸಾಕಷ್ಟು ಪ್ರಗತಿದಾಯಕವಾಗಿ ಮಾಡಲಾಗಿದೆ. ಅಂತ್ಯೋದಯ ಐ. ಆರ್. ಡಿ. ಪಿ. ಸಮಗ್ರ ಗ್ರಾಮೀಣ

ಅಭಿವೃದ್ಧಿ ಯೋಜನೆ, ವಿಶೇಷ ಘಟಕ ಯೋಜನೆಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದರೂ ರೈತರ ಅನೇಕ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಸಾಧ್ಯವಾಗಿಲ್ಲ ಅದರಲ್ಲಿಯೂ ಮುಖ್ಯವಾಗಿ ಬೆಳೆ ಸಾಲ ವಿಮಾ ಯೋಜನೆ ಏನಿದೆ ಆ ದಿಕ್ಕಿನಲ್ಲಿ ನಮ್ಮ ಪ್ರಯತ್ನ ಕಡಿಮೆ ಇದೆ. ಬೆಳೆ ವಿಮಾ ಯೋಜನೆಗೆ ಬದಲಾಗಿ, ಬೆಳೆ ಸಾಲ ವಿಮಾ ಯೋಜನೆ ಎಂದು ಮಾಡಿರುವುದರಿಂದ ರೈತರು ಬಹಳ ಕಷ್ಟದಲ್ಲಿದ್ದಾರೆ. ಒಂದೂವರೆ ಪಟ್ಟು ಹಣಕ್ಕೆ ಮಾತ್ರ ಕಂತಿನ ಹಣವನ್ನು ಕಟ್ಟ ಬೇಕಾಗುತ್ತದೆ. ಬೆಳೆ ವಿಮಾ ಯೋಜನೆ ವಿಚಾರದಲ್ಲಿ ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡಬೇಕಾತ್ತದೆ. ಕೇಂದ್ರದಿಂದ ಹಣ ಬರದೇ ಹೋದರೆ ಈ ವರ್ಷ ಮತ್ತು ಕಳೆದ ವರ್ಷಕ್ಕೆ ಸಂಬಂಧ ಪಟ್ಟಂತೆ ರೈತರು ಪಡೆಯಬೇಕಾದ ಹಣಕ್ಕೆ ತೊಂದರೆಯಾಗುತ್ತದೆ. ಅವಧಿ ಮೀರಿ ವಿಮಾ ಯೋಜನೆ ಹಣ ಇಲಾಖೆಗೆ ಹೋಗುವುದರಿಂದ ರೈತರಿಗೆ ತೊಂದರೆಯಾಗುತ್ತದೆ. ಕೇಂದ್ರ ಸರ್ಕಾರ ನಮಗೆ ಕೊಡಬೇಕಾದ ಸಹಾಯವನ್ನು ಕೊಟ್ಟರೆ, ಅಭಿವೃದ್ಧಿಯಾಗುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ಮಾನ್ಯ ವಿರೋಧ ಪಕ್ಷದ ಸದಸ್ಯರು ಟೀಕೆ ಮಾಡಿದ್ದಾರೆ. ಇವತ್ತು ೧೪೦ ಕೋಟಿ ರೂಪಾಯಿಗಳ ತೆರಿಗೆಯನ್ನು ಹಾಕಲಾಗಿದೆ ಸರ್ಕಾರೀ ನೌಕರರಿಗೆ ಹೊಸ ವೇತನ ಆಯೋಗದ ಪ್ರಕಾರ ೧೦೦ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಕೇಂದ್ರ ಸರ್ಕಾರದವರು ತನ್ನ ನೌಕರರಿಗೆ ವೇತನವನ್ನು ನಿಗದಿ ಮಾಡುವ ಮುನ್ನ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚನೆ ಮಾಡದೇ ಇರುವುದರಿಂದ ಈ ಒಂದು ತೊಂದರೆ ಬರುತ್ತದೆ, ಸಮಾನ ವೇತನಕ್ಕೆ ಸಮಾನ ಕೆಲಸ ಕೊಡಬೇಕಾಗಿರುವುದರಿಂದ, ಈ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ನಮಗೆಲ್ಲಾ ತಿಳಿದಿರುವಂತೆ, ಕೇಂದ್ರ ಸರ್ಕಾರದ ನೌಕರಿಗಳಲ್ಲಿರುವ ಒಬ್ಬ ಜವಾನನಿಗೆ, ಬ್ಯಾಂಕಿನಲ್ಲಿರುವಂಥ ಒಬ್ಬ ಜವಾನನಿಗೆ ಬರುವಂಥ ಸಂಬಳ ನಮ್ಮ ಅಧಿಕಾರಿಗಳ ಸಂಬಳಕ್ಕೆ ಸಮಾನವಾಗಿದೆ. ಸಮಾನ ಕೆಲಸಕ್ಕೆ, ಸಮಾನ ವೇತನ ಕೊಡುವಂಥ ಒಂದು ಪರಿಸ್ಥಿತಿ ಬಂದಿದೆ.

ಇವೊತ್ತು ರೈತರು ಹೊಸ ಬದಲಾವಣೆಗೆ ಬರಬೇಕಾಗಿದೆ. ರೈತರು ಕಳೆದ ನಾಲ್ಕು ವರ್ಷಗಳಿಂದಲೂ ಬರಗಾಲವನ್ನು ಅನುಭವಿಸುತ್ತಿದ್ದರು, ಅದರ ಜೊತೆಗೆ ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ, ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡು ಹಿಡಿಯಬೇಕು. ಅಂದರೆ ನೀರಾವರಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಬಡ್ಜೆಟ್ಟಿನಲ್ಲಿ ಕೊಟ್ಟಿರುವ ಅನುಬಂಧ ೨ ರಲ್ಲಿ ಇರತಕ್ಕ ವಿಚಾರದ ಬಗ್ಗೆ ಇದುವರೆಗೂ ಯಾರೂ ಮಾತನಾಡಲಿಲ್ಲ. ಕೇಂದ್ರ ಸರ್ಕಾರದ ಮುಂದೆ ನಮ್ಮ ರಾಜ್ಯಸರ್ಕಾರ ಪ್ರಸ್ತಾವನೆ ಇಟ್ಟಿರುವುದರ ಬಗ್ಗೆ ಯಾರೂ ಚಿಂತನೆ ಮಾಡಿಲ್ಲ ಎಂದು ಹೇಳುತ್ತೇನೆ ಅನುಬಂಧ ೨ರಲ್ಲಿ ಇರತಕ್ಕ ೩೦ ಪ್ರಸ್ತಾವಗಳ ಬಗ್ಗೆ, ಅದರಲ್ಲಿ ಬರತಕ್ಕ ನೀರಾವರಿ ಯೋಜನೆಯ ಬಗ್ಗೆ ಆಗಲಿ, ಬೆಂಗಳೂರು ರೈಲ್ವೆ ಮಾರ್ಗವನ್ನು ಬ್ರಾಡ್‌ಗೇಜ್ ಮಾಡುವುದರ ಬಗ್ಗೆಯಾಗಲಿ, ನಮ್ಮ ಸರ್ಕಾರ ಕೇಂದ್ರದ ಮುಂದೆ ಏನು ಮಂಡನೆ ಮಾಡಿದೆ, ಇದರ ಬಗ್ಗೆ ಯಾರೂ ಸಹ ಪ್ರಸ್ತಾಪ ಮಾಡಲಿಲ್ಲ. ಈ ಬಗ್ಗೆ ಯಾರೂ ಪ್ರಸ್ತಾಪ ಮಾಡದೇ ಇದ್ದರೂ ಕೇಂದ್ರ ಸರ್ಕಾರದ ಒಂದು ನೀತಿ ಇದೆ. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು ಈ ದೇಶದ ಪ್ರಧಾನಿಯಾಗಿದ್ದಾಗ ದಿನಕ್ಕೊಂದು ದೂರದರ್ಶನ ಸಮಾರಂಭ ಉದ್ಘಾಟನೆಯಾಗುತ್ತಿತ್ತು. ಪ್ರಚಾರ ವ್ಯವಸ್ಥೆಗೆ ಅವಕಾಶವಾಗಿತ್ತು ಎನ್ನುವುದನ್ನು ಬೇರೆ ಹೇಳಬೇಕಾಗಿಲ್ಲ. ಈಗಿನ ಪ್ರಧಾನ ಮಂತ್ರಿಗಳು ವಾಯುದೂತ್ ಸೇವೆಯನ್ನು ಎಲ್ಲಾ ಕಡೆಗಳಲ್ಲಿ ಆರಂಭಿಸುತ್ತಿದ್ದಾರೆ. ನಾವು ಬೇಡಿಕೆಯನ್ನು ಸಲ್ಲಿಸಲಿ, ಅಥವಾ ಸಲ್ಲಿಸದೇ ಇರಲಿ, ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಪರಿವರ್ತಿಸುವುದು, ವಾಯುದೂತ್ ಸೇವೆಯನ್ನು ಆರಂಭಿಸುವ ಕೆಲಸವನ್ನು ಕೇಂದ್ರ ಸರ್ಕಾರದಲ್ಲಿರತಕ್ಕ ಈಗಿನ ಪ್ರಧಾನ ಮಂತ್ರಿಗಳು ಮಾಡುತ್ತಾರೆ. ಇವೊತ್ತು ಪ್ರಥಮ ಪ್ರಾಶಸ್ತ್ಯವನ್ನು ಕೇಂದ್ರ ಸರ್ಕಾರದವರು ನೀರಾವರಿ ಯೋಜನೆಗಳಿಗೆ ಧನ ಸಹಾಯ ಮಾಡಿದ್ದರೆ ಬಹಳಷ್ಟು ಅನುಕೂಲವಾಗುತ್ತಿತ್ತು. ಅದರ ಅನುಕೂಲ ಆಗದೇ ಇರುವುದರಿಂದ ಬಹಳ ಜನ ರೈತರಿಗೆ ಸಮಸ್ಯೆಯಾಗಿದೆ. ರೈತರ ಬೇಡಿಕೆಗಳ ಬಗ್ಗೆ ಹೇಳಬೇಕೆಂದರೆ, ನೀರಾವರಿ ಯೋಜನೆಗಳು ಕಳೆದ ನೂರು ವರ್ಷಗಳಿಂದಲೂ ಆಗಿಲ್ಲ. ನಮ್ಮ ವರದಾ, ತುಂಗಾ ನದಿ, ಲಿಫ್ಟ್ ಇರಿಗೇಷನ್ ಸ್ಕೀಮ್ ಆಗುತ್ತಿಲ್ಲ. ಇನ್ನೂ ಪ್ರಾರಂಭ ಆಗಬೇಕಾಗಿದೆ. ಯಾವುದೇ ಯೋಜನೆಯ ಬಗ್ಗೆ ಮಂಜೂರಾತಿಗೆ ಕಳುಹಿಸಿದರೂ ಪ್ರತಿ ಹಂತದಲ್ಲೂ ತಕರಾರು ಹಾಕಿ ವಾಪಸ್ಸು ಬರುತ್ತದೆ. ಯಾವುದೇ ಒಂದು ನೀರಾವರಿ ಯೋಜನೆಯ ಬಗ್ಗೆ, ನಾವು ಮಾಹಿತಿಯನ್ನು ಕಳುಹಿಸುತ್ತಿದ್ದರೂ ಸಹ ಅದು ಮತ್ತೆ ಮರುಪರಿಶೀಲನೆಗೆ ಬರುವಂತಾದ್ದು ಇದೆ, ಆ ನದಿ ನೀರು ನೀರಾವರಿಗೆ ಯೋಗ್ಯ ಇದೆಯೋ, ಆ ಭೂಮಿ ನೀರಾವರಿಗೆ ಯೋಗ್ಯ ಇದೆಯೋ, ಎಂದು ಪ್ರತಿ ಹಂತದಲ್ಲೂ ವಾಪಸ್ಸು ಕಳುಹಿಸುವಂತಾದ್ದು ಇದೆ. ಇದು ತಪ್ಪಬೇಕೆಂದು ಹೇಳುತ್ತೇನೆ. ಎಷ್ಟೋ ಸಂದರ್ಭಗಳಲ್ಲಿ

ಮಂಜೂರಾತಿ ಮೂರು ವರ್ಷಗಳವರೆಗೆ ಹೋಗುತ್ತದೆ. ಆದ್ದರಿಂದ, ಈ ಯೋಜನೆಗಳ ಬಗ್ಗೆ ತೀವ್ರ ಕ್ರಮ ಕೈಗೊಳ್ಳಬೇಕು. ಇನ್ನು ಲಿಫ್ಟ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ ಆಗಿರುವಂಥ ಎರಡು ಯೋಜನೆಗಳಲ್ಲಿ ಪ್ರತಿವರ್ಷ ಜುಲೈ ತಿಂಗಳಿನಲ್ಲಿ ಆ ಪಂಪುಗಳನ್ನು ಮುಚ್ಚಿಸಬೇಕು. ನದಿ ನೀರು ತುಂಬಿ ಹರಿಯುತ್ತಿರುವಾಗ ಆದರೆ ಡಿಸೆಂಬರ್ ತಿಂಗಳಿನಲ್ಲಿ ಪಂಪುಸೆಟ್ಟು ಇಡಬೇಕು. ಈ ಪರಿಸ್ಥಿತಿ ಏತಕ್ಕೆ ಅಂದರೆ, ಡೀಸಲ್ ಟರಬೈನ್ ಪಂಪುಗಳನ್ನು ಕೂಡಿಸಬೇಕಾದ ಜಾಗದಲ್ಲಿ ನಿರ್ಮಲ ಇಂಜನಿಯರಿಂಗ್ ಕಂಪನಿಯವರು ಸೆಂಟ್ರಿಫ್ಯೂಗಲ್ ಪಂಪುಗಳನ್ನು ಕೂಡಿಸಿದ್ದಾರೆ. ಅಲ್ಲಿ ನೀರು ಹರಿಯುತ್ತಿರುವಾಗ ಪಂಪುಗಳನ್ನು ಉಪಯೋಗ ಮಾಡಲಿಕ್ಕೆ ಬರುವುದಿಲ್ಲ. ಯಾವಾಗ ಮಳೆಗಾಲದಲ್ಲಿ ನೀರಾವರಿ ಪ್ರಯೋಜನ ಪಡೆಯಬೇಕಾಗಿದೆ, ಅಂಥ ಪ್ರಯೋಜನ ಪಡೆಯಬೇಕಾದಂಥ ಶೇಷಗಿರಿ ಮತ್ತು ಕುಸನೂರು ಈ ಯೋಜನೆಗಳಲ್ಲಿ ಪ್ರತಿವರ್ಷ ಮಳೆಗಾಲದಲ್ಲಿ ತೆಗೆದಿಟ್ಟು ಮತ್ತೆ ಬೇಕಾದರೆ ಮಳೆಗಾಲ ಮುಗಿದ ಮೇಲೆ ಪಂಪುಸೆಟ್ಟುಗಳನ್ನು ಕೂರಿಸಬೇಕಾಗಿದೆ. ಈ ಯೋಜನೆಗಳನ್ನು ಮಾಡಬೇಕಾದಾಗ ಮುಂಬರುವಂಥ ತೊಡಕುಗಳನ್ನು ವಿಚಾರಣೆ ಮಾಡದೇ ಅಧಿಕಾರಿಗಳು ಮಾಡಿರುವಂಥ ಕಾರ್ಯಕ್ರಮದಿಂದ ಅನೇಕರಿಗೆ ತೊಂದರೆಯಾಗಿರುವುದನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ನೀರಾವರಿ ಯೋಜನೆಗಳಲ್ಲಿ ಬಹಳಷ್ಟು ಬದಲಾವಣೆ ಆಗಬೇಕೆಂದು ಹೇಳುತ್ತೇನೆ ಆಗ ಹೆಚ್ಚು ಜನರು ಪಂಪುಸೆಟ್ಟುಗಳನ್ನು ಹಾಕಲು ಹಾಗೂ ಕೊಳವೆ ಬಾವಿಗಳನ್ನು ತೆಗೆಸಲಿಕ್ಕೆ ಮುಂದೆ ಬರುತ್ತಾರೆ. ಈ ಸಂದರ್ಭದಲ್ಲಿ ಏನು ತೊಂದರೆಯಾಗಿದೆ ಅಂದರೆ ಒಂದೊಂದು ಜಿಲ್ಲೆಯಲ್ಲಿ ಒಬ್ಬಿಬ್ಬರು ಜಿಯಾಲಜಿಸ್ಟ್ ಇರುವುದರಿಂದ, ಜಿಯಾಲಿಜಿಸ್ಟ್ ಡಿಪಾರ್ಟ್‌ಮೆಂಟಿನಿಂದ ಸಿಕ್ಕಬೇಕಾದಂಥ ಸರ್ಟಿಫಿಕೇಟ್ ಸಿಕ್ಕುತ್ತಿಲ್ಲ. ಇದರ ಜೊತೆಗೆ ಪಂಪುಸೆಟ್‌ಗಳಿಗೆ ವಿದ್ಯುದೀಕರಣದ ಪ್ರಶ್ನೆ ಬಂದಾಗ ಟಾರ್ಗೆಟ್ ನಿಗದಿ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಟಾರ್ಗೆಟ್‌ನ್ನು ನಿಗದಿ ಮಾಡುವಾಗಲೂ ಸಹಿತ ಹಿಂದಿನ ೩ ವರ್ಷಗಳ ಸರಾಸರಿಯನ್ನು ಹಿಡಿದು ಟಾರ್ಗೆಟ್‌ನ್ನು ನಿಗದಿ ಮಾಡಿದ್ದೀರಾ ? ೩ ವರ್ಷಗಳ ಟಾರ್ಗೆಟ್‌ನ ಸರಾಸರಿ ಎಂದರೆ ಅಲ್ಲಿರತಕ್ಕ ಪೊಟೆನ್‌ಷಿಯಾಲಿಟಿಯನ್ನು ನೋಡಿಕೊಂಡು ಫಿಕ್ಸ್ ಮಾಡಬೇಕೇ ಹೊರತು ಕೇವಲ ವಿದ್ಯುದೀಕರಣ ಆಗಿರತಕ್ಕ ಪಂಪುಸೆಟ್ಟುಗಳ ಮೇಲೆ ಟಾರ್ಗೆಟ್ ಫಿಕ್ಸ್ ಮಾಡಿ ಆ ಟಾರ್ಗೆಟ್ ಆಗುವತನಕ ನಿಮಗೆ ಕೊಡುವುದಿಲ್ಲವೆಂದು ಹೇಳುತ್ತಿರುವುದರಿಂದ ಅನೇಕ ಸಂದರ್ಭಗಳಲ್ಲಿ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಈ ವಿಚಾರದಲ್ಲಿ ಸರ್ಕಾರ ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಆಶಯ ಮಾಡುತ್ತೇನೆ. ಇವತ್ತು ಜನರಿಗೆ ಬೇಕಾದಂಥ ಬಹಳ ಮುಖ್ಯವಾದ ವಿಚಾರ ಎಂದರೆ ಪಿ.ಎಲ್.ಡಿ ಬ್ಯಾಂಕ್‌ಗಳಿಂದ, ಭೂ ಅಭಿವೃದ್ಧಿ ಬ್ಯಾಂಕ್‌ಗಳಿಂದ ಸಾಲದ ಸೌಲಭ್ಯ.........

ಶ್ರೀ ಆರ್. ಎನ್. ನಾಯಕ್.—ಟ್ಯಾಕ್ಸ್ ಹಾಕಿದ್ದು ಬಹಳ ಒಳ್ಳೆಯದಾಯಿತೆಂದು ನೀವು ಹೇಳುತ್ತಿದ್ದೀರಾ ?......

ಶ್ರೀ ಸಿ. ಎಂ. ಉದಾಸಿ.—ಸ್ವಾಮಿ, ಟ್ಯಾಕ್ಸ್‌ನ್ನು ಹಾಕದಿದ್ದರೆ ಯಾವುದೇ ಅಭಿವೃದ್ಧಿ ಕಾರ್ಯಗಳನ್ನೂ ಮಾಡಲಿಕ್ಕೆ ಬರುವುದಿಲ್ಲ ಎಂಬುದು ತಮಗೂ ಗೊತ್ತಿರಬಹುದು. ಇದು ದ್ವಂದ್ವನೀತಿ. ಜನರ ಮೇಲೆ ಟ್ಯಾಕ್ಸ್ ಹಾಕಬಾರದು, ಆದರೆ ಎಲ್ಲಾ ಅಭಿವೃದ್ಧಿ ಕೆಲಸಗಳನ್ನೂ ಸರ್ಕಾರ ಮಾಡಬೇಕೆಂದು ಹೇಳುವುದಾದರೆ ಯಾವರೀತಿ ಆಗಬೇಕೆಂದು ಹೇಳುತ್ತೀರಾ ? ಟ್ಯಾಕ್ಸ್ ಹಾಕದಿದ್ದರೆ ಯಾವ ಕೆಲಸವೂ ಆಗುವುದಿಲ್ಲ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಅರಣ್ಯ ಭೂಮಿಯನ್ನು ಅಕ್ರಮ ಸಾಗುವಳಿ ಮಾಡುತ್ತಿರುವವರಿಗೆಲ್ಲಾ ಆ ಜಮೀನನ್ನು ಅವರಿಗೇ ಸಕ್ರಮ ಮಾಡಿಕೊಡುತ್ತೇವೆಂದು ಹೇಳುವುದು ಸರಿಯಲ್ಲ. ಯಾರ್ಯಾರು ಇದುವರೆಗೂ ಅರಣ್ಯ ಭೂಮಿಯನ್ನು ಅಕ್ರಮ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ ಅದನ್ನು ಅವರವರಿಗೇ ಸಕ್ರಮ ಮಾಡಿಕೊಡುತ್ತಾ ಹೋದರೆ ಇನ್ನು ಸ್ವಲ್ಪ ದಿವಸದಲ್ಲಿ ಅರಣ್ಯ ಪ್ರದೇಶವೆಲ್ಲಾ ಪೂರ್ತಿ ನಾಶವಾಗುತ್ತದೆಂಬುದು ತಮಗೂ ಗೊತ್ತಿದೆ. ಇವತ್ತು ಅಕ್ರಮ ಸಾಗುವಳಿ ಮಾಡಿದರೆ ಇನ್ನೂ ೪-೬ ವರ್ಷ ಕಳೆದ ಮೇಲಾದರೂ ಆ ಜಮೀನು ನಮಗೇ ಸಿಕ್ಕುತ್ತದೆಂಬ ಭಾವನೆ ಅವರಿಗಿದೆ. ಇದು ದ್ವಂದ್ವ ನೀತಿ. ಅಕ್ರಮ ಸಾಗುವಳಿ ಮಾಡಿದವರಿಗೆ ಆ ಜಮೀನನ್ನು ಸಕ್ರಮ ಮಾಡಿದರೂ ಸಹಿತ ಅದಕ್ಕೂ ಒಂದು ದ್ವಂದ್ವ ನೀತಿಯನ್ನು ನಾವು ಅನುಸರಿಸಿದ್ದೇವೆ. ಮಳೆ ಆಗಲಿಲ್ಲವೆಂದು ಕರನಿರಾಕರಣೆ ಮಾಡಿ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡಿ ಎಂದು ಅವರು ಕೇಳುತ್ತಿದ್ದಾರೆ. ಅವರು ಹೇಳುತ್ತಿರುವ ಹಾಗೆ ಮಾಡಿದರೆ ಅಭಿವೃದ್ಧಿ ಕೆಲಸಗಳನ್ನು ಯಾವರೀತಿ ಮಾಡಬೇಕು ? ಇದು ದ್ವಂದ್ವ ನೀತಿ. ಕರ ಹಾಕಬೇಡಿ. ಕೆಲಸ ಮಾಡಿ ಎಂದರೆ ಅದು ಹೇಗೆ ಆಗುತ್ತದೆಂಬುದನ್ನು ಮಾನ್ಯ ನಾಯಕ್‌ರವರು ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಪಟವಂಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ೧೯೭೮ನೇ ಇಸವಿಗಿಂತ ಹಿಂದೆ ಸಾಗುವಳಿ ಮಾಡಿರತಕ್ಕ ಜಮೀನುಗಳನ್ನು ಸಕ್ರಮ ಮಾಡಬೇಕೆಂಬ ಮಾತನ್ನು ಮಾತ್ರ ನಾವು ಹೇಳುತ್ತಿದ್ದೇವೆಯೇ ಹೊರತು ೧೯೭೮ನೇ ಇಸವಿಯಿಂದೀಚೆಗೆ ಅಕ್ರಮ ಸಾಗುವಳಿ ಮಾಡಿದಂಥ ಭೂಮಿಯನ್ನು ಸಕ್ರಮ ಮಾಡಿಕೊಡಿಯೆಂದು ಹೇಳತಕ್ಕ ಮಾತು ನಮ್ಮದಲ್ಲ. ದಯವಿಟ್ಟು ಇಂಥ ಜಮೀನುಗಳನ್ನು ಸರ್ಕಾರಕ್ಕೆ ತೆಗೆದುಕೊಂಡು ೧೯೭೮ನೇ ಇಸವಿಗಿಂತ ಹಿಂದೆ ಸಾಗುವಳಿ ಮಾಡುತ್ತಿದ್ದ ಜಮೀನನ್ನು ಆ ಬಡ ಜನರಿಗೇ ಮಂಜೂರು ಮಾಡುವ ಬಗ್ಗೆ ಮಾತನಾಡಿ.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಪಟವಂಕ್ಕಿ ರತ್ನಾಕರ್‌ರವರು ಏನು ಹೇಳುತ್ತಿದ್ದಾರೆ ಆ ಮಾತಿನಲ್ಲಿ ನಾನು ವಿಶ್ವಾಸ ಇಡುತ್ತೇನೆ. ಇಲ್ಲಿ ಭಾಷಣ ಮಾಡುವುದು ಒಂದು ರೀತಿಯಾದರೆ ಇದರ ಹಿಂದಿರುವ ಉದ್ದೇಶ ಏನೆಂದರೆ ನೀವು ನಾಲ್ಕು ಎಕರೆ ಸಾಗುವಳಿ ಮಾಡುತ್ತಿದ್ದರೆ. ಅದರ ಜೊತೆಗೆ ಇನ್ನೂ ಎರಡು ಎಕರೆ ಮಾಡಿ, ಇಷ್ಟು ಜಮೀನನ್ನೂ ಅವರು ೧೯೭೮ನೇ ಇಸವಿಗಿಂತ ಮುಂಚಿತವಾಗಿ ಸಾಗುವಳಿ ಮಾಡುತ್ತಿದ್ದರು ಎಂದು ಹೇಳಿ ನಾನು ೬ ಎಕರೆಗೂ ಮಂಜೂರಾತಿ ಮಾಡಿಸಿಕೊಡುತ್ತೇನೆಂದು ಹೇಳುತ್ತಿರುವಂತಿದೆ ಇದು. ಈ ಒಂದು ದೃಷ್ಟಿಯಿಂದ ನಾನು ತಮಗೆ ಹೇಳುತ್ತಿದ್ದೇನೆ, ಇದರ ಅರ್ಥವನ್ನು ಮಾನ್ಯ ಸದಸ್ಯರು ಅನರ್ಥ ಮಾಡಿಕೊಳ್ಳಬಾರದು. ಸರಿಯಾದ ಅರ್ಥವನ್ನು ಅನರ್ಥ ಮಾಡಿಕೊಳ್ಳುವುದರಿಂದ ಯಾವುದೇ ಪ್ರಯೋಜನವೂ ಆಗುವುದಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಸ್ವಾಮಿ, ವರ್ಷಕ್ಕೆ ೨೫ ಕೋಟಿ ರೂಪಾಯಿ ಹಾನಿಯನ್ನು ಅನುಭವಿಸುತ್ತಿರತಕ್ಕ ವಿಶ್ವೇಶ್ವರಯ್ಯ ಕಬ್ಬಿಣದ ಕಾರ್ಖಾನೆ......

ಶ್ರೀ ಆರ್. ಎನ್. ನಾಯಕ್.—ಪಿ.ಎಲ್.ಡಿ. ಬ್ಯಾಂಕ್ ಬಗ್ಗೆ ನಿಮ್ಮ ಭಾಷಣ ಮುಂದುವರಿಸಿ.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಪಟವಂಕ್ಕಿ ರತ್ನಾಕರ್‌ರವರು ಶಿವಮೊಗ್ಗ ಜಿಲ್ಲೆಯವರು. ಆದ್ದರಿಂದ ಅವರು ವಿಶ್ವೇಶ್ವರಯ್ಯ ಕಬ್ಬಿಣದ ಕಾರ್ಖಾನೆ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತಾರೆ. ಸ್ವಾಮಿ, ಕರಾಕರಣೆ ಮಾಡಿ ಜನರಿಂದ ತಂದಂಥ ಹಣವನ್ನು ಈ ಕಾರ್ಖಾನೆಯಲ್ಲಿರತಕ್ಕ ನೌಕರರು ಪ್ರತಿ ವರ್ಷ ೨೫ ಕೋಟಿ ರೂಪಾಯಿ ಲಾಸ್ ಮಾಡುತ್ತಿದ್ದಾರೆ ಎನ್ನತಕ್ಕ ವಿಚಾರದಲ್ಲಿ ನಾನು ಮಾತನಾಡಬೇಕಾಗಿದೆ. ಅಲ್ಲಿ ಏನು ಹಣವನ್ನು ತೊಡಗಿಸಿದೆ ಅದನ್ನು ರಕ್ಷಣೆ ಮಾಡಬೇಕೆಂಬ ವಾದ ನನ್ನದು ಇದರಲ್ಲಿ ನಾವು ಸ್ವಂದ್ವ ನೀತಿಯನ್ನು ಅನುಸರಿಸಬಾರದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದೆ ೨೫ ಕೋಟಿ ರೂಪಾಯಿ ಹಣ ಇದ್ದಿದ್ದರೆ ಪ್ರತಿಯೊಬ್ಬ ರೈತನಿಗೂ ೧೦-೧೦ ಸಾವಿರ ರೂಪಾಯಿ ಕೊಟ್ಟು ಶೇಕಡ ೨೫ರಷ್ಟು ಸಹಾಯಧನವನ್ನು ಕೊಟ್ಟಿದ್ದಿದ್ದರೆ ಪ್ರತಿ ವರ್ಷವೂ ೨೫ ಸಾವಿರ ಕುಟುಂಬಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಬಹುದಿತ್ತು ಎನ್ನತಕ್ಕ ವಿಚಾರವನ್ನು ತಮ್ಮ ಮುಂದೆ ನಾನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆ ಪಡುತ್ತಿದ್ದೇನೆ.

ಮತ್ತೆ ಈವತ್ತಿನ ದಿವಸ ಪಿ.ಎಲ್.ಡಿ. ಬ್ಯಾಂಕ್‌ಗಳ ವಿಚಾರದಲ್ಲಿ ಹೇಳುವುದಾದರೆ ೧೭೧ ಬ್ಯಾಂಕ್‌ಗಳಲ್ಲಿ ಈವತ್ತಿನ ದಿವಸ ರೈತರಿಗೆ ಸಾಲ ಸೌಲಭ್ಯ ಸಿಗದಂತಾಗಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕಾರಣ ಮಾನ್ಯ ನಾಯಕರಿಗೆ ಗೊತ್ತಿಲ್ಲ. ೧೭೧ ಪಿಎಲ್‌ಡಿ ಬ್ಯಾಂಕ್‌ಗಳಲ್ಲಿ ಸುಮಾರು ಪ್ರತಿಯೊಂದು ಬ್ಯಾಂಕ್‌ನಲ್ಲೂ ಐದುನೂರಕ್ಕೂ ಹೆಚ್ಚು ಸಾಲವನ್ನು ಮಂಜೂರು ಮಾಡದೆ ಇರತಕ್ಕ ಪರಿಸ್ಥಿತಿಯಲ್ಲಿ ಇರುತ್ತದೆ. ಶೇಕಡಾ ೪೦ಕ್ಕೂ ಕಡಿಮೆ ವಸೂಲಾತಿ ಆಗಿರುವುದೇ ಇದಕ್ಕೆ ಕಾರಣವೆಂದು ಮಾನ್ಯ ಸದಸ್ಯರಿಗೆ ಗೊತ್ತಿದೆಯೆಂದು ಭಾವಿಸುತ್ತೇನೆ. ಇದು ನಬಾರ್ಡ್ ಯೋಜನೆ ಕೇಂದ್ರ ಸರ್ಕಾರದ ನೀತಿ ಇರುತ್ತದೆ. ಮಾನ್ಯ ಕೆ.ಎಚ್. ಪಾಟೀಲ್‌ರವರಿಗೆ ಗೊತ್ತಿರುತ್ತದೆ. ಅದಕ್ಕಾಗಿ ಅವರು ಸುಮ್ಮನೆ ಕುಳಿತಿದ್ದಾರೆ. ಈ ಒಂದು ಆತಂಕ ರಾಜ್ಯಕ್ಕೆ ರಾಜ್ಯಕ್ಕೆ ಅಲ್ಲ, ಇಡಿ ರಾಷ್ಟ್ರದ ಪರಿಸ್ಥಿತಿಯಾಗಿದೆ. ಇದನ್ನು ಬಗೆಹರಿಸಬೇಕೆಂದರೆ ಕೇಂದ್ರ ಸರ್ಕಾರದವರೂ ಸಹ ಪ್ರಯತ್ನ ಮಾಡಬೇಕು. ಜೊತೆಗೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಪ್ರಯತ್ನ ಮಾಡಿ ಈವತ್ತು ಎಲ್ಲರಿಗೂ ಸಾಲ ಸಿಗುವಂಥ ವಿಚಾರವನ್ನು ಮಾಡಬೇಕೆಂದು ನಾನು ಇಲ್ಲಿ ಹೇಳುತ್ತಿದ್ದೇನೆ. ಕಳೆದ ವರ್ಷ ಮತ್ತು ಹಿಂದಿನ ವರ್ಷದ ಉದಾಹರಣೆಯನ್ನು ಇಟ್ಟುಕೊಂಡು ನಮ್ಮ ಸರ್ಕಾರದವರು ಆಗುಹೋಗುಗಳ ಬಗ್ಗೆ ಚಿಂತನೆ ಮಾಡತಕ್ಕಂಥದ್ದು ಇದೆ. ರಾಯಬರೇಲಿ, ಅಮೇಥಿ ಈವತ್ತಿನ ದಿವಸ ಯಾವ ರೀತಿ ಮುಂದುವರಿದಿದೆ ಅದೇ ರೀತಿಯಲ್ಲಿ ಚಿಂತನೆ ಮಾಡಬೇಕೆಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಹದಿನೈದು ವರ್ಷಗಳ ಬಡ್ಜೆಟ್ ಏನು ಇದೆ ಇದನ್ನು ಸ್ಥೂಲವಾಗಿ ವಿಚಾರ ಮಾಡಿ ತರಬೇಕು ಎನ್ನುವ ವಿಚಾರದಲ್ಲಿ

೧೫ ವರ್ಷಗಳಿಗೆ ಸಂಬಂಧಪಟ್ಟ ಹಾಗೆ ಯೋಜನೆಗಳನ್ನು ತರಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ ವಿಚಾರಕ್ಕೆ ಬಂದಾಗ ಈವತ್ತು ನಾವು ಅಭಿಮಾನದಿಂದ ಹೇಳಬೇಕಾಗುತ್ತದೆ. ನಮ್ಮ ರಾಷ್ಟ್ರದ ಪ್ರಧಾನಿಯವರು ೨೧ನೇ ಶತಮಾನಕ್ಕೆ ಹೋಗುವಂಥ ಚಿಂತನ ಮಾಡುವಾಗ ಇಡೀ ರಾಜ್ಯದ ೧೫ ವರ್ಷಗಳ ಯೋಜನೆಯ ಬಗ್ಗೆ ಮಾತನಾಡಿದರೆ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳು ಬಹಳ ಒಳ್ಳೆಯದೆಂದು ಹೇಳುವುದಕ್ಕೆ ಮನಸ್ಸು ಮಾಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ರೈತರು ಅಭಿವೃದ್ಧಿಯಾಗಬೇಕು ಎನ್ನುವ ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಗ್ರಾಮೀಣ ಭಾಗದಲ್ಲಿ ರೈತರ ವಿಚಾರದಲ್ಲಿ ಬಹಳ ಸಂದರ್ಭದಲ್ಲಿ ದೂಷಣೆ ಮಾಡುವುದು ಸರಿಯಲ್ಲ. ಅಂದರೆ ಮಾರ್ಕೆಟ್‌ನಲ್ಲಿ ೫೦ ಪೈಸೆ ಹಾಲಿನ ಬೆಲೆ ಜಾಸ್ತಿ ಮಾಡಿ ರೈತರಿಗೆ ಕೊಡುವ ಪ್ರಸಂಗ ಬಂದರೆ ಅದನ್ನು ಪ್ರತಿಭಟನೆ ಮಾಡಲು ವಿಚಾರ ಮಾಡುತ್ತಾರೆ. ಆದರೆ ರೈತರು ಕೊಳ್ಳುವಂಥ ವಸ್ತುಗಳಿಗೂ ರೈತರಿಗೆ ಸಿಗುವಂಥ ಬೆಲೆಗಳ ವಿಚಾರದಲ್ಲಿ ಯಾರು ಯೋಚನೆ ಮಾಡುವುದಿಲ್ಲ. ಇದು ಕೇವಲ ರಾಜ್ಯ ಸರ್ಕಾರದ ನೀತಿಯ ಮೇಲೆ ಅವಲಂಬಿಸಿರತಕ್ಕಂಥದಲ್ಲ. ಇದರಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ನೀತಿಯೂ ಇರುತ್ತದೆ. ಕೇಂದ್ರ ಸರ್ಕಾರದವರು ತಳೆದಿರುವಂಥ ಆಮದು, ಎಕ್ಸ್‌ಪೋರ್ಟ್ ಅವಲಂಬಿತ ನೀತಿಯಾಗಿರುತ್ತದೆ. ಈವತ್ತಿನ ದಿವಸ ರೇಷ್ಮೆ ಬೆಲೆ ಕಡಿಮೆಯಾಗಬೇಕಾದರೆ ರೇಷ್ಮೆಯನ್ನು ಪರದೇಶಗಳಿಂದ ಆಮದು ಮಾಡುತ್ತಿರುವುದರಿಂದ ರೇಷ್ಮೆ ಬೆಲೆಯು ಕಡಿಮೆಯಾಗಿದೆ ಎಂದು ಅನೇಕ ಉದ್ದಿಮೆದಾರರು ಹೇಳುತ್ತಿದ್ದಾರೆ. ಜೊತೆಗೆ ಸೋಯಬೀನ್ ಆಮದು ಮಾಡಿಕೊಳ್ಳುತ್ತಿರುವುದರಿಂದ ಬೆಲೆಯಲ್ಲಿ ವ್ಯತ್ಯಾಸವಾಗಿರುವುದು ಕಂಡುಬಂದಿದೆ. ಪ್ರತಿಯೊಂದು ಬೆಳೆಗಳನ್ನು ನಿಗದಿಮಾಡಿ ಇಂತಿಂಥ ಕ್ರಾಪ್‌ಗಳನ್ನು ಇಷ್ಟು ಬೆಳೆಯಲೇ ಬೇಕು ಎನ್ನುವುದನ್ನು ಪ್ರತಿಯೊಬ್ಬರಿಗೂ ತಿಳಿಸಬೇಕು. ಪ್ರತಿಯೊಬ್ಬರು ಬೆಳೆಯಲು ಪ್ರಯತ್ನ ಪಡಬೇಕು. ಪ್ರತಿಯೊಂದು ಬೆಳೆಯಲ್ಲಿಯೂ ಹಾನಿಯನ್ನು ಅನುಭವಿಸಿಕೊಂಡು ಬರುತ್ತಿದ್ದೇವೆ. ಕಳೆದ ಮೂವತ್ತು ವರ್ಷಗಳಲ್ಲಿ ಸಾಕಷ್ಟು ಆಹಾರವನ್ನು ಬೆಳೆಯದಿದ್ದ ಕಾರಣದಿಂದಾಗಿ. ಹಾನಿಯನ್ನು ಅನುಭವಿಸಿ ರಾಷ್ಟ್ರದಲ್ಲಿರತಕ್ಕಂಥ ಬೆಲೆಯ ನೀತಿಯಲ್ಲಿ ತೊಂದರೆಯಾಗಿದೆ ರೈತರ ತೊಂದರೆಯನ್ನು ನೀಗುವ ಸಲುವಾಗಿ ಸರಿಯಾದ ಒಂದು ಬೆಲೆಯ ನೀತಿಯನ್ನು ಹಾಕಿಕೊಳ್ಳಬೇಕಾಗಿದೆ. ಈವತ್ತು ಹತ್ತಿ, ಗೋಧಿ ಮತ್ತು ಭತ್ತದ ಬೆಲೆಗಳನ್ನು ಕೇಂದ್ರ ಸರ್ಕಾರದವರು ನಿಗದಿ ಮಾಡುತ್ತಿರುತ್ತಾರೆ. ಅವರು ನಿಗದಿ ಮಾಡತಕ್ಕಂಥ ಬೆಲೆಗಳನ್ನು ನೋಡಿದರೆ ರಾಜ್ಯದಲ್ಲಿ ಬೆಳೆಗಾರರು ಕಷ್ಟಪಟ್ಟು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಬಹಳ ತೊಂದರೆಯಲ್ಲಿದ್ದಾರೆ. ಕೇಂದ್ರ ಸರ್ಕಾರದವರೂ ಸಹಿತ ರೈತರು ಬೆಳೆದ ಬೆಳೆಗಳಿಗೆ ಹೆಚ್ಚಿನ ಬೆಲೆಯನ್ನು ನಿಗದಿ ಮಾಡಬೇಕೆಂದು ಹೇಳಿ ಈವತ್ತಿನ ದಿವಸ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

೪-೦೦ ಪಿ.ಎಂ.

ಶ್ರೀ ಬಿ.ಎ. ಉಮರಬ್ಬ (ವಿಟ್ಲ).— ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಅರ್ಥ ಸಚಿವರೂ ಆದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಂಡಿಸಿರತಕ್ಕ ಬಜೆಟ್ ಬಗ್ಗೆ ಕೆಲವು ವಿಚಾರಗಳನ್ನು ಸಭೆಯ ಮುಂದಿಡಲಿಕ್ಕೆ ಬಯಸುತ್ತೇನೆ. ನನ್ನ ಮಿತ್ರರೊಬ್ಬರು ಇದನ್ನು ಸ್ವಾಗತಿಸಿ ಎಂದು ಹೇಳಿದ್ದಾರೆ. ಅವರ ತೃಪ್ತಿಗಾಗಿ ಸ್ವಾಗತ ಮಾಡುತ್ತೇನೆ. ಆದರೆ ಇದರಲ್ಲಿರುವಂಥ ಪ್ರತಿಯೊಂದು ಅಂಶಗಳನ್ನು ಸ್ವಾಗತ ಮಾಡುವಂಥ ಮುಗ್ಧ ಹೃದಯ ಅವರಿಗೂ ಇದ್ದೀತೆಂದು ಭಾವಿಸಿದ್ದೇನೆ. ಆಯವ್ಯಯ ಭಾಷಣದ ಕೆಲವಾರು ಪುಟಗಳಲ್ಲಿ ರಂಗುರಂಗಿನ ಶಬ್ದಗಳ ಮೂಲಕ ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯಿತಿಗಳ ವಿಚಾರಧಾರೆಗಳ ಜೊತೆಗೆ ಸಮ್ಮೇಳನದ ಹೊಗಳಿಕೆ ಸಹ ಇದೆ. ಸಮ್ಮೇಳನದ ಹೊಗಳಿಕೆ ಇರುವಾಗ ನನ್ನ ಮನಸ್ಸಿಗೆ ಅನ್ನಿಸಿದ್ದು ಇಷ್ಟೆ. ಸಮ್ಮೇಳನ ಎಂಬ ಶಬ್ದದ ಪ್ರಯೋಗಕ್ಕೆ ಒಂದು ನಿರ್ದಿಷ್ಟವಾದ ಅರ್ಥವಿದೆ. ಸಮ್ಮೇಳನ ಅಂದರೆ ಬಂದಂತಹ ಪ್ರತಿನಿಧಿಗಳು ಸೇರಿದಂತಹ ಪ್ರಮುಖರು ಒಟ್ಟಿಗೆ ಒಂದು ವಿಚಾರದ ಬಗ್ಗೆ ಚರ್ಚೆ ನಡೆಸಿ, ವೈಚಾರಿಕ ಮಂಥನದಲ್ಲಿ ಏನಾದರೂ ಒಳ್ಳೆಯದು ಸಿಗುತ್ತದೆ ಎಂದು ಮಾಡುವಂಥದ್ದೇ ವಿನಹ ದೊಡ್ಡ ಸಭೆ ಸೇರಿ ೩-೪ ಗಂಟೆ ಕಾಲ, ಒಬ್ಬೊಬ್ಬರಿಗೂ ಗಂಟೆಗಟ್ಟಲೆ ತಿಳಿಯದ ಹಾಗೂ ತಿಳಿಯುವ ಭಾಷೆಯ ಮೂಲಕ ಭಾಷಣ ಮಾಡುವುದು ಸಮ್ಮೇಳನ ಅನ್ನಿಸಿಕೊಳ್ಳುವುದಿಲ್ಲ. ಅಂಥ ಒಂದು ಸಮ್ಮೇಳನ ಬೆಂಗಳೂರಿನಲ್ಲಿ

ನಡೆದಾಗ, ಅದೊಂದು ಬಹಿರಂಗ-ಸಭೆಯಾಗಿ ಪರಿವರ್ತನೆಯಾಗಿ ಏನೆಲ್ಲಾ ಆಯಿತು ಎಂಬುದನು ತಾವೇ ನೋಡಿದ್ದೀರಿ ಎಂದು ಹೇಳಿರುವುದನ್ನು ನಾವು ನೋಡಿದ್ದೇವೆ. ಉರಿ ಬಿಸಿಲಿನಲ್ಲಿ ಜನರು ತಲೆಮೇಲೆ ಬಟ್ಟೆ ಹಿಡಿದು ಕುಳಿತಿದ್ದಾಗ ಕೆಲವು ಭಾಷಣಗಳ ಸುದೀರ್ಘತೆ ಎಷ್ಟಿತ್ತು ಎಂದರೆ ಎಸ್.ಕೆ. ಡೆ ಅವರ ಭಾಷಣವನ್ನು ಭಾಷಾಂತರ ಮಾಡುತ್ತಿದ್ದ ಶ್ರೀ ಎಂ.ಪಿ. ಪ್ರಕಾಶ್‌ರವರು ಭಾಷಾಂತರವನ್ನು ನಿಲ್ಲಿಸಿ ಬೇಸತ್ತು ದೂರ ಹೋಗುವ ಪರಿಸ್ಥಿತಿ ಆಗಿದ್ದರೆ ಪ್ರತಿನಿಧಿಗಳ ಪರಿಸ್ಥಿತಿ ಹೇಗಿತ್ತು ಎಂಬುದಕ್ಕೆ ಬೇರೊಂದು ಜೀವಂತ ಉದಾಹರಣೆಯ ಅಗತ್ಯವಿಲ್ಲವೆಂದು ಭಾವಿಸಿದ್ದೇನೆ. ಇನ್ನು ಈ ವಿಚಾರ ಬಡ್ಜೆಟ್ ಸಂದರ್ಭಗಳಲ್ಲಿ ಪ್ರಸ್ತಾಪವಾಗಿರುವುದರಿಂದ, ಹಣಕಾಸಿನ ಬಗ್ಗೆ ನೇರವಾಗಿ ಇಲ್ಲಿ ಚರ್ಚೆ ನಡೆಯುವಾಗ ಈ ಸಮ್ಮೇಳನಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರೇ ಹೇಳಿದ ಹಾಗೆ ಸುಮಾರು ಲೆಕ್ಕದಲ್ಲಿ ೮೮ ಲಕ್ಷ ರೂಪಾಯಿ ಖರ್ಚಾಗಿದೆ. ೮೮ ಲಕ್ಷ ರೂಪಾಯಿಗಳ ಖರ್ಚು, ಅಷ್ಟು ಪ್ರತಿನಿಧಿಗಳು ಇಲ್ಲಿಗೆ ಬಂದಿರುವುದು, ಒಂದಿಷ್ಟು ಜನರ ಬೇರೆ ಬೇರೆ ಭಾಷೆಯ ಭಾಷಣ, ಹೊಗಳುವ ಮತ್ತು ಹೊಗಳಿಸು ವಂಥ ವ್ಯವಸ್ಥೆಯ ಸಮ್ಮೇಳನವಾಯಿತೇ ವಿನಹ ನಿಜವಾದ ಅರ್ಥದಲ್ಲಿ ನಾವು ಹೇಗೆ ಭಾವಿಸಿದ್ದೇವೋ ಅಂಥ ಸಮ್ಮೇಳನವಾಗಲೀ ವಿಚಾರ ಮಂಥನವಾದದ್ದಾಗಲಿ, ಆಗಲಿಲ್ಲ ಸಮ್ಮೇಳನಕ್ಕೆ ಬಂದಿದ್ದವರಿಗೆ ಸೌಕರ್ಯ ದೊರೆತದ್ದು ಇಲ್ಲ. ಇದು ತಮಗೆಲ್ಲಾ ಗೊತ್ತಿರತಕ್ಕ ವಿಚಾರ. ಉರಿ ಬಿಸಿಲಿನ ಬಗ್ಗೆ ಮಾತ್ರ ಹೇಳುತ್ತಿಲ್ಲ, ಊಟದ ವ್ಯವಸ್ಥೆ ಎಷ್ಟು ಅವ್ಯವಸ್ಥೆಯಾಗಿತ್ತು ಎಂಬುದನ್ನು ಮಾನ್ಯ ವೆಂಕಟರಾಮಯ್ಯ ನವರು ಹೇಳಿದರು.

ಅಧ್ಯಕ್ಷರು.— ಬಡ್ಜೆಟ್ಟಿಗೆ ಬನ್ನಿ.

ಶ್ರೀ ಸಿ.ಬೈರೇಗೌಡ.— ಅವರು ಅಲ್ಲಿಗೆ ಬಂದಿಲ್ಲ. ಅದಕ್ಕೆ ಸಾಕ್ಷಿ ಏನೆಂದರೆ ಮಾನ್ಯ ಪ್ರಕಾಶ್ ರವರು ಭಾಷಾಂತರಿಸುತ್ತಿದ್ದುದನ್ನು ಮಧ್ಯದಲ್ಲೇ ಬಿಟ್ಟುಹೋದರು ಎಂದು ಹೇಳಿದ್ದೇ ಸಾಕ್ಷಿ.

ಶ್ರೀ ಬಿ.ಎ. ಉಮರಬ್ಬ.— ಮಾನ್ಯ ಬೈರೇಗೌಡರು ಪ್ರತಿಕ್ರಿಯೆ ವ್ಯಕ್ತಪಡಿಸುವ ಆವಶ್ಯಕತೆ ಇಲ್ಲ. ಏಕೆಂದರೆ ಹೋಗದೆ, ಬಾರದೆ, ಮಾಡದೆ ಕೊಟ್ಟಿದ್ದೇವೆ. ಮಾಡಿದ್ದೇವೆ, ಹೋಗಿದ್ದೇವೆ. ಬಂದಿದ್ದೇವೆ. ಕಾರಿನಲ್ಲಿ ಹೋಗಿದ್ದೇವೆ ಎಂದು ಹೇಳುವಂಥ ಒಂದು ಅಭ್ಯಾಸ ಅವರಿಗೆ ಇರುವುದರಿಂದ ಆ ಬಗ್ಗೆ ಟೀಕೆ ಮಾಡುವುದಿಲ್ಲ. ಏಕೆಂದರೆ ಹೋದದ್ದು ಮಾತ್ರವಲ್ಲ......

ಶ್ರೀ ಸಿ. ಬೈರೇಗೌಡ.— ಅವರಿಗೆ ಅದರ ಗಂಧ ಕೂಡ ಗೊತ್ತಿಲ್ಲ. ಆದರೂ ಏತಕ್ಕೆ ಮಾತನಾಡ ತ್ತಾರೆಂದು ಅರ್ಥವಾಗುತ್ತಿಲ್ಲ. ಇದೇ ಮಾನ್ಯ ಉಮರಬ್ಬನವರು ಹೊರಗಡೆ ಬಂದು ಏನು ಮಾತನಾಡಿ ದ್ದಾರೆಂದು ಈ ಸಂದರ್ಭದಲ್ಲಿ ಹೇಳಬಹುದೇ?

ಶ್ರೀ ಬಿ. ಎ. ಉಮರಬ್ಬ.— ಹೇಳಬಹುದು.

ಶ್ರೀ ಸಿ. ಬೈರೇಗೌಡ.— ಅವರು ಉತ್ತೇಜನ ಕೊಟ್ಟರು ಎಂಬ ಮಾತನ್ನು ಹೇಳಬಹುದೆ? ಅಂತರಂಗದಲ್ಲಿ ಒಂದು ಇಟ್ಟುಕೊಂಡು ಮಾತನಾಡುವುದು ಅವರಿಗೇ ಶೋಭೆ. ಅದನ್ನು ಅವರಿಗೆ ಬಿಡುತ್ತೇನೆ.

ಶ್ರೀ ಬಿ.ಎ. ಉಮರಬ್ಬ.— ನಾನು ಬಂದಿದ್ದೆನೇ ಇಲ್ಲವೇ ಎಂಬುದಕ್ಕೆ ತಮ್ಮ ಪಕ್ಕದಲ್ಲಿ ಕುಳಿತಿದ್ದ ಮಾನ್ಯ ಕೃಷ್ಣಾ ರೆಡ್ಡಿಯವರನ್ನು ಕೇಳಿದರೆ ಗೊತ್ತಾಗುತ್ತದೆ, ಪೇಡಗಳನ್ನು ಬಹಳಷ್ಟು ಸಲ ಹಂಚುವಾಗ ಉಮರಬ್ಬನವರಿಗೆ ಜಾಸ್ತಿ ಕೊಡಿ ಎಂದವರು ಇದ್ದಾರೆ.

ಮಾನ್ಯ ಎಂ.ಪಿ. ಪ್ರಕಾಶ್ ಅವರು ಅರ್ಧದಲ್ಲೇ ಹೋಗಲಿಲ್ಲ ಎಂದು ಹೇಳಿದಗಲ್ಲ.........

ಶ್ರೀ ಸಿ. ಬೈರೇಗೌಡ.— ನೀವು ಹೇಳಿದಿರಲ್ಲಾ ಬಿಸಿಲು. ಅದರಲ್ಲಿ ನಾನೂ ಕುಳಿತಿದ್ದೇನೆ. ಎಂಬುದನ್ನು ಮರೆಯಬೇಡಿ.

ಶ್ರೀ ಬಿ.ಎ. ಉಮರಬ್ಬ.—ನೀವು ಹೇಳಿದ ಮಾತನ್ನು ಮಾನ್ಯ ಎಂ.ಪಿ. ಪ್ರಕಾಶ್ ಅವರು ಹೇಳಿದರೆ ನಾನು ನನ್ನ ಮಾತನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಬಿ.ಎ. ಉಮರಬ್ಬ.—ಆದ್ದರಿಂದ ಈ ತರಹದ ಒಂದು ಸಮ್ಮೇಳನ, ಇಷ್ಟೊಂದು ವೆಚ್ಚ ಆಗುವುದು, ಅದು ತಾನು ಕಾಣಬೇಕಾದ ಸಾರ್ಥಕತೆಯನ್ನು ಕಾಣದೇ ಇದ್ದರೆ ಯಾರಿಗಾದರೂ

ಮನಸ್ಸಿಗೆ ಬೇಸರವಾಗುವುದು ಸಹಜವೇ ಎಂದು ನಾನು ಭಾವಿಸಿಕೊಂಡಿದ್ದೇನೆ. ಒಂದು ವಿಚಾರ ಎಂದರೆ ಊಟದ ಬಗ್ಗೆ ಚರ್ಚೆಗಳು ಆಯಿತು. ಎಷ್ಟು ಊಟದ ಪಾಕೆಟ್‌ಗಳನ್ನು ತರಿಸಿದ್ದರು, ಎಷ್ಟು ಪಾಕೆಟ್‌ಗಳು ಹೋಯಿತು, ಎಷ್ಟು ಬಂತು, ಎಷ್ಟು ಉಳಿಯಿತು, ಯಾರಿಗೆ ಎಷ್ಟು ಕಾಂಟ್ರಾಕ್ಟ್ ಕೊಟ್ಟಿದ್ದರು, ಅವರು ಸಪ್ಲೈ ಎಷ್ಟು ಮಾಡಿದರು, ಎಷ್ಟು ತಿಂದು ಹಾಕಿದರು, ಹಣ ಅಡ್ವಾನ್ಸ್ ಎಷ್ಟು ಕೊಟ್ಟಿತ್ತು ಇದಕ್ಕೆಲ್ಲಾ ಸರಿಯಾದ ಉತ್ತರ ಸಿಗಲಿಲ್ಲ. ಅದಕ್ಕೆ ಉತ್ತರ ಕೊಟ್ಟಾರು ಎಂದು ಭಾವಿಸಿದ್ದೇನೆ. ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ ಚುನಾವಣೆ ಮಾಡುವುದರ ಮೂಲಕ ಜನರ ಕೈಗೆ ಅಧಿಕಾರವನ್ನು ಕೊಡುವ ಪ್ರಯತ್ನ ಮಾಡಿದ್ದೇವೆ ಅಥವಾ ಕೊಟ್ಟಿದ್ದೇವೆ ಎಂಬುದು ಮಾನ್ಯ ಹೆಗಡೆಯವರ ಹಾಗೂ ಶ್ರೀ ಹೆಗಡೆಯವರ ಸರ್ಕಾರದ ಕಲ್ಪನೆಯಾಗಿದೆ. ನಮ್ಮಲ್ಲಿ ಒಂದೊಂದು ಸಲ ಅಧಿಕಾರವನ್ನು ಕೊಟ್ಟಂಥ ಸಂದರ್ಭದಲ್ಲಿ ನಿಜವಾದ ಅರ್ಥದಲ್ಲಿ ಅಧಿಕಾರ ಸಿಕ್ಕಿದೆಯೋ ಇಲ್ಲವೋ ಎಂಬ ಅನುಮಾನ ಮೂಡುತ್ತದೆ. ಕೆಲವು ಕಡೆ ನಾವು ಜನರ ಪ್ರತಿನಿಧಿಗಳು ಏನಿದ್ದೇವೆ ನಾವು ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಬೇಕು ಎಂಬ ಉದ್ದೇಶಕ್ಕೆ ನಮ್ಮಲ್ಲಿ ಕೆಲವರನ್ನು ಅಧಿಕಾರಿವರ್ಗದಲ್ಲಿ ಇಲ್ಲದೇ ಇರುವಾಗ ಮಂಡಲಿಗಳ ಅಧ್ಯಕ್ಷರನ್ನಾಗಿ ಮಾಡುವಂಥ ಪರಿಪಾಠ ಹಿಂದಿನಿಂದ ಬಂದಿದೆ. ಅದೇರೀತಿ ಅನೇಕ ಮಂಡಲಿಗಳ ಅಧ್ಯಕ್ಷರ ನೇಮಕವಾಗಿದೆ. ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟಿದ್ದು ಇರಬಹುದು, ಕೈಗಾರಿಕೆಗಳಿಗೆ ಸಂಬಂಧಪಟ್ಟಿದ್ದು ಇರಬಹುದು ಅಂಥ ಮಂಡಲಿಗಳ ಅಧ್ಯಕ್ಷರ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ ಇದು ಕೆಲವಾರು ಪತ್ರಿಕೆಯಲ್ಲೂ ಪ್ರಸ್ತಾಪವಾಗಿದೆ. ನೇರವಾಗಿ ಅವರೊಡನೆ ಸಂಭಾಷಣೆ ನಡೆಸಿ ಪತ್ರಿಕಾಕರ್ತರು ಬರೆದಿದ್ದನ್ನು ಓದಿದ್ದೇನೆ. ಏನಾಗಿದೆಯೆಂದರೆ ಮಂಡಳಿಯ ಅಧ್ಯಕ್ಷರು ನಾಮ ಮಾತ್ರ ಕುಳಿತು ಮಂಡಲಿಯ ಅಧ್ಯಕ್ಷರುಗಳಿಗೆ ಯಾವ ಕಾರ್ಯಾಚರಣೆಯ ಅಧಿಕಾರವನ್ನೂ ನೀಡದೆ ಅಥವಾ ಸಿಗುವ ರೀತಿಯಲ್ಲಿಲ್ಲದೆ ದುಃಖಕರವಾದ ಪರಿಸ್ಥಿತಿಯಲ್ಲಿದ್ದಾರೆ. ಮತ್ತು ತಿಂಗಳಿಗೆ ೭ ಸಾವಿರವೋ ೮ ಸಾವಿರವೋ ೧೦ ಸಾವಿರವೋ, ಇನ್ನು ಯಾವುದೋ ಕೆಲವು ಎಗ್ಸಿಕ್ಯುಟೀವ್ ಮೀಟಿಂಗ್‌ಗಳನ್ನು ಸೆಂಚುರಿ ಕ್ಲಬ್‌ನಲ್ಲಿ ಮಾಡುವುದಿದ್ದರೆ ೨೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಪರಿಸ್ಥಿತಿಯಾಗಿದೆ. ಕರ್ನಾಟಕ ರಸ್ತೆ ಸಾರಿಗೆ ಮಂಡಲಿಯ ಅಧ್ಯಕ್ಷರ ಪರಿಸ್ಥಿತಿ ಏನಾಯಿತು, ಅಥವಾ ಬೇರೆ ಬೇರೆ ಅಧ್ಯಕ್ಷರ ಪರಿಸ್ಥಿತಿ ಏನಾಯಿತು ಎಂಬುದನ್ನು ಹೇಳಿಕೊಂಡಿದ್ದಾರೆ. ಅಲ್ಲಿರುವ ಮ್ಯಾನೇಜಿಂಗ್ ಡೈರೆಕ್ಟರ್ ಎಂಬ ಅಧಿಕಾರಿ ಯಾರಿದ್ದಾರೆ ಅವರದೇ ಅಂತಿಮ ತೀರ್ಮಾನವಾಗುತ್ತದೆಯೋ ವಿನಹ ಅಧ್ಯಕ್ಷರು ಕೇವಲ ಅಲಂಕಾರದ ವಸ್ತುವಾಗಿ ಕೂರುವ ಪರಿಸ್ಥಿತಿ ಇದೆ. ಇದೇರೀತಿ ನಾಳೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಆದಾಗ ಅಲ್ಲಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಯಾವುದೇ ಕಾರ್ಯಾಚರಣೆ ಮಾಡದೇ ಇರುವ ಪರಿಸ್ಥಿತಿ ನಿರ್ಮಾಣವಾಗಿ ಕೊನೆಗೆ ಅಧಿಕಾರಿಶಾಹಿತ್ವ ಈ ಕುದುರೆಯ ಸವಾರಿ ಮಾಡುವ ಭಯ ಇದೆ. ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತು ಸ್ಥಾಪನೆಯಾಗಿರುವ ಸಂದರ್ಭದಲ್ಲಿ ಜಿಲ್ಲಾ ಪರಿಷತ್ತಿನ ಕಚೇರಿ ಆಗಬೇಕೆಂದು ಅರಣ್ಯ ಇಲಾಖೆ ಇದ್ದಂಥ ಕಚೇರಿಯನ್ನು ಖಾಲಿ ಮಾಡಿಸಿ ಅದನ್ನು ಸುಸಜ್ಜಿತಗೊಳಿಸುವುದಕ್ಕೆ ೨,೬೫,೦೦೦ ರೂಪಾಯಿಗಳನ್ನು ಖರ್ಚು ಮಾಡಿ ಸುಸಜ್ಜಿತಗೊಳಿಸಿದರೂ ಒಂದೆರಡು ದಿನದಲ್ಲಿ ಆ ಕಚೇರಿ, ಕಚೇರಿಯಾಗದೆ ಮಂಗಳೂರಿನ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಕಚೇರಿ ಜಿಲ್ಲಾ ಪರಿಷತ್ತಿನ ಕಚೇರಿಯಾಗಿ ಪರಿವರ್ತನೆಯಾಯಿತು. ಇದು ಆಶ್ಚರ್ಯ. ಮ್ಯಾಜಿಕ್ ಮಾಡಿದಾಗ ಯಾವರೀತಿ ಬದಲಾವಣೆಯಾಗುತ್ತದೆ ಆ ರೀತಿಯ ಬದಲಾವಣೆ ಆಗಿದೆ. ೨,೬೫,೦೦೦ ರೂಪಾಯಿಗಳನ್ನು ಖರ್ಚು ಮಾಡಿ ಸುಸಜ್ಜಿತವಾದ ಕಚೇರಿ ಏತಕ್ಕೆ ಬದಲಾವಣೆಯಾಯಿತು ಎಂದರೆ ಯಾವ ವ್ಯಕ್ತಿಯನ್ನು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದ್ದರೋ ಆ ವ್ಯಕ್ತಿಗೆ ಮೊದಲಿನ ಕಚೇರಿಯಲ್ಲಿ ಕುಳಿತುಕೊಳ್ಳುವುದಕ್ಕೆ ಮನಸ್ಸು ಆಗಲಿಲ್ಲ ಎಂಬ ಏಕೈಕ ಕಾರಣಕ್ಕಾಗಿ ೨,೬೫,೦೦೦ ರೂಪಾಯಿಗಳನ್ನು ಖರ್ಚು ಮಾಡಿ ನಿರ್ಮಿಸಿದ ಕಚೇರಿಯನ್ನು ತಕ್ಷಣದಲ್ಲಿ ಬದಲಾಯಿಸುವ ವ್ಯವಸ್ಥೆಯಾದರೆ ಜನರ ಕೈಗೆ ಅಧಿಕಾರ ಕೊಡುತ್ತೇವೆ ಎಂಬುದು ಪ್ರಶ್ನಾರ್ಹವಾದ ವಿಚಾರ.

"ಪ್ರಥಮ ಚುಂಬನಂ ದಂತ ಭಗ್ನಂ" ಎಂಬಂತೆ ಈ ಪರಿಸ್ಥಿತಿ ಪ್ರಾರಂಭದಲ್ಲೇ ನಮ್ಮ ಜಿಲ್ಲೆಯಲ್ಲಾಗಿದೆ. ಅಧಿಕಾರ ವಹಿಸಿಕೊಂಡ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಬಂದು ಹೋಗುವುದಕ್ಕೆ ಅವರಿಗೆ ಕಾರು ಇಲ್ಲ. ಅವರನ್ನು ಸ್ಟೇಟ್ ಮಿನಿಸ್ಟರ್ ಹಾಗೂ ಡೆಪ್ಯುಟಿ ಮಿನಿಸ್ಟರ್ ಗ್ರೇಡ್ ಕೊಡುತ್ತೇವೆಂದು ಹೇಳಿ, ಅವರು ಓಡಾಡುವುದಕ್ಕೆ ಒಂದು ಕಾರು ಸಹ ಇಲ್ಲ. ಅವರ ಎದುರೇ ಸಣ್ಣ ಸಣ್ಣ

-ಧಿಕಾರಿಗಳೂ ಕೂಡ ಸರ್ಕಾರದ ಕಾರಿನಲ್ಲಿ ಹೋಗುವಾಗ ಇವರು ನಡೆದುಕೊಂಡು ಹೋಗುವ ಪರಿಸ್ಥಿತಿ ಬಂದಿದೆ. ಈ ರೀತಿಯಾದರೆ ಅವರು ಬರೀ ಮಿನಿಸ್ಟರ್ ಎಂಬುದಾಗಿ ಬೋರ್ಡ್ ಹಾಕಿಕೊಂಡು ಕೂಡ ಬೇಕಾ ? ನಮ್ಮ ಜಿಲ್ಲೆಯ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಕಾರು ಇಲ್ಲ, ಕಾರು ಕೊಡಿ ಎಂಬುದಾಗಿ ಕೇಳುತ್ತಿದ್ದೇನೆಂದು ಆ ವ್ಯಾಪ್ತಿಯಲ್ಲಿ ಭಾವಿಸಿಕೊಳ್ಳುವುದು ಬೇಡ. ಈ ರೀತಿಯಾದರೆ ಎಲ್ಲಿಗೆ ಬಂದು ನಿಲ್ಲುತ್ತದೆ ? ಮತ್ತೆ ಜಿಲ್ಲಾಪರಿಷತ್ತಿಗೆ ಅಥವಾ ಜಿಲ್ಲೆಗಳಿಗೆ ಜಿಲ್ಲಾಧಿಕಾರಿಗಳ ಮತ್ತು ಮುಖ್ಯಕಾರ್ಯದರ್ಶಿಗಳ ನೇಮಕವಾಯಿತು. ಆ ರೀತಿ ನೇಮಕವಾದ ಒಂದು ವಾರದಲ್ಲಿ ೩-೪ ಬಾರಿ ಬದಲಾವಣೆ ಮಾಡುವಂತಹ ಪರಿಸ್ಥಿತಿ ಬಂತು. ಈ ರೀತಿ ಬದಲಾವಣೆ ಮಾಡುವುದಕ್ಕೆ ಇದ್ದಂತಹ ಹಿನ್ನಲೆಯಾದರೂ ಏನು ? ಬೇರೆ ಯಾರನ್ನೋ ಜಿಲ್ಲಾಧಿಕಾರಿಗಳನ್ನಾಗಿ ನೇಮಕ ಮಾಡಿ, ಯಾರೋ ಒಬ್ಬರನ್ನ ಜಿಲ್ಲಾ ಪರಿಷತ್ತಿನ ಮುಖ್ಯಕಾರ್ಯದರ್ಶಿಯನ್ನಾಗಿ ನೇಮಕ ಮಾಡದೇ ಇದ್ದುದರಿಂದ ಈ ರೀತಿಯಾಗಿದೆ. ಇಂದಿನ ಪತ್ರಿಕೆಯಲ್ಲಿ ಬಂದಂತಹ ಹೆಸರು ನಾಳೆಯ ಪತ್ರಿಕೆಯಲ್ಲಿ ಬದಲಾವಣೆಯಾಯಿತು. ನಾಳೆಯ ಪತ್ರಿಕೆಯಲ್ಲಿ ಬಂದಂತಹ ಹೆಸರುಗಳು ನಾಡಿದ್ದು ಪತ್ರಿಕೆಯಲ್ಲಿ ಬದಲಾವಣೆಯಾಯಿತು. ಇದರಿಂದಾಗಿ ಇನ್ನೊಂದು ಮೂಲಭೂತವಾದ ಅನುಮಾನ ಏನು ಬಂತು ಎಂದರೆ, ಸಾಮಾನ್ಯ ಜನರ ಕೈಗೆ ಅಧಿಕಾರ ವನ್ನು ಕೊಡುವಂತಹ ಸಂದರ್ಭದಲ್ಲಿ ತಾವು ಯಾರನ್ನು ಜಿಲ್ಲಾಪರಿಷತ್ತಿಗೆ ಪೂರಕವಾಗಿ ಕೆಲಸ ಮಾಡುವ ಅಧಿಕಾರಿಯನ್ನಾಗಿ ಅಲ್ಲಿಯ ಒಬ್ಬ ಮುಖ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡುತ್ತಿದ್ದೀರಿ, ಐ.ಎ.ಎಸ್. ಅಧಿಕಾರಿಗಳನ್ನೇ ನೇಮಕ ಮಾಡಿದ್ದೀರಿ. ಎಲ್ಲರಿಗೂ ಪ್ರಾಮಾಣಿಕವಾಗಿ ಗೊತ್ತಿರುವ ವಿಚಾರವೇನೆಂದರೆ, ಅನೇಕ ಮಂದಿ ಐ.ಎ.ಎಸ್ ಅಧಿಕಾರಿಗಳು ಏನು ಇದ್ದಾರೆ, ಅವರಿಗೆ ನಮ್ಮ ಕನ್ನಡ ಬಾರದೇ ಇರುವ ಪರಿಸ್ಥಿತಿ ಇದೆ. ಅಲ್ಲಿಯ ಸಾಮಾನ್ಯ ಜನರ ಜೊತೆ, ಅಲ್ಲಿಯ ಅಧ್ಯಕ್ಷರ ಜೊತೆ ಕೂಡಿ ಕೆಲಸ ಮಾಡುವ ಸಂದರ್ಭದಲ್ಲಿ ನಮ್ಮ ನಾಡಿನ ಭಾಷೆ ಬರದ ಒಬ್ಬ ವ್ಯಕ್ತಿ ಸಾಮಾನ್ಯ ಜನರ ಜೊತೆಗೆ ಪೂರಕವಾಗುವುದಕ್ಕೆ ಸಾಧ್ಯವೇ ಎನ್ನುವ ಪ್ರಶ್ನೆಯನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇವರು ಸಾಮಾನ್ಯ ಜನರ ಜೊತೆಗೆ ಪೂರಕವಾಗುವುದಿಲ್ಲ. ನಿಮಗೆ ನಿಜವಾಗಿಯೂ ಜನತೆಯ ಕೈಗೆ ಅಧಿಕಾರವನ್ನು ಕೊಡಬೇಕೆಂದಿದೆಯೋ ಇಲ್ಲವೋ ? ಈಗ ನೇಮಕ ಮಾಡಿರುವಂತಹ ಮುಖ್ಯಕಾರ್ಯದರ್ಶಿಯವರು ಇದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ವ್ಯಾಪಕವಾದ ಸಂಬಂಧ ಕೆಟ್ಟು ಹಳ್ಳಿ ಮಟ್ಟದಲ್ಲಿ ಕೆಲಸಕಾರ್ಯಗಳು ನಡೆಯುವುದಕ್ಕೆ ಸಾಧ್ಯವಿಲ್ಲ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ ಅಧಿಕಾರಿಗಳನ್ನು ಉಪಯೋಗಿಸಿಕೊಂಡು, ಕೇವಲ ಕೆಎಎಸ್ ಆಗಿರತಕ್ಕ ಅಧಿಕಾರಿಗಳನ್ನು ಜಿಲ್ಲಾಪರಿಷತ್ತಿನ ಮುಖ್ಯಕಾರ್ಯದರ್ಶಿಗಳನ್ನಾಗಿ ನೇಮಕ ಮಾಡುವುದಕ್ಕೆ ಏಕೆ ಸಾಧ್ಯವಿಲ್ಲ ? ನಮ್ಮ ಭಾಷೆಯನ್ನು ಕಲಿತಿರುವಂತಹ ಜನರನ್ನು ಐ.ಎ.ಎಸ್. ಅಧಿಕಾರಿಗಳನ್ನು ನೇಮಕ ಮಾಡಿರುವಂತಹ ಸ್ಥಾನದಲ್ಲಿ ಏಕೆ ತರಬಾರದು ಎಂಬ ಪ್ರಶ್ನೆಯನ್ನು ನೇರವಾಗಿ ಸರ್ಕಾರದ ಮುಂದೆ ಇಡುತ್ತಿದ್ದೇನೆ. ಕೇಂದ್ರ-ರಾಜ್ಯದ ನಡುವಿನ ಸಂಬಂಧದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆರ್ಥಿಕ ವ್ಯವಸ್ಥೆ ಹೇಗಿರಬೇಕು ಎನ್ನುವ ಬಗ್ಗೆ ವ್ಯಾಪಕ ಚರ್ಚೆಯನ್ನು ಈ ಬಡ್ಜೆಟ್ಟಿನಲ್ಲಿ ಮಾಡಿದ್ದಾರೆ. ಸಹಜವಾಗಿ ಆಳವಾದ ಪರಿಜ್ಞಾನ ನನಗೆ ಆ ಬಗ್ಗೆ ಇಲ್ಲದಿದ್ದರೂ ಕೆಲವು ಗತಕಾಲದ ನೆನಪನ್ನು ಮಾಡಿ ಕೊಂಡು ಕೆಲವು ವಿಚಾರಗಳನ್ನು ಹೇಳುತ್ತೇನೆ. ಯಾವುದೇ ವಿಚಾರಧಾರೆಗಳನ್ನು ಸಂದರ್ಭಕ್ಕನುಸಾರ ವಾಗಿ, ಸ್ಥಳಕ್ಕನುಸಾರವಾಗಿ ಆದರೆ, ಅದು ಹೆಚ್ಚು ಅರ್ಥಪೂರ್ಣತೆಯಿಂದ ಕೂಡಿದ್ದು ಆಗುವುದಿಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಕೇಂದ್ರ ರಾಜ್ಯ ಸರ್ಕಾರಗಳ ಸಂಬಂಧ ಆರ್ಥಿಕ ವ್ಯವಸ್ಥೆಯ ಬಗ್ಗೆ ಒಳ್ಳೆಯ ರೀತಿಯಲ್ಲಿಲ್ಲ. ಇದರ ಆಮೂಲಾಗ್ರ ಬದಲಾವಣೆಯಾಗಬೇಕು ಎನ್ನುವಂತಹ ಬೆಳಕನ್ನು ಚೆಲ್ಲಿರುವಂತಹ ನಮ್ಮ ಮಾನ್ಯ ಮುಖ್ಯಮಂತ್ರಿಗಳು, ಅವರು ಕೇಂದ್ರದ ಸಂಸತ್ತಿನಲ್ಲಿ ಸದಸ್ಯರಾಗಿರು ವಂತಹ ಕಾಲದಲ್ಲಿ ಇಂತಹ ಬದಲಾವಣೆಗಳ ಬಗ್ಗೆ ಎಷ್ಟು ಬಾರಿ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಿದ್ದರು ಎನ್ನುವ ಪ್ರಶ್ನೆ ಇದೆ. ಇಷ್ಟು ಮಾತ್ರ ಅಲ್ಲ, ೧೯೭೭ನೇ ಇಸವಿಯಲ್ಲಿ ಕೇಂದ್ರದಲ್ಲಿ ಜನತಾ ಸರ್ಕಾರ ಅಧಿಕಾರದಲ್ಲಿತ್ತು. ಆಗ ಅವರು ಅಖಿಲ ಭಾರತ ಜನತಾ ಪಕ್ಷದ ಪ್ರಧಾನ ಕಾರ್ಯ ದರ್ಶಿಗಳಾಗಿದ್ದರು. ಅವರು ಮುಖ್ಯಮಂತ್ರಿಗಳಾಗಿ ಬಂದ ಮೇಲೆ ಈ ರೀತಿಯ ಬದಲಾವಣೆಯನ್ನು ತರುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದಾರೆ, ಅದೇ ರೀತಿಯ ಪ್ರಯತ್ನವನ್ನು ಆಗ ಮಾಡಿದ್ದಾರೆಯೇ? ಅವರು ಮುಖ್ಯಮಂತ್ರಿಗಳಾದ ಮೇಲೆ ಕರ್ನಾಟಕದ ಬಗ್ಗೆಯಾಗಲಿ, ಬೇರೆ ರಾಜ್ಯಗಳ ಬಗ್ಗೆಯಾಗಲಿ ಇರುವಂತಹ ಕಾಳಜಿ ಏನಿದೆ, ಕಳಕಳಿ ಏನಿದೆ, ಅದು ಮೊದಲೇ ಇದ್ದಿದ್ದರೆ ಅದಕ್ಕೆ ಇನ್ನೂ ಹೆಚ್ಚು ಒತ್ತು ಸಿಕ್ಕುತ್ತಿತ್ತು. ಅದನ್ನು ಅವರು ಮಾಡದೇ ಇದ್ದುದರಿಂದ ಇವತ್ತು ಅವರು ಏನು ಪ್ರಯತ್ನ ಮಾಡುತ್ತಿದ್ದಾರೆ, ಅದು ಸಿಕ್ಕಾಪಟ್ಟೆ ವಿವೇಚನೆಗೆ ಒಳಗಾಗಿ ಪೂರ್ಣ ವಿಫಲವಾಗುತ್ತದೆಂದು ಹೇಳ

ಬೇಕಾಗುತ್ತದೆ. ನಂತರ ಅವರು ತಮ್ಮ ಬಜೆಟ್ ಭಾಷಣದಲ್ಲಿ "ಸರ್ವರಿಗೂ ಆರೋಗ್ಯ" ಎನ್ನುವ ಯೋಜನೆಯನ್ನು ಸಾಧಿಸುವುದಕ್ಕಾಗಿ ನಾವು ಆರೋಗ್ಯ ವಿಮಾ ಯೋಜನೆಯನ್ನು ಪ್ರಾರಂಭಿಸುವ ಕಾರ್ಯಕ್ರಮವನ್ನು ದೇಶದಲ್ಲೇ ಪ್ರಥಮ ಬಾರಿಗೆ ಹಾಕಿಕೊಂಡಿದ್ದೇವೆಂದು" ಎಂದು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಕೆ.ಎಚ್. ಶ್ರೀನಿವಾಸ್ ರವರು ಚೆನ್ನಾಗಿ ಹೇಳಿದ್ದಾರೆ. ಈ ಯೋಜನೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರದಿಂದ ನಾವು ನೆರವು ಕೋರಲಿದ್ದೇವೆಂದೂ ಸಹ ಹೇಳಿದ್ದಾರೆ. ಇಲ್ಲಿ ಈ ಯೋಜನೆಯನ್ನು ಸರಿಯಾಗಿ ಜಾರಿಗೆ ತರದೇ ಇರತಕ್ಕಂತಹ ಪರಿಸ್ಥಿತಿ ಇವರಿಗೆ ಬಂದರೆ, ಕೇಂದ್ರ ಸರ್ಕಾರ ಇದಕ್ಕಾಗಿ ನೆರವು ಕೊಡಲಿಲ್ಲವೆಂದು ಇದರಿಂದ ನುಣಚಿಕೊಳ್ಳುವುದಕ್ಕೆ ಸಾಧ್ಯವಾಗುವಂತಹ ಪ್ರಯತ್ನ ಇದರಲ್ಲಿ ಆಗಿದೆ ಪ್ರಜೆಗಳ ಬಗ್ಗೆ ಅಪಾರವಾದ ಕಾಳಜಿ ನಿಮಗೆ ಇದೆ. ಆಸಕ್ತಿ ಇವೆ ಎಂಬುದಾಗಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಬೆಂಗಳೂರಿನಲ್ಲಿ ಖಾಸಗಿಯವರ ಏಜಮಾನಿಕೆಯಲ್ಲಿ ಡಿಸಿ ಲ್ಯಾಂಡ್ ಮಾಡುತ್ತೇವೆಂದು ಹೇಳಿದ್ದಾರೆ. ಅದು ಮಾತ್ರ ಅಲ್ಲ. ಅದಕ್ಕೆ ಸರ್ಕಾರ ಮೂಲಭೂತವಾದ ಸೌಕರ್ಯಗಳನ್ನೂ ಸಹ ಒದಗಿಸಿಕೊಡುತ್ತೇವೆಂದು ಹೇಳಿದ್ದಾರೆ.

ಮೂಲಭೂತ ಸೌಕರ್ಯ ಎನ್ನುವ ಶಬ್ದ ಅಪಾರವಾದ ವ್ಯಾಪ್ತಿ ಪಡೆದಿರುವುದರಿಂದ, ಮೊದಲನೆ ದಾಗಿ ಮೂಲಭೂತ ಸೌಕರ್ಯ ಏನು ಎಂಬುದಕ್ಕೆ ಸ್ಪಷ್ಟೀಕರಣ ಬೇಕು. ಎರಡನೆಯದಾಗಿ ಮೂಲಭೂತ ಸೌಕರ್ಯ ಒದಗಿಸಲು ಶಕ್ತಿಶಾಲಿಯಾದ ಸರ್ಕಾರ ಇವತ್ತು ತನ್ನದೇ ಆದ ಬಾಲಭವನವನ್ನು ನಡೆಸುತ್ತಿದೆ. ಇದಕ್ಕೆ ತನ್ನದೇ ಆದ ಒಂದು ಮಂಡಲಿ ಮಾಡಿ. ಕರ್ನಾಟಕ ಫಿಲಂ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ ಡಿಸ್ನಿ–ಲ್ಯಾಂಡ್ ಮಾಡಿದರೆ, ಖಾಸಗಿ ಯವರು ಮತ್ತೆ ಕೈ ಹಾಕಿ ಅವರು ನಡೆಸಿಕೊಂಡು ಹೋಗುವುದನ್ನು ತಪ್ಪಿಸಲು.....

ಶ್ರೀ ರಾಮಕೃಷ್ಣ ಹೆಗ್ಡೆ.—ಮೂಲಭೂತ ಸೌಕರ್ಯ ಎಂದರೆ ಬರೀ ಲ್ಯಾಂಡ್ ಕೊಡತಕ್ಕದ್ದು ಲ್ಯಾಂಡನ್ನು ಲೀಸ್ ಮೇಲೆ ಕೊಡತಕ್ಕ ಒಂದು ಬೇಡಿಕೆ ಬಂದಿದೆ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಇದಕ್ಕೆ ಸುಮಾರು ೨೦ ರಿಂದ ೨೫ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಇದಕ್ಕೆ ಅನಿವಾಸಿ ಭಾರತೀಯರಿಂದ ಹಣ ಬರುತ್ತದೆಂದು ಸೂಚನೆ ಇದೆ. ಈ ಬಗ್ಗೆ ಯಾವುದೇ ನಿರ್ಧಾರ ಆಗಿಲ್ಲ. ಡಿಸ್ನಿ ಲ್ಯಾಂಡ್ ಮಾಡಲು ವಿಶಾಲವಾದ ಜಾಗ ಬೇಕು. ಪ್ರೈವೇಟ್ ಭೂಮಿಯನ್ನು ಅವರು ಖರೀದಿ ಮಾಡುತ್ತಾರೆ. ಸಾಧ್ಯವಿರತಕ್ಕ ಕಡೆ ಸರ್ಕಾರಿ ಜಮೀನನ್ನು ಲೀಸ್ ಮೇಲೆ ಕೊಡ ಬೇಕಾಗುತ್ತದಷ್ಟೇ.

ಶ್ರೀ ಬಿ. ಎ. ಉಮರಬ್ಬ.—ಇದೇ ಸಂದರ್ಭದಲ್ಲಿ ಇಂತಹ ಡಿಸ್ನಿ ಲ್ಯಾಂಡ್ ರೀತಿ ಮಿನಿ ಡಿಸ್ನೀ ಲ್ಯಾಂಡ್‌ಗಳನ್ನು ಜಿಲ್ಲಾ ಕೇಂದ್ರಗಳಲ್ಲೂ ಮಾಡುತ್ತೇವೆಂದು ಖಾಸಗೀ ಸಂಸ್ಥೆಯವರು ಮುಂದೆ ಬಂದರೆ ಅದಕ್ಕೆ ಸರ್ಕಾರ ತಯಾರು ಇದೆಯೋ ಈ ಬಗ್ಗೆ ಮೂಲಭೂತ ಸೌಕರ್ಯವನ್ನು ಅವರಿಗೂ ಒದಗಿಸುತ್ತೀರಾ ? ಇನ್ನು ಪ್ರವಾಸೋದ್ಯಮದ ಬಗ್ಗೆ ಮಾತನಾಡುವಾಗ, ಬಾಕಿಯವರು ನಮ್ಮ ರಾಜ್ಯಕ್ಕೆ ಬಂದು ಪ್ರವಾಸ ಮಾಡುವುದು ಎಷ್ಟು ಮುಖ್ಯವೋ, ನಮ್ಮ ರಾಜ್ಯದ ಜನರೂ ಬೇರೆ ರಾಜ್ಯ ಗಳಿಗೆ ಹೋಗಿ ಪ್ರವಾಸ ಮಾಡುವುದು ಅಷ್ಟೇ ಮುಖ್ಯ. ಜಿಲ್ಲಾಪರಿಷತ್ ಹಾಗೂ ಮಂಡಲ ಪಂಚಾಯಿತಿ ಸದಸ್ಯರು ಮೊನ್ನೆ ಪ್ರವಾಸ ಬಂದು ಬೆಂಗಳೂರನ್ನು ನೋಡಿ ಹೋದರು. ಅದೇ ರೀತಿ ನಮ್ಮ ರಾಜ್ಯದ ಜನತೆ ಬೇರೆ ರಾಜ್ಯಗಳಿಗೆ ಪ್ರವಾಸ ಹೋಗುವ ಬಗ್ಗೆ ಸರ್ಕಾರ ಉತ್ತೇಜನ ನೀಡ ಬೇಕು. ನಾನು ಯಾವುದೇ ಬಸ್ ಮಾಲೀಕರ ಪರವಾಗಿ ಮಾತನಾಡುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಯವರು ಭಾವಿಸಬಾರದು. ಒಂದು ಬಸ್‌ನ ಒಂದು ಸೀಟಿಗೆ ೩ ತಿಂಗಳಿಗೆ ೫೦೦ ರೂಪಾಯಿ ಇದ್ದ ಕರವನ್ನು ಏಕಾಏಕಿ ಐದು ಪಾಲು ಹೆಚ್ಚು ಮಾಡಿದ್ದೀರಿ, ಇಂಟರ್ ಸ್ಟೇಟ್‌ನ ಪರ್ಮಿಟ್ ಬಸ್‌ಗೆ ೧ ಸೀಟಿಗೆ ೩ ತಿಂಗಳಿಗೆ ೨೫೦೦ ರೂಪಾಯಿಯಾದರೆ ೩೫ ಆಸನದ ಈ ಬಸ್ಸಿಗೆ ಮೂರುವರೆ ಲಕ್ಷ ತೆರಿಗೆ ಕಟ್ಟಬೇಕಾದರೆ ಬಸ್ ಮಾಲೀಕ ಯಾವ ರೀತಿ ಬಸ್ಸನ್ನು ಇಟ್ಟುಕೊಳ್ಳಬಹುದು ? ಪ್ರವಾಸದ ಉದ್ದೇಶದಿಂದ ಹೇಳುವುದಾದರೆ ಹೊರ ರಾಜ್ಯಕ್ಕೆ ಹೋಗತಕ್ಕ ಬಸ್‌ಗಳಿಗೆ ಇಷ್ಟೊಂದು ತೆರಿಗೆ ವಿಧಿಸಿದರೆ ಆ ಬಸ್‌ಗಳಲ್ಲಿ ಕರ್ನಾಟಕದವರು ಪ್ರವಾಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಸ್‌ಗಳ ಬಗ್ಗೆ ಕೇಂದ್ರದವರು ಏನು ಕೋಟಾ ಕೊಟ್ಟಿದ್ದಾರೋ ಆ ಕೋಟಾ ಬಿಡಿ. ಕರಭಾರದಿಂದಲೇ ಸಂಪೂರ್ಣ ನಷ್ಟ ಮಾಡುವುದಕ್ಕಿಂತಲೂ......

ಶ್ರೀ ರಾಮಕೃಷ್ಣ ಹೆಗಡೆ.—ಈ ಬಸ್‌ಗಳು ಹೆಚ್ಚಾಗಿ ಕರ್ನಾಟಕ ರಾಜ್ಯದವು ಅಲ್ಲ. ಇವು ಹೆಚ್ಚಾಗಿ ನಾಗಲ್ಯಾಂಡ್‌ನಲ್ಲಿ, ಹರಿಯಾಣಾದಲ್ಲಿ, ಉತ್ತರಪ್ರದೇಶದಲ್ಲಿ ರಾಜಾಸ್ಥಾನದಲ್ಲಿ ರಿಜಿಸ್ಟರ್ ಆದಂತಹವು ಇವೆ. ಅವುಗಳಲ್ಲಿ ನಮ್ಮ ಕರ್ನಾಟಕದವು ಹೆಚ್ಚು ಇಲ್ಲ. ಮತ್ತು ಇವುಗಳಿಂದ ದುರುಪಯೋಗ ಹೆಚ್ಚು ಆಗುತ್ತಿದೆ. ಇವುಗಳಿಂದ ನಮ್ಮ ಸರ್ಕಾರಿ ಸಾರಿಗೆ ನಿಗಮಕ್ಕೆ ಹೆಚ್ಚು ನಷ್ಟವಾಗುತ್ತಿದೆ.

ಶ್ರೀ ಬಿ.ಎ. ಉಮರಬ್ಬ.—ಇದರಿಂದ ನಮ್ಮ ರಾಜ್ಯದ ಬಸ್‌ಗಳಿಗೆ ಹೆಚ್ಚು ಸಂಚಕಾರ ಆಗಿಲ್ಲವೆಂದು ಭಾವಿಸುತ್ತೇನೆ.

ಅಧ್ಯಕ್ಷರು.—ಉಮರಬ್ಬಾ ಅವರೇ ತಾವು ಬೇಗ ಮುಕ್ತಾಯ ಮಾಡಿ.

ಶ್ರೀ ಬಿ.ಎ. ಉಮರಬ್ಬ.—ಮಹಿವಾಟು ತೆರಿಗೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕೆಲವು ಬದಲಾವಣೆಗಳನ್ನು ಸೂಚಿಸಿದ್ದಾರೆ. ೧೫ ಲಕ್ಷದಷ್ಟು ವಹಿವಾಟು ಇದ್ದ ಅಂಗಡಿಗಳು ತೆರಿಗೆ ವಂಚನೆ ಮಾಡಲು ಅಂಗಡಿಗಳನ್ನು ವಿಭಜನೆ ಮಾಡಿ ಕಡಿಮೆ ತೋರಿಸುತ್ತಾರಾದ್ದರಿಂದ ಇದನ್ನು ತರಲಾಗಿದೆ ಎಂದು ಹೇಳಿರುವುದು ಸ್ವಾಗತಾರ್ಹವಾದ ವಿಚಾರವೆಂದು ಭಾವಿಸಿಕೊಳ್ಳೋಣ. ಆದರೆ ಒಂದು ಪ್ರಶ್ನೆ ಇದೆ. ಈ ವಹಿವಾಟು ತೆರಿಗೆ ವಿಷಯದಲ್ಲಿ ಅಂಗಡಿಯವರು ವಂಚನೆ ಮಾಡುವುದು ಇನ್ನೂ ಕೆಲಮಟ್ಟಿಗೆ ಇದೆಯೋ ಎನ್ನುವ ಅನುಮಾನ ಬರುತ್ತದೆ. ಏಕೆಂದರೆ ಕಳೆದ ಸಲ ಬಾಟಲಿಂಗ್ ಕಾಂಟ್ರಾಕ್ಟ್ ಸಿಕ್ಕಿ ಕೋರ್ಟಿನಲ್ಲಿ ತೀರ್ಪು ಆಗಿ ಬದಲಾವಣೆ ಆಗುವ ಸಂದರ್ಭದಲ್ಲಿ ಕೆಲವು ಎಂಟು ಜನ ಬಾಟಲಿಂಗ್ ಕಂಟ್ರಾಕ್ಟದಾರರು ನಡೆಸಿದಂಥ ವ್ಯವಹಾರ ಏನಿದೆ, ಸುಮಾರು ೫೦ ಕೋಟಿ ರೂಪಾಯಿಗಳೆಂದು ಅಂದಾಜಾಗಿದೆ. ಈ ೫೦ ಕೋಟಿ ವಹಿವಾಟು ಮಾಡಿದಂಥ ಜನರಿಂದ ಎಷ್ಟು ವಹಿವಾಟು ತೆರಿಗೆಯನ್ನು ನಿಮ್ಮ ಸರ್ಕಾರ ವಸೂಲು ಮಾಡಿದೆಯೆಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ಪ್ರಶ್ನೆಗೆ ತಾವು ವಿವರಕೊಟ್ಟು ಉತ್ತರ ಕೊಡುತ್ತೀರಿ ಎಂದು ನಾನು ಭಾವಿಸಿದ್ದೇನೆ. ಬಂಡವಾಳಶಾಹಿ ಮನೋಭಾವ ಅಧಿಕವಾಗುತ್ತಿದೆ ಎಂದು ಇಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಬಹಳ ದುಃಖದಿಂದ ಹೇಳಬೇಕಾಗುತ್ತದೆ ಏನೆಂದರೆ, ಇಂಥಾದ್ದನ್ನೆಲ್ಲಾ ಸ್ವಾಗತ ಮಾಡಲಿಕ್ಕೆ ಸಾಧ್ಯವಿಲ್ಲ. ಸಾಮಾನ್ಯ ಬಡ ಜನರು ಉಪಯೋಗಿಸುವ ಸೈಕಲ್ಲಿಗೆ ತೆರಿಗೆ ಹಾಕುತ್ತೀರಿ ಎಂದು ಹೇಳಿದರೆ ಇಲ್ಲೂ ಕೂಡ ಅರ್ಥಪೂರ್ಣವಾಗಿಲ್ಲವೆಂದೇ ಭಾವಿಸಿಕೊಂಡಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಮೀನು ಮಾರಾಟ ಮಾಡುವ ಪ್ರತಿಯೊಬ್ಬ ವ್ಯಕ್ತಿಯೂ ಸಹ ಸೈಕಲ್‌ಮೇಲೆ ಓಡಾಡುತ್ತಾನೆ. ಅತ್ಯಂತ ಕಷ್ಟದಾಯಕವಾದ ಈ ಕೆಲಸವನ್ನು ಆತ ಮಾಡಿದರೆ ಮಾತ್ರ ಸಂಜೆಗೆ ಅಷ್ಟಿಷ್ಟು ಬರುತ್ತದೆ. ಆತ ಕೊಂಡುಕೊಳ್ಳುವ ಈ ಸೈಕಲ್ಲಿಗೂ ಕರ ಹಾಕುತ್ತೇವೆ ಎಂದು ಹೇಳಿದರೆ ಆ ಬಡವನ ಬದುಕಿಗೇ ಕರ ಹಾಕಿದಹಾಗೆ ಆಗುತ್ತದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಡವರ ಮೇಲೆ ಸಂಪೂರ್ಣ ಸಹಾನುಭೂತಿ ತಳೆದು ಈ ಸೈಕಲ್‌ಮೇಲೆ ವಿಧಿಸಿರುವ ಕರವನ್ನು ತೆಗೆದುಹಾಕಬೇಕು ಎಂದು ಹೇಳುತ್ತೇನೆ. ಆಮೇಲೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಬಡವರಿಗೆ ಹೆಚ್ಚಿನ ಮನೋರಂಜನೆಯನ್ನು ಒದಗಿಸಿಕೊಡುವ ಪರಿಸ್ಥಿತಿಯಲ್ಲಿ ನಾವು ಇಲ್ಲ. ಇವತ್ತು ಯಾವುದೇ ಸಿನೇಮಾ ಥಿಯೇಟರ್ ಮುಂದೆ ನಿಂತಿರುವವರನ್ನು ನೋಡಿದರೆ, ಅಲ್ಲಿ ಬಡವರೇ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಒಂದೆರಡು ಗಂಟೆ ಸಿನೆಮಾ ನೋಡಿ ಮನರಂಜನೆ ಪಡೆಯುವುದಕ್ಕೆ ಅವರು ಬಂದಿರುತ್ತಾರೆ. ಇಂತಹ ಬಡವರು ನೋಡುವಂಥ ಸಿನೇಮಾಕ್ಕೆ ಒಂದು ಸೀಟಿಗೆ ಇರತಕ್ಕಂಥ ದರಕ್ಕೆ, ಮತ್ತಷ್ಟು ಮೊತ್ತವನ್ನು ಏರಿಸಿದ್ದೀರಿ, ಒಂದು ಕಡೆ ಕನ್ನಡ ಚಿತ್ರಗಳಿಗ ಅರ್ಧದಷ್ಟು ರಿಯಾಯಿತಿ ಕೊಟ್ಟು ಮತ್ತೆ ಎರಡಷ್ಟು ತೆರಿಗೆಯನ್ನು ಏರಿಸಿದರೆ ಇದು ಬಡವರ ಜೇಬಿಗೆ, ಅವರ ಮನಸ್ಸಿಗೆ ಕತ್ತರಿ ಹಾಕುವಂಥ ಪ್ರಯತ್ನ ಆಗುವುದಿಲ್ಲವೇ ಈ ಪ್ರಯತ್ನವನ್ನು ಮನೋರಂಜನೆಯ ಮೂಲಕ ಮಾಡುವುದಕ್ಕೆ ಹೊರಟ್ಟಿದ್ದೀರಿ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ದಯವಿಟ್ಟು ಇದನ್ನು ತಾವು ಮುಂದುವರೆಸಬಾರದು. ಒಂದು ಮನೋರಂಜನೆಗೆ ಬೇಕಾದ ಸಿನೆಮಾ ಇದ್ದಹಾಗೆ ಬಡವರ ಕಾಲಹರಣೆಗೆ ಮತ್ತೊಂದು ಸಾಧನ ಈ ಹೆಂಡ ಅನ್ನುವುದು. ಈ ಸಿನೆಮಾ ಮತ್ತು ಹೆಂಡ ಏನಿದೆ ಇವೆರಡೇ ಮನುಷ್ಯನಿಗೆ ಸಂತೋಷ ಕೊಡುವ ಗಳಿಗೆಗಳು ಎಂದು ನಾನು ಭಾವಿಸಿಕೊಂಡಿದ್ದೇನೆ ಸಾರಾಯಿಗೆ ಈಗ ನಿಗಧಿಪಡಿಸಲಾದ ಪರಮಾವಧಿ ಮಾರಾಟ ಬೆಲೆ ಲೀಟರ್ ಒಂದಕ್ಕೆ ೩೦ ರೂಪಾಯಿಯನ್ನು ತೆಗೆದುಹಾಕಿದ್ದೀರಿ. ಈ ಮಿತಿ ಮೀರಿ ಎಷ್ಟಕ್ಕೆ ಬೇಕಾದರೂ ಮಾರಬಹುದು ಎಂದು ಹೇಳಿ ಇದರ ಮೂಲಕ ತೆರಿಗೆ ಪಾಲು ಹೆಚ್ಚಿಸಿಕೊಳ್ಳುವುದು ಬೇಡ. ಮಾರಾಟ ಮಾಡುವಂತಹ ವ್ಯಕ್ತಿ ತೆರಿಗೆ ವಂಚನೆ ಮಾಡುವುದಕ್ಕೋಸ್ಕರ ೫೦ ರೂಪಾಯಿಗೂ ಮಾರಬಹುದು, ಆದೇರೀತಿ ೨೦ ರೂಪಾಯಿಗೆ ಮಾರಿದ್ದೇನೆ ಎಂದು ಲೆಕ್ಕ ಕೊಡುವ ಕಾಲ ಕೂಡ ಬಂದೀತು. ನೀವು

ನಿರೀಕ್ಷೆ ಮಾಡಿದಂಥ ಕರ ಸಿಗಲಿಕ್ಕಿಲ್ಲ. ಹಾಗೆಯೇ ಸಾರಾಯಿ ಮಾರಾಟ ಮಾಡುವುದನ್ನು ಸಹಕಾರಿ ಸಂಘಗಳಿಗೆ ಕೊಡುವುದಕ್ಕೆ ತಯಾರಿದ್ದೇವೆ ಎಂಬ ಮಾತನ್ನು ಹೇಳಿದ್ದೀರಿ. ಸಹಕಾರಿ ಸಂಘಗಳ ಉದ್ದೇಶ ಏನಿದೆ, ಅದಕ್ಕೆ ಮಾರಕವಾಗುವಂಥ ವ್ಯವಸ್ಥೆ ಇದು ಆದೀತು. ಮಾತ್ರವಲ್ಲ. ಸಹಕಾರ ಸಂಘಗಳಿಗೆ ಸಾರಾಯಿ ಮಾರಲಿಕ್ಕೆ ಈಗ ಔದಾರ್ಯ ತೋರಿಸುತ್ತೇವೆ ಎಂದು ಹೇಳಿದರೆ ಬಾಟ್ಲಿಂಗ್ ಮಾಡುವಂಥ ಔದಾರ್ಯವನ್ನೂ ತೋರಬಹುದಲ್ಲ ?

ಅಧ್ಯಕ್ಷರು.—ಇದೆಲ್ಲಾ ಹೇಳಿ ಆಗಿದೆ.

ಶ್ರೀ ಬಿ. ಎ. ಉಮರಬ್ಬ.—ಎರಡನೆಯ ಅಂಶವೆಂದರೆ, ಖಾಸಗಿಯವರಿಂದ ಏನು ಸಾರಾಯಿ ಮಾರುವಂಥಾದ್ದು, ಹೆಂಡ ಮಾರುವಂಥಾದ್ದು, ಕಡಿಮೆ ಮಾಡಿ ಅವರಿಗೆ ಕೊಡದೆ, ಇದನ್ನು ನಾವು ಇಂತಹ ಕ್ಷೇತ್ರಗಳಿಗೆ ಕೊಡುತ್ತಿದ್ದೇವೆ ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಸ್ಪಷ್ಟೀಕರಣವನ್ನು ಬಯಸುತ್ತೇನೆ. ಆದರೆ ಪ್ರಶ್ನೆ ಏನು ಎಂದರೆ, ಸಹಕಾರ ಸಂಘಗಳ ಮಾರಾಟ, ಖ್ಯಾತ ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳಲ್ಲಿ ವ್ಯವಸ್ಥೆ ಇರುವುದಾದರೆ ಅಂತಹವರಿಗೆ ಮಾರಾಟಕ್ಕೆ ಕೊಡುವ ಅವಕಾಶವನ್ನು ಕಲ್ಪಿಸಿಕೊಡುವುದಾಗಿ ಹೇಳಿದ್ದಾರೆ. ಈ 'ಖ್ಯಾತ' ಶಬ್ದದ ವ್ಯಾಪ್ತಿಯನ್ನು ತಾವು ದಯವಿಟ್ಟು ಹೇಳಬೇಕು, ಯಾವುದು ಖ್ಯಾತ ಮತ್ತು ಯಾವುದು ಖ್ಯಾತ ಅಲ್ಲ ಎನ್ನುವ ತೀರ್ಮಾನಕ್ಕೆ ಹೇಗೆ ಬರುತ್ತೀರಿ? ಕಿಟ್ಟೆಲ್ ಶಬ್ದಕೋಶದಲ್ಲಿ ಖ್ಯಾತ ಪದಕ್ಕೆ ಏನು ಅರ್ಥವಿವರಣೆ ಕೊಟ್ಟಿದೆ, ಅಲ್ಲಿಯವರೆಗೂ ಹೋಗುವಂಥ ಪ್ರಯತ್ನವನ್ನೇನಾದರೂ ಮಾಡಿದ್ದೀರಾ ? ಒಂದು ಕಡೆ ಖಾಸಗಿಯವರಿಂದ ಕಿತ್ತು ಕೊಳ್ಳುವಂಥ ಪ್ರಯತ್ನ ನಡೆದರೆ, ಇನ್ನೊಂದುಕಡೆ ಖ್ಯಾತ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್ ಪದದ ಮೂಲಕ ಮತ್ತೆ ಖಾಸಗಿಯವರಿಗೇ ಕೊಡುವುದು ಆಗುತ್ತದೆ ಎನ್ನುವಾಗ, ಯಾವ ಬದಲಾವಣೆಯನ್ನು ತಂದಹಾಗೆ ಆಗುತ್ತದೆ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಯಾವ ಬದಲಾವಣೆಯನ್ನು ಕಾಣುತ್ತೀದ್ದೇವೆ, ಅದನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇನ್ನು ಅಲ್ಪಸಂಖ್ಯಾತರ ಬಗ್ಗೆ ಹೇಳಬೇಕಾದರೆ, ಮೈನಾರಿಟಿ ಕಾರ್ಪೊರೇಷನ್ ಎಂದು ತಾವು ಮಾಡಿದ್ದೀರಿ. ಅಲ್ಪಸಂಖ್ಯಾತರ ಕಾರ್ಪೊರೇಷನ್. ನನಗೆ ತಿಳಿದಮಟ್ಟಿಗೆ ಎಷ್ಟೊ ಕೋಟಿಗಳ ಘೋಷಣೆ ಮಾಡಿದರೂ ಸಹ, ಈ ಕಾರ್ಪೊರೇಷನ್‌ಗೆ ೨೦ ಲಕ್ಷ ಕೊಟ್ಟಿದು, ಅದರಲ್ಲಿ ಎಸ್ಟಾಬ್ಲಿಷಮೆಂಟಿಗೆ ೧೮ ಲಕ್ಷ ಹೋಗುತ್ತಿದೆ. ಹೀಗಾದರೆ, ಇನ್ನು ಉಳಿದ ಹಣದಲ್ಲಿ ಅಲ್ಪಸಂಖ್ಯಾತರಿಗೆ ಎಷ್ಟರಮಟ್ಟಿಗೆ ಅನುಕೂಲ ಮಾಡಬಹುದು? ನಾಮಕಾವಸ್ಥೆಗೆ ಈ ಕಾರ್ಪೊರೇಷ್ ಎಂದು ಹೇಳಬೇಕಾಗಿದೆ...

ಶ್ರೀ ಜಿ. ಬಸವಣ್ಣಪ್ಪ.—ಅಲ್ಪ ಸಂಖ್ಯಾತರ ಕಾರ್ಪೊರೇಷನ್ ೧೯೮೬ರಲ್ಲಿ ಸ್ಥಾಪನೆಯಾಯಿತು. ಇದಕ್ಕೆ, ಈಗ ಎರಡು ಯೋಜನೆಗಳನ್ನು ಸರ್ಕಾರ ಅಂಗೀಕರಿಸಿದೆ. ಒಂದು ಸ್ವಾವಲಂಬನಾ ಯೋಜನೆ, ಇನ್ನೊಂದು ವಾಹನ ಚಾಲನ ತರಬೇತಿ ಯೋಜನೆ. ಸ್ವಾವಲಂಬನೆ ಯೋಜನೆಯಲ್ಲಿ ೧೯೫೦ ಜನ ಲಾಭ ಪಡೆದಿದ್ದಾರೆ, ೮೭೫ ಜನ ವಾಹನ ತರಬೇತಿ ಯೋಜನೆಯಿಂದ ಲಾಭ ಪಡೆಯುತ್ತಿದ್ದಾರೆ. ಈ ಕಾರ್ಯಕ್ರಮವನ್ನು ಈ ವರ್ಷವೇ ರೂಪಿಸಿದ್ದೇವೆ.

ಶ್ರೀ ಬಿ.ಎ. ಉಮರಬ್ಬ....ಸಂತೋಷ ಕೊನೆಯದಾಗಿ, ನಾನು ಇಷ್ಟು ಹೇಳುವುದಕ್ಕೆ ಬಯಸುತ್ತೇನೆ ಬರೀ ಜನ ಎಂದು ಹೇಳಿದರೇ ವಿನಹ ಅದಕ್ಕೆ ಇಷ್ಟು ಹಣ ಎಂದು ಹೇಳಲಿಲ್ಲ. ಜನ ಅದರ ಜೊತೆಗೆ ಹಣ. ಇವೆರಡನ್ನೂ ಗಣನೀಯವಾಗಿ ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ.—ಸ್ವಾವಲಂಬನೆ ಯೋಜನೆಯಿಂದ ೧೯೫೦ ಜನಕ್ಕೆ ೨೦ ಲಕ್ಷ ಹಣವನ್ನು ಬಿಡುಗಡೆ ಮಾಡಿದ್ದೇವೆ. ನಿಗಮದಿಂದ ೨೫ ಪರ್ಸೆಂಟ್, ಬ್ಯಾಂಕ್‌ನಿಂದ ೭೫ ಪರ್ಸೆಂಟ್. ಇದರ ಬಗ್ಗೆ, ಈಗ ನೀವೇ ವಿಚಾರ ಮಾಡಿ. ವಾಹನ ಚಾಲನೆ ತರಬೇತಿಯಿಂದ ೮೭೫ ಜನ ಲಾಭ, ಈ ವರ್ಷವೇ ಪಡೆಯುತ್ತಿದ್ದಾರೆ.

ಶ್ರೀ ಬಿ. ಎ. ಉಮರಬ್ಬ.—೨೦ ಲಕ್ಷ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಸರ್ಕಾರ ಕೊಟ್ಟಿರತಕ್ಕ ಹಣದ ಸಂಖ್ಯೆ ಮತ್ತು ಜನರ ಸಂಖ್ಯೆ ಭಾಗಿಸಿದರೆ ಎಷ್ಟು ಅನುಕೂಲವಾಗಿರಬಹುದೆಂದು ಗೊತ್ತಾಗುತ್ತದೆ. ಒಬ್ಬನಿಗೆ ೧೫ ರೂಪಾಯಿ ಆದರೂ ಬಡವರಿಗೆ ಬಹು ದೊಡ್ಡ ಉಪಕಾರವೆಂದು ಭಾವಿಸುತ್ತೇನೆ. ಇಷ್ಟು ಕೊಟ್ಟು ಹೊಟ್ಟೆ ತುಂಬ ಊಟ ಮಾಡು ಎಂದು ಹೇಳಿದರೆ ಹೇಗೆ? ಮೈನಾರಿಟಿ ಕಮಿಷನ್ ಮಾಡಿ. ಅದರ ರಿಪೋರ್ಟ್ ಸರ್ಕಾರಕ್ಕೆ ಬಂದಿದೆ ಎಂದು, ಸುಮಾರು ೨ ತಿಂಗಳ ಹಿಂದೆ ಸುದ್ದಿ ಆಯಿತು. ಇದುವರೆಗೂ ಈ ಸದನದ ಮುಂದೆ ಆ

ರಿಪೋರ್ಟ್ ಇಡುತ್ತಾ ಇಲ್ಲ. ರಿಪೋರ್ಟ್ ಬಗ್ಗೆ ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಟ್ಟಿಲ್ಲ. ಮೈನಾರಿಟೀಸ್ ವರದಿ ಮಾತ್ರ ವಿಳಂಬವಾಗುತ್ತಿದೆ. ಅದೇ ಬೇರೆ ಬೇರೆ ಕಮೀಷನ್ ರಿಪೋರ್ಟ್‌ಗಳು ಬೇಗ ಬೇಗ ಬರುತ್ತದೆ........

ಶ್ರೀ ಜಿ. ಬಸವಣ್ಣಪ್ಪ.—ರಿಪೋರ್ಟ್‌ನ್ನು ಹಂತ ಹಂತವಾಗಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದಾರೆ. ಮೊದಲನೇ ರಿಪೋರ್ಟ್‌ನಲ್ಲಿ ೩೧ ಶಿಫಾರಸ್‌ಗಳು ಇವೆ ಅದರಲ್ಲಿ ೧೪ ಶಿಫಾರಸ್‌ಗಳನ್ನು ಸರ್ಕಾರ ಅಂಗೀಕರಿಸಿ, ಫೆಬ್ರುವರಿ ತಿಂಗಳಲ್ಲೇ ಆಜ್ಞೆಯನ್ನು ಹೊರಡಿಸಿದೆ. ಎರಡನೇ ರಿಪೋರ್ಟ್ ಮೊನ್ನೆತಾನೆ ಸರ್ಕಾರಕ್ಕೆ ಸಲ್ಲಿಸಿದ್ದಾರೆ.

ಶ್ರೀ ಬಿ.ಎ. ಉಮರಬ್ಬ.—ಕರ್ನಾಟಕದಲ್ಲಿ ಕಾರ್ಮಿಕರು ಬಹಳ ಶಾಂತಿಯಿಂದ ಇರುವುದರಿಂದ, ಔದ್ಯಮಿಕ ಬಂಡವಾಳ ಹೂಡಿಕೆಗೆ ಬಹಳ ಉತ್ತೇಜನ ಇದೆಯೆಂದು ಹೇಳುವ ಸರ್ಕಾರ, ಇನ್ನೊಂದು ಕಡೆ ಕೆಲವಾರು ಕಾರಣಗಳಿಂದ ಸರ್ಕಾರಿ ಸಂಸ್ಥೆಗಳ ಹಣ ಏನಿದೆ, ಎಷ್ಟೇ ಅಪಾರವಾಗಿ ಹೂಡಿದ್ದರೂ ಸಹ ಹಣವನ್ನು ಹಿಂತೆಗೆದುಕೊಳ್ಳಬೇಕಾಗಿದೆ ಎಂದು ಹೇಳುತ್ತಾರೆ. ಇವು ನಷ್ಟದಲ್ಲಿ ನಡೆಯುತ್ತಿರುವುದು ಕಾರ್ಮಿಕರಿಂದ ಅಲ್ಲ, ವಿದ್ಯುತ್ ಮತ್ತು ಕೇಂದ್ರದಿಂದ ಬಿದ್ದಿರುವಂಥ ಕರಬಾರ ಗಳಿಂದ ಎಂದುಹೇಳಿದಿರಿ, ಸರ್ಕಾರಿ ವಲಯದಲ್ಲಿರುವ ಸಂಸ್ಥೆಗಳು ನಷ್ಟ ಅನುಭವಿಸುತ್ತಿರುವಾಗ, ಕಾರ್ಮಿಕರು ಶಾಂತಿಯಿಂದ ಇದ್ದಾರೆ ಎಂಬ ಒಂದೇ ಒಂದು ಕಾರಣಕ್ಕಾಗಿ ಕರ್ನಾಟಕದಲ್ಲಿ ಸರ್ಕಾರಿ ಕ್ಷೇತ್ರದಲ್ಲಿರುವ ಸಂಸ್ಥೆಗಳಿಗೆ ಮತ್ತೆ ಹಣವನ್ನು ತೊಡಗಿಸುತ್ತೇವೆಂಬ ವಾದ ಒಂದಕ್ಕೊಂದು ತದ್ವಿರುದ್ಧ ವಾಗಿ, ಇದು ಒಂದು ವಿರೋಧಾಭಾಸವಾದ ವಾದ ವಾಗುತ್ತದೆಂದು ಹೇಳುವುದಕ್ಕೆ ಅಪೇಕ್ಷಿಸುತ್ತೇನೆ.

೪-೩೦ ಪಿ.ಎಂ.

ಅಧ್ಯಕ್ಷರೇ, ಕೊನೆಯದಾಗಿ ಮುಗಿಸುವಂತಹ ಸಂದರ್ಭದಲ್ಲಿ ನಾನು ಇಷ್ಟೇ ಬೇಡಿಕೊಳ್ಳುವುದು. ಟಾಯ್ಲೆಟ್ ಸೋಪ್ ಆಗಿರಬಹುದು ಸೈಕಲ್ ಆಗಿರಬಹುದು, ಇನ್ನೂ ಕೆಲವು ಇಂತಹದೇ ಸಾಮಾನು ಗಳಿಗೆ. ಒಂದು ಕಡೆ ವಾಹನಗಳಿಗೆ ತೆರಿಗೆ ಏರಿಸುವಂತಹದ್ದು, ಇನ್ನೊಂದು ಕಡೆ ಡೀಸೆಲ್ ಪೆಟ್ರೋಲ್‌ಗೆ ತೆರಿಗೆ ಏರಿಸುವಂತಹದ್ದು ಆಗಿದೆ. ಹಿಂದೆ ಬರಗಾಲ ಬಂದಾಗ ಬಸ್‌ದರ ಜಾಸ್ತಿ ಆಯಿತು, ಹಾಲಿನ ದರ ಜಾಸ್ತಿ ಆಯಿತು, ವಿದ್ಯುತ್ ದರ ಜಾಸ್ತಿ ಆಯಿತು, ಯಾವಾಗಲೂ ಬಡವರು ಉಪಯೋಗಿಸು ವಂತಹದ್ದೇ ಜಾಸ್ತಿ ಆಗುವಂತಹದು. ಅದೇ ಸಂದರ್ಭದಲ್ಲಿ ಇಷ್ಟು ತೆರಿಗೆಯನ್ನು ಜಾಸ್ತಿ ಮಾಡಿ, ಏನು ಹಣವನ್ನು ನೀವು ಸಂಪಾದನೆ ಮಾಡುತ್ತಿದ್ದೀರಿ? ಕೇವಲ ಸಾರಾಯಿ ಗುತ್ತಿಗೆದಾರರಿಂದ ಬರಬೇಕಾದಂಥ ಬಾಕಿ ಹಣ ಏನಿದೆ ಅದನ್ನು ವಸೂಲು ಮಾಡುವಂತಹ ಪ್ರಾಮಾಣಿಕವಾದ ಪ್ರಯತ್ನವನ್ನು ನೀವು ಮಾಡಿದರೆ ಈ ಭಾರವನ್ನು ತಾವು ಇಳಿಸಬಹುದಾಗಿತ್ತು, ಹಾಗೂ ಆ ಹಣವನ್ನು ತಾವು ಬಳಸಬಹುದಾಗಿತ್ತು. ಅಧ್ಯಕ್ಷರೇ, ನಮ್ಮ ಊರಿನ ಹೆಸರು ಕಾಟಿಪಾಳ್ಯ ಅದು ನಿರ್ವಾಸಿತರಾಗಿರತಕ್ಕಂಥವರು ಇರುವ ಊರು. ಮಾನ್ಯ ಮುಖ್ಯ ಮಂತ್ರಿಗಳಿಗೂ ಇದು ಗೊತ್ತಿದೆ. ನವಮಂಗಳೂರು ಬಂದರನ್ನು ನಿರ್ಮಾಣ ಮಾಡತಕ್ಕಂಥ ಕಾಲದಲ್ಲಿ ನಮ್ಮನ್ನೆಲ್ಲಾ ಅಲ್ಲಿಂದ ಸ್ಥಳಾಂತರಿಸಿದರು ಮನೆಗಳನ್ನು ಕಟ್ಟಿ ಕೊಳ್ಳಲಿಕ್ಕೆ ಅಲ್ಪಸ್ವಲ್ಪ ಹಣವನ್ನು ಸರಕಾರದ ವತಿಯಿಂದ ಹಾಗೂ ಬೇರೆ ಸಂಸ್ಥೆಗಳ ವತಿಯಿಂದ ಕೊಡಿಸಿದರು. ಈ ಹಣವನ್ನು ವಾಪಸ್ ಕಟ್ಟಲಿಕ್ಕೆ, ಬೀಡಿ ಕಟ್ಟಿಕೊಂಡು ಜೀವನ ಮಾಡತಕ್ಕ ಬಡಜನರಿಗೆ ಆಗಲಿಲ್ಲ. ಎರಡೂವರೆ ಸಾವಿರದಿಂದ ಐದು ಸಾವಿರ ರೂಪಾಯಿ ಹಣ ಕೊಟ್ಟಿದ್ದರು. ಅದನ್ನು ಮಾಫಿ ಮಾಡಿ ಎಂದು ಕೇಳಿದರೆ ಆಗಲಿಲ್ಲ. ದಯವಿಟ್ಟು ಬಡ್ಡಿ ಹಣವನ್ನಾದರೂ ಮಾಫಿ ಮಾಡಿ ಕಟ್ಟುವ ಹಾಗೆ ಮಾಡಿ ಎಂದರೂ ಕೇಳಲಿಲ್ಲ. ನಿಮ್ಮ ಕಂತು ಹಣ ಕಟ್ಟುವ ವಾಯಿದೆ ಆಗಿ ಹೋಯಿತು ಎಂದು ಬಡವರ ಮನೆಯ ಪಾತ್ರೆ ಪರಟೆಗಳನ್ನೆಲ್ಲಾ ಎಳೆದು ಹೊರಗೆ ಹಾಕಿದಂಥ ಸಂದರ್ಭ ಬಂತು. ೫೯ ಕೋಟಿ ರೂಪಾಯಿ ಬಾಕಿ ಇಟ್ಟಂಥ ಸಾರಾಯಿ ಗುತ್ತಿಗೆ ದಾರರಿಗೆ ಕಂತುಗಳ ಔದಾರ್ಯವನ್ನು ಕೊಟ್ಟು ವ್ಯವಸ್ಥೆ ಮಾಡುತ್ತೀರಿ ಎಂದರೆ, ತಮ್ಮ ಯಾವುದೋ ಒಂದು ನಡವಳಿಕೆಯಲ್ಲಿ ಒಂದು ರೀತಿಯ ನೈತಿಕ ವಾದಂಥ ಪತನ ತಮ್ಮಲ್ಲಿ ಈ ಎರಡೂ ಸಂಬಂಧಗಳಲ್ಲಿ ಆಗುತ್ತಿದೆ ಎಂದು ಸ್ಪಷ್ಟವಾಗಿ ನಾನು ಆರೋಪವನ್ನು ಈಗ ಮಾಡಬೇಕಾಗಿರುತ್ತದೆ.

ಅಧ್ಯಕ್ಷರು.—ಕೊನೆಗೆ ಒಂದು ಕವನ ಹೇಳುತ್ತೀರಾ ? ಹೆಚ್ಚಿನದೇನೂ ಹೇಳದೇ, ಕಳೆದ ಬಾರಿ ಮಾನ್ಯ ಮುಖ್ಯ ಮಂತ್ರಿಯವರು, ನಾನು ರಾಜ್ಯ ಪಾಲರ ಭಾಷಣದ ಮೇಲೆ ಮಾತನಾಡು ವಂತಹ ಸಂದರ್ಭದಲ್ಲಿ ಹೇಳಿದಂಥ ಅಂಶಗಳಿಗೆ ಉತ್ತರ ಹೇಳಲಿಕ್ಕೆ ಅವರು ಉಪಸ್ಥಿತರಿರಲಿಲ್ಲ. ಇವತ್ತು

ನಾನು ಅಪೇಕ್ಷೆ ಪಡುತ್ತೇನೆ, ಕಳೆದ ಬಾರಿ ಯಾವ ಯಾವ ವಿಚಾರಗಳ ಬಗ್ಗೆ ನಾನು ಅನುಮಾನವನ್ನು ವ್ಯಕ್ತ ಪಡಿಸಿದ್ದೆ ಅದರ ಬಗ್ಗೆ ಸ್ಪಷ್ಟೀಕರಣವನ್ನು ನಾಳೆ ತಮ್ಮ ಉತ್ತರದ ಮೂಲಕ ಮಾನ್ಯ ಮುಖ್ಯ ಮಂತ್ರಿಗಳು ಕೊಡುತ್ತಾರೆ ಎಂಬ ಭರವಸೆಯನ್ನು ತಳೆಯುತ್ತೇನೆ. ಮತ್ತು ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಅಜ್ಜಿಬಾಳ್ ಹೆಗಡೆಯವರೇ ಮಾತನಾಡಿ.

† ಶ್ರೀ ಜಿ. ಎಸ್. ಅಜ್ಜಿಬಾಳ್ ಹೆಗಡೆ (ಅಂಕೋಲಾ).— ಮಾನ್ಯ ಅಧ್ಯಕ್ಷರೇ, ಈ ಜಜೆಟನ್ನು ಬೆಂಬಲಿಸಿ ಮಾತನಾಡಲಿಕ್ಕೆ ನಾನು ನಿಂತಿದ್ದೇನೆ, ಪ್ರಥಮವಾಗಿ, ಈ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಸದಸ್ಯರ ಸಮ್ಮೇಳನ, ಬಜೆಟ್ ಭಾಷಣದ ಪ್ರಸ್ತಾವನೆಯಲ್ಲಿರುವುದರಿಂದ, ಇಲ್ಲೂ ಕೂಡಾ ಅದರ ಬಗ್ಗೆ ಮಾತನಾಡುತ್ತೇನೆ. ನಮ್ಮ ಕಾಂಗ್ರೆಸ್ ಮಿತ್ರರು ಇದರ ಬಗ್ಗೆ ಬಹಳಷ್ಟು ಟೀಕೆಗಳನ್ನು ಮಾಡಿದ್ದಾರೆ. ಎಲ್ಲರನ್ನೂ ಉರಿಬಿಸಿಲಲ್ಲಿ ನಿಲ್ಲಿಸಿದ್ದರು, ಸರಕಾರದ ಖರ್ಚಿನಲ್ಲಿ ಜನತಾ ಪಕ್ಷದ ಪ್ರಚಾರ ಮಾಡಿದರು ಎಂದು ಹೇಳಿದರು ಪ್ರಚಾರ ಮಾಡಿಕೊಂಡವರು, ಅದರ ಲಾಭ ಪಡೆದುಕೊಂಡವರು ನಮ್ಮ ಕಾಂಗ್ರೆಸ್ ಮಿತ್ರರು. ಅದೇ ಜಾಗದಲ್ಲಿ ಕಾಂಗ್ರೆಸ್‌ನವರು ತಮ್ಮ ಪಕ್ಷದ ಸದಸ್ಯರನ್ನುದ್ದೇಶಿಸಿ ಮಾತನಾಡಿದಾಗ ಉರಿಬಿಸಿಲು ಇರಲಿಲ್ಲವೇ ? ಈ ಸಮ್ಮೇಳನಕ್ಕೆ ಕೇಂದ್ರ ಮಂತ್ರಿಗಳಾದ ಶ್ರೀ ನರಸಿಂಹರಾವ್‌ರವರೂ ಬಂದಿದ್ದರು. ಇಂತಹ ಒಂದು ಸಮ್ಮೇಳನ ಇಡೀ ಭಾರತ ದೇಶದಲ್ಲಿ ಪ್ರಪ್ರಥಮವಾಗಿ ಅದಂಥ ಸಮ್ಮೇಳ ಎಂದು ಕೇಂದ್ರ ಮಂತ್ರಿಗಳೂ ಕೂಡಾ ಸರ್ಟಿಫೀಕೆಟ್ ಕೊಟ್ಟಿದ್ದಾರೆ. ಆದರೆ ನಮ್ಮ ಕಾಂಗ್ರೆಸ್ ಮಿತ್ರರು ಎರಡು ದಿವಸದ ನಂತರ ಮಾಡಿದ ಭಾಷದಲ್ಲಿ ಹೇಳಿದ ಮಾತುಗಳು ಪೇಪರ್‌ನಲ್ಲಿ ಬಂದಿದ್ದನ್ನು ನೋಡಿದರೆ, ಇವರಿಗೆ ಉದಾರತೆ ಸಹಿತ ಕಡಿಮೆ ಇದೆ ಎಂದು ಅನ್ನಿಸುತ್ತದೆ. ಇದಕ್ಕೆ ಅವರು ಬರಬಾರದಾಗಿತ್ತು, ಬರದೇ ಇದ್ದ ಹಾಗೆ ಮಾಡಬಹುದಾಗಿತ್ತು ಎಂದು ಹೇಳಿದರು. ಇದನ್ನು ನೋಡಿದರೆ ಏನು ಹೇಳಬೇಕು ಎಂದು ಗೊತ್ತಾಗುತ್ತಿಲ್ಲ. ಕೇಂದ್ರದ ಮಂತ್ರಿಗಳು ಇದು ಅತ್ಯಂತ ದೊಡ್ಡ ಸಮ್ಮೇಳನ, ಬಹಳ ಸಾಂಪ್ರದಾಯಿಕವಾದದ್ದು, ಮತ್ತು ದೇಶದ ಭವಿಷ್ಯವನ್ನು ನಿರ್ಮಿಸುವಂತಹ ಮುಖಂಡರಾಗಿದ್ದಾರೆ ಎಂದು ಸರ್ಟಿಫಿಕೇಟ್ ಕೊಟ್ಟರೂ ಸಹಿತ, ಕಾಂಗ್ರೆಸ್ ಮಿತ್ರರು ಈ ರೀತಿ ಹೇಳುವುದನ್ನು ನೋಡಿದರೆ ನನಗೆ ಆಶ್ಚರ್ಯವಾಯಿತು. ಚುನಾವಣೆಗೆ ಹೋದಾಗ ಆಡಳಿತ ಯಂತ್ರವನ್ನು ಉಪಯೋಗ ಮಾಡಿಕೊಂಡರು, ಬಹಳಷ್ಟು ಕಾಂಗ್ರೆಸ್ ಪಕ್ಷದವರ ಮೇಲೆ ದಬ್ಬಾಳಿಕೆ ಮಾಡಿದರು ಎಂದು ಹೇಳುವಂತಹ ಆಕ್ಷೇಪಗಳನ್ನು ಅನೇಕ ಕಡೆ ಮಾಡಿದರು. ಆದರೆ ನಿಜವಾಗಿಯೂ ಹೇಳಬೇಕಾದರೆ, ಕಾಂಗ್ರೆಸ್‌ನವರಿಗೆ ಈ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ತಮ್ಮ ಪಕ್ಷ ಗೆದ್ದು ಬರುತ್ತದೆ ಎಂಬ ಆಶೆ ಇರಲಿಲ್ಲ. ಚುನಾವಣೆಯಲ್ಲಿ ಯವಾಗ ೬೫೦ ಜನ ಇವರ ಪಕ್ಷದ ಸದಸ್ಯರು ಗೆದ್ದು ಬಂದರು, ಆಗ ಮಂಡಲ್ ಪಂಚಾಯಿತ್ ಚುನಾವಣೆಗೂ ಸಹಿತ ಕೇಂದ್ರದ ಮಂತ್ರಿಗಳು ಮೂಲೆ ಮೂಲೆಗು ಸಂಚರಿಸಿದರು. ಹೆದರಿಕೆ ಬೆದರಿಕೆಯನ್ನು ಜನತಾ ಪಕ್ಷದವರು ಮಾಡಿಲ್ಲ. ಆದರೆ ಕೇಂದ್ರ ಮಂತ್ರಿಗಳಾದ ಜನಾರ್ಧನ ಪೂಜಾರಿಯವರು, ಮಾರ್ಗರೇಟ್ ಆಳ್ವರವರು ನಮ್ಮ ಜಿಲ್ಲೆಯ ಮೂಲೆ ಮೂಲೆಯಲ್ಲೂ ಸುತ್ತಾಡಿದರು ಜನಾರ್ಧನ ಪೂಜಾರಿಯವರು ಈ ಸಂದರ್ಭದಲ್ಲಿ ಹೇಳಿದರು, ಕಾಂಗ್ರೆಸ್ ಪಕ್ಷಕ್ಕೆ ಏನಾದರೂ ಸಪೋರ್ಟ್ ಮಾಡದೇ ಹೋದರೆ ಈ ಜಿಲ್ಲೆಯಲ್ಲಿ ಲೋನ್ ಮೇಳವನ್ನು ಪುನರ್‌ವಿಮರ್ಶಿಸಬೇಕಾದೀತು ಎಂದರು. ಈಗ ಹೇಳಬೇಕು ಯಾರು ಬೆದರಿಸಿದರು ಮತದಾರರನ್ನು ಎಂಬುದನ್ನು ?

ಮತದಾರರೆಲ್ಲರಿಗೂ ಭಯಪಡಿಸಿದ್ದಾರೆ. ಆದರೂ ಕೂಡ ಮತದಾರರು ಜನತಾ ಸರ್ಕಾರಕ್ಕೆ ಬೆಂಬಲವನ್ನು ತೋರಿಸಿದರು. ನಮ್ಮ ಜಿಲ್ಲೆಯಲ್ಲಿ ಒಟ್ಟು ೨೯ ಸೀಟುಗಳಲ್ಲಿ ೨೨ ಸೀಟುಗಳು ಜನತಾ ಪಕ್ಷದ ಅಭ್ಯರ್ಥಿಗಳು ಗೆದ್ದು ಬಂದರು. ಅದೇ ರೀತಿಯಲ್ಲಿ ಮಂಡಲಪಂಚಾಯಿತಿ ಚುನಾವಣೆಗಳು ಕೂಡ ನಡೆದವು. ಈ ಚುನಾವಣೆಗಳಲ್ಲಿ ಕೂಡ ಜನ ಜನತಾ ಪಕ್ಷಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಮತದಾರರ ಮುಂದೆ ಕೇಂದ್ರ ಸರ್ಕಾರದ ಮಂತ್ರಿಗಳು ಈ ರೀತಿಯ ಶಬ್ದವನ್ನು ಹೇಳಬಾರದಿತ್ತು. ಅದೇ ಜಿಲ್ಲಾಪರಿಷತ್ತು ಚುನಾವಣೆಗಳಲ್ಲಿ ಮಂಗಳೂರಿನಲ್ಲಿ ಮತ್ತು ರಾಜ್ಯದ ಇತರ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಪ್ರಭಲವಾದ ವಿರೋಧಪಕ್ಷವಾಗಿ ಆಯ್ಕೆಯಾಗಿ ಬಂದಾಗ ಮಾನ್ಯ ಮುಖ್ಯ ಮಂತ್ರಿಗಳು ಪ್ರಶಂಸೆಯನ್ನು ವ್ಯಕ್ತಪಡಿಸಿ ಸ್ವಾಗತ ಮಾಡಿದರು. ಆದರೆ ವಿರೋಧ ಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಸದಸ್ಯರು ಜನತಾ ಸರ್ಕಾರದ ವಿರುದ್ಧವಾಗಿ ಆರೋಪಗಳನ್ನು ಮಾಡಿದರು. ಇದು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಮತದಾರರಿಗೆ ಮಾಡಿದ ಅವಮಾನ.

ನನ್ನ ದೃಷ್ಟಿಯಲ್ಲಿ ಕಾಂಗ್ರೆಸ್ ಪಕ್ಷ ಸ್ವಲ್ಪ ಮಟ್ಟಿಗೆ ಸಭ್ಯ ರೀತಿಯಲ್ಲಿ ವರ್ತನೆ ಮಾಡಿದ್ದರೆ ಚೆನ್ನಾಗಿರುತ್ತಿತು. ಅವರು ಆ ರೀತಿ ಮಾಡಲಿಲ್ಲ. ಇನ್ನು ಎರಡನೇಯದಾಗಿ, ಕೇಂದ್ರ ಸರ್ಕಾರದ ಮಂತ್ರಿಗಳಿಂದ ಹಿಡಿದು ರಾಜ್ಯ ಸರ್ಕಾರದ ಕಾಂಗ್ರೆಸ್ ಪಕ್ಷದ ಸದಸ್ಯರು ರಾಜ್ಯ ಸರ್ಕಾರ ದಿವಾಳಿಯಾಗಿದೆ ಎನ್ನುವ ಪ್ರಚಾರವನ್ನು ಮಾಡುತ್ತಾ ಬಂದರು. ಈ ಮಾತನ್ನು ಮಾನ್ಯ ವೀರಪ್ಪ ಮೊಯ್ಲಿಯವರು ಬಹಳ ಸಾರಿ ಹೇಳಿದರು. ಆದರೆ ಇವತ್ತು ಮಾನ್ಯ ವೀರಪ್ಪ ಮೊಯ್ಲಿಯವರು ಬಜೆಟ್ ಭಾಷಣದ ಮೇಲೆ ಅಂಕಿ ಅಂಶಗಳ ಸಮೇತವಾಗಿ ಬಹಳ ಚೆನ್ನಾಗಿ ಮಾತನಾಡಿದರು. ಆದರೆ ಪ್ರತಿ ಸಾರಿಯೂ ಕೂಡ ರಾಜ್ಯ ಸರ್ಕಾರದಲ್ಲಿ ಹಣ ಇಲ್ಲ. ರಾಜ್ಯ ಸರ್ಕಾರ ದಿವಾಳಿಯಾಗಿದೆ. ರಾಜ್ಯ ಸರ್ಕಾರದ ಆರ್ಥಿಕ ನೀತಿ ಸರಿಯಾಗಿಲ್ಲವೆಂದು ಪದೇ ಪದೇ ಹೇಳಿಕೊಂಡು ಬಂದರು, ಅದಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಸಹ ಉತ್ತರವನ್ನು ಪತ್ರಿಕೆಗಳಲ್ಲಿ ಕೊಟ್ಟಿದ್ದಾರೆ. ಇವತ್ತಿನ ಬಜೆಟ್‌ನ್ನು ನಾವು ನೋಡಿದಾಗ ಕಳೆದ ೩—೪ ವರ್ಷಗಳಲ್ಲಿ ರಾಜ್ಯ ಒಳ್ಳೆಯ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದನ್ನು ಕಾಣಬಹುದು. ಆದರೆ ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಕೇಂದ್ರ ಸರ್ಕಾರದ ಮಂತ್ರಿಗಳಾದಂಥ ಶ್ರೀಮಾನ್ ಜನಾರ್ಧನ ಪೂಜಾರಿಯವರು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದಾರೆ. ಅವರು ಆ ರೀತಿ ಹೇಳುತ್ತಿದ್ದನ್ನು ನೋಡಿದರೆ ನನಗಂತೂ ಆಶ್ಚರ್ಯವಾಗುತ್ತದೆ. ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಏನು ಹಣ ಬರುತ್ತದೆಯೋ ಅದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡಕ್ಕೂ ಸಂಬಂಧವಿದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇದು ಕೇಂದ್ರ ಸರ್ಕಾರವನ್ನು ಟೀಕೆ ಮಾಡಿದಂತಾಗುವುದಿಲ್ಲ. ನಿಜವಾಗಿಯೂ ಯಾರು ಬಜೆಟ್ ಅನ್ನು ಓದಿರುತ್ತಾರೋ ಅವರು ಇದನ್ನು ಕೇಂದ್ರ ಸರ್ಕಾರವನ್ನು ಮಾಡಿರುವ ಟೀಕೆಯೆಂದು ಹೇಳುವುದಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಮುಖ್ಯವಾಗಿ ಮೂರು ಅಂಶಗಳನ್ನು ಮಾತ್ರ ಹೇಳಿದ್ದಾರೆ. ಯಾವ ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಸಾಲಸೌಲಭ್ಯಗಳು ಸಿಗುತ್ತವೆ. ಎರಡನೆಯದಾಗಿ, ಫೈನಾನ್ಸ್ ಕಮಿಷನ್‌ನಿಂದ ಸಿಗುತಕ್ಕಂತಾದ್ದು, ಪ್ಲಾನಿಂಗ್ ಕಮಿಷನ್‌ನಿಂದ ಬರುವಂತಾದ್ದು ಮತ್ತು ವಿವೇಚನೆಯಿಂದ ಕೊಡತಕ್ಕಂಥ ಫಂಡ್ ಈ ವಿಚಾರಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಈಗ ವಿವೇಚನಾ ಫಂಡ್ ರಾಜಕೀಯವಾಗಿ ಬಳಸಿಕೊಳ್ಳುವುದಕ್ಕಾಗುವುದಿಲ್ಲ. ಇದು ಯಾವರೀತಿ ದುರುಪಯೋಗವಾಗುತ್ತದೆ ಎನ್ನುವುದನ್ನು ಅಂಕಿ ಅಂಶಗಳ ಸಮೇತವಾಗಿ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ. ಉದಾಹರಣೆಯಾಗಿ ಹೇಳುವುದಾದರೆ, ಕರ್ನಾಟಕ ರಾಜ್ಯಕ್ಕೆ ಪರ್‌ಕ್ಯಾಪಿಟಾ ಕೊಟ್ಟಿರುವುದು ೫೧೯. ಅದೇ ರೀತಿಯಲ್ಲಿ ಮಹಾರಾಷ್ಟ್ರಕ್ಕೆ ೬೦೦ ಮತ್ತೆ ಗುಜರಾತ್‌ಗೆ ೬೪೦, ರಾಜಸ್ಥಾನಕ್ಕೆ ೯೧೧ ಇದೆ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್ ಭಾಷಣದ ಅನುಬಂಧ ಎರಡಲ್ಲಿ ಕೊಟ್ಟಿದ್ದಾರೆ. ಅದನ್ನು ನಾನು ಪುನಃ ಇಲ್ಲಿ ಹೇಳುವ ಅವಶ್ಯಕತೆ ಇಲ್ಲ. ಆದ್ದರಿಂದ ನಾನು ಈ ಬಜೆಟ್ ಭಾಷಣವನ್ನು ಸ್ವಾಗತ ಮಾಡುತ್ತೇನೆ. ಇನ್ನು ಈ ಬಜೆಟ್‌ಗೆ ಸಂಬಂಧಪಟ್ಟ ಹಾಗೆ ಎರಡು ಮೂರು ಅಂಶಗಳನ್ನು ಮಾತ್ರ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ ಕೃಷ್ಣಾ ಮತ್ತು ಕಾವೇರಿ ಯೋಜನೆಗಳಿಗೆ ೧೦೦ ಕೋಟಿ ಹಾಗೂ ೨೦೦ ಕೋಟಿ ರೂಪಾಯಿಗಳನ್ನು ಏನು ಇಟ್ಟಿದ್ದಾರೋ ಅದೇ ರೀತಿಯಲ್ಲ ಮಲೆನಾಡು ಜಿಲ್ಲೆಗಳಾದ ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ ಕೊಡಗು ಮತ್ತು ಹಾಸನ, ಚಿಕ್ಕಮಂಗಳೂರು ಜಿಲ್ಲೆಗಳ ರಸ್ತೆಗಳ ಅಭಿವೃದ್ಧಿಗಾಗಿ, ಚಿಕ್ಕನೀರಾವರಿ ಅಭಿವೃದ್ಧಿಗಾಗಿ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಬೇಕೆಂದು ಕೇಳಿಕೊಳುತ್ತೇನೆ. ಎಷ್ಟೋ ವರ್ಷಗಳಿಂದ ನಾವು ಈ ಮಾತನ್ನು ಹೇಳುತ್ತಿದ್ದರೂ ಸಹ ಆ ಕೆಲಸವಾಗಿಲ್ಲ. ಈ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿದರೆ ಆ ಭಾಗದ ರಸ್ತೆಗಳ ಅಭಿವೃದ್ಧಿ ಮತ್ತು ಚಿಕ್ಕನೀರಾವರಿ ಅಭಿವೃದ್ಧಿ ಕೆಲಸಗಳಾಗುವುದಕ್ಕೆ ಅನುಕೂಲವಾಗುತ್ತದೆ. ಕೆರೆಕಟ್ಟೆಗಳ ಅಭಿವೃದ್ಧಿಯಾಗುತ್ತದೆ. ಮೈನರ್ ಇರಿಗೇಷನ್ ಆಗುತ್ತದೆ. ಈ ದೃಷ್ಟಿಯಿಂದ ಮೈನರ್ ಇರಿಗೇಷನ್ಸ್‌ಗೆ ಎಂದು ಏನು ೨೫ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಿದ್ದಾರೋ ಅದೇ ರೀತಿಯಲ್ಲಿ ಈ ಬೋರ್ಡ್‌ಗೆ ಹಣ ಒದಗಿಸಿಕೊಡಬೇಕು. ಇನ್ನು ಮೈನರ್ ಇರಿಗೇಷನ್‌ಗೆ ಈಗಿಟ್ಟಿರತಕ್ಕಂಥ ಹಣಕ್ಕೆ ಇನ್ನೂ ಎರಡು ಪಟ್ಟು ಜಾಸ್ತಿಮಾಡಬೇಕು. ಎರಡನೆಯದಾಗಿ ಪವರ್ ಬಗ್ಗೆ ಹೇಳಿದ್ದಾರೆ. ನಮ್ಮ ಮಾನ್ಯ ಮೊಯ್ಲಿಯವರು ಮಾತನಾಡುತ್ತಾ ಕೈಗಾ ಬಗ್ಗೆ ಪ್ರಸ್ತಾಪ ಮಾಡಿದರು.

ಕೈಗಾ ಅಣುವಿದ್ಯುತ್ ಯೋಜನೆಗೆ ಕೇಂದ್ರ ಸರ್ಕಾರದವರು ಸರಿಯಾದ ರೀತಿಯಲ್ಲಿ ಮಾಡಿದರೆ ಅದಕ್ಕೆ ನಮ್ಮ ಸರ್ಕಾರವು ಪೂರ್ಣ ಪ್ರೋತ್ಸಾಹವನ್ನು ಕೊಡುತ್ತದೆ. ಶ್ರೀ ಮಾನ್ಯ ಕೆ. ಹೆಚ್. ಪಾಟೀಲರು ಮತ್ತು ಮಾನ್ಯ ಮಲ್ಲಾರಿಗೌಡರು, ಮ ಗಾತನಾಡುತ್ತಾ ಡಾ. ಶಿವರಾಮಕಾರಂತರು ಈ ಕೈಗಾ ಅಣುವಿದ್ಯುತ್ ಯೋಜನೆ ಮಾಡುವುದಕ್ಕೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ ಆದ್ದರಿಂದ ಅವರಿಗೆ ಸ್ವಲ್ಪ ವಿಷಯವನ್ನು ಮನದಟ್ಟು ಮಾಡಿಕೊಡಬೇಕೆಂದು ಹೇಳಿದ್ದಾರೆ. ರಷ್ಯಾದಲ್ಲಿ ಚೆರ್ನೋಬೈಲ್‌ನಲ್ಲಿ ಅಣು ವಿದ್ಯುತ್ ಸ್ಥಾವರದಲ್ಲಿ ದುರಂತ ಸಂಬಿಸಿದುದರಿಂದ ಜನರು ಈ ಕೈಗಾ ಅಣು ವಿದ್ಯುತ್ ಯೋಜನೆಯ ಬಗ್ಗೆ ಭಯ ಬೀಳುತ್ತಿದ್ದಾರೆ. ಮೊನ್ನೆ ಲೋಕಸಭೆಯಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು, ಇನ್ನೂ ಕೈಗಾ ಅಣು ವಿದ್ಯುತ್ ಯೋಜನೆ ಕೆಲಸ ಪ್ರಾರಂಭವಾಗಿಲ್ಲವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಎಷ್ಟು ಬೇಗ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನಪಡುತಾರೋ, ಅಷ್ಟು ಬೇಗ ರಾಜ್ಯ ಸರ್ಕಾರವು ತನ್ನ ವತಿಯಿಂದ ಸಹಾಯ ಮಾಡುತ್ತದೆ. ಅಣು ವಿದ್ಯುತ್ ಯೋಜನೆಯಿಂದ ನಾವು ಹೆಚ್ಚು ಉಪಯೋಗವನ್ನು ಪಡೆಯಬೇಕು. ಅದರ ಬಗ್ಗೆ ನಮ್ಮಲ್ಲಿ ಎರಡು ಅಭಿಪ್ರಾಯ ಇಲ್ಲ. ಇನ್ನು ಎರಡನೆಯದಾಗಿ ಹೇಳುವುದೇನೆಂದರೆ, ಬೇಡ್ತಿ ಯೋಜನೆ ಬಗ್ಗೆ ಇನ್ನೂ ಏನೂ ಆಗಿಲ್ಲವೆಂದು ಶ್ರೀಮಾನ್ ಅಶ್ವತ್ಥರೆಡ್ಡಿಯವರು ಹೇಳಿದ್ದಾರೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ವಿರೋಧಪಕ್ಷದಲ್ಲಿ ಇದ್ದಾಗಲೇ ಈ ಬೇಡ್ತಿ ಯೋಜನೆಯನ್ನು ಮಾಡಬಾರದೆಂದು ಹೇಳಿದ್ದರು. ಈ ಯೋಜನೆ ತಯಾರು ಮಾಡಬೇಕೇ ಬೇಡವೇ ಎಂಬ ಬಗ್ಗೆ ವರದಿಯನ್ನು ಕೊಡಲು ಒಂದು ಕಮಿಷನ್ನ್ನೇ ನೇಮಕ ಮಾಡಲಾಗಿತ್ತು. ಈ ಕಮಿಷನ್ ನೇಮಕ ಮಾಡಿದ ೫ ವರ್ಷದ ನಂತರ, ಆ ಕಮಿಷನ್‌ನವರು ರಿಪೋರ್ಟ್ ಕೊಟ್ಟರು. ಈ ವರದಿಯ ಪ್ರಕಾರವೂ ಬೇಡ್ತಿ ಯೋಜನೆಯನ್ನು ಬೈಬಿಡಬೇಕೆಂದು ಒಪ್ಪಿಕೊಳ್ಳಲಾಯಿತು. ಈ ಬೇಡ್ತಿ ಜಲವಿದ್ಯುತ್ ಯೋಜನೆಯನ್ನು ನಾವು ಮಾಡುವುದಕ್ಕೆ ಹೊರಟಿದ್ದಿದ್ದರೆ ಸಾವಿರಾರು ಎಕರೆಗಳಲ್ಲಿ ಇದ್ದ ಕಾಡು ನಾಶವಾಗುತ್ತಿತ್ತು. ಕಾಡು ನಾಸವಾಗುವುದರಿಂದ ಪರಿಸರ ಸಮತೋಲನ ಕೆಟ್ಟು ಹೋಗಿಬಿಡುತ್ತದೆ ಎಂಬ ದೃಷ್ಟಿಯಿಂದ ಜಲ ವಿದ್ಯುತ್ ಯೋಜನೆಯ ಕಾರ್ಯಗತವನ್ನು ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯ ವಿದ್ಯುತ್ ಸರಬರಾಜಿಗಾಗಿ ಜಲವಿದ್ಯುತ್ ಯೋಜನೆಯನ್ನು ಅವಲಂಭಿಸಿದೆ, ಆದರೆ ಇವತ್ತಿನ ದಿವಸಗಳಲ್ಲಿ ಮಳೆ ಇಲ್ಲದೆ ನೀರು ಇಲ್ಲದೆ ಜಲ ವಿದ್ಯುತ್ ಯೋಜನೆಯಿಂದ ಎಷ್ಟು ಬೇಕೋ ಅಷ್ಟು ವಿದ್ಯುತ್ ಉತ್ಪತ್ತಿಯಾಗುತ್ತಿಲ್ಲ. ಆ ದೃಷ್ಟಿಯಿಂದ ಎಷ್ಟರಮಟ್ಟಿಗೆ ಜಲವಿದ್ಯುತ್‌ನ್ನು ಮಾಡಬೇಕೆನ್ನುವ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ಆಮೇಲೆ, ವಿದ್ಯುಚ್ಛಕ್ತಿ ಎಕ್ಸ್‌ಪರ್ಟ್ಸ್‌ಗಳ ಪ್ರಕಾರ, ಎಲೆಕ್ಟ್ರಿಸಿಟಿ ಡಿಸ್ಟ್ರಿಬ್ಯೂಷನ್‌ನಲ್ಲಿ ಸುಮಾರು ೨೦ ರಿಂದ ೧೫ ಪರ್ಸೆಂಟ್‌ನಷ್ಟು ವಿದ್ಯುತ್‌ಚ್ಛಕ್ತಿ ಖೋತವಾಗುತ್ತಿದೆ. ಈ ಖೋತವನ್ನು ಉಳಿಸಲಿಕ್ಕೆ ಪ್ರಯತ್ನ ಮಾಡಿದರೆ ಎಷ್ಟೋ ವಿದ್ಯುತ್‌ನ್ನು ಉಪಯೋಗ ಮಾಡಿಕೊಳ್ಳಬಹುದು. ಆದ್ದರಿಂದ, ಈ ರೀತಿಯ ಜಲವಿದ್ಯುತ್ ಯೋಜನೆಗಳಿಗೆ ಕೈ ಹಾಕಿ ಪರಿಸರವನ್ನು ಕೆಡಿಸಿ ಮತ್ತಷ್ಟು ತೊಂದರೆಗೆ ಸಿಲುಕಿಸಬಾರದು. ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದವರು 'ಸೀ ಬರ್ಡ್' ಯೋಜನೆಯನ್ನು ಮಾಡಿದ್ದಾರೆ. ಈ ಯೋಜನೆಯಿಂದ ನಿರ್ವಸಿತರಾಗುವ ಮೂರು ಸಾವಿರ ಕುಟುಂಬದವರಿಗೆ ಎಲ್ಲಿ ಜಾಗ ಕೊಡಬೇಕೆಂದು ಇನ್ನೂ ನಿರ್ಧಾರ ಮಾಡಿಲ್ಲ. ಒಂದು ವೇಳೆ ಈ ಜನಗಳಿಗೆ ಅರಣ್ಯ ಪ್ರದೇಶವನ್ನು ಕೊಡಬೇಕೆಂದರೆ, ಅರಣ್ಯ ನಾಶವಾಗುತ್ತದೆ. ಕೇಂದ್ರದವರು, ಆ ಜನರಿಗೆ ಅರಣ್ಯ ಜಾಗವನ್ನು ಕೊಟ್ಟರೆ ನಾವು ಬೇರೆ ಜಾಗದಲ್ಲಿ ಅರಣ್ಯ ಬೆಳೆಸುವುದಕ್ಕೆ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು, ಈ ಯೋಜನೆ ಪ್ರಾರಂಭವಾಗುವುದಕ್ಕೂ ಮುಂಚಿತವಾಗಿ ಅಲ್ಲಿನ ಜನರಿಗೆ ಪುನರ್‌ವಸತಿ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಹೇಳಿದ್ದಾರೆ. ಕಾರವಾರದಲ್ಲಿ ರಾಜ್ಯ ಸರ್ಕಾರದವರು ಬಹಳಷ್ಟು ಪ್ರಯತ್ನ ಮಾಡಿ ಇಪ್ಪತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಬಂದರನ್ನು ತಯಾರು ಮಾಡಿದ್ದರು. ಕೇಂದ್ರದವರು 'ಈಗ ಈ ಯೋಜನೆಯನ್ನು ತಯಾರು ಮಾಡಿರುವುದರಿಂದ ರಾಜ್ಯ ಸರ್ಕಾರದ ಪೋರ್ಟ್ ಸರ್ವಜನಿಕ ಉಪಯೋಗಕ್ಕೆ ಎಷ್ಟರಮಟ್ಟಿಗೆ ಬರಬಹುದೆಂಬುದನ್ನು ಯೋಚಿಸಬೇಕಾಗಿದೆ. ಈ ಸೀಬರ್ಡ್ ಯೋಜನೆಯಲ್ಲಿ ಆ ಜಾಗವು ಮಿಲಿಟರಿಗೆ ಬೇಕಾಗಿರುವುದರಿಂದ ಈ ಪೋರ್ಟ್ ಸಾರ್ವಜನಿಕ ಉಪಯೋಗಕ್ಕೆ ಬರುವುದಿಲ್ಲವೆಂದು ನಾನು ಸಂಶಯ ವ್ಯಕ್ತ ಮಾಡುತ್ತೇನೆ. ಕೇಂದ್ರ ಸರ್ಕಾರದವರು ಕಾರವಾರದಲ್ಲಿ ಸೀಬರ್ಡ್ ಯೋಜನೆ ಮಾಡಿದ್ದರಿಂದ, ರಾಜ್ಯ ಸರ್ಕಾರವು ೨೦ ಕೋಟಿ ರೂಪಾಯಿಗಳಲ್ಲಿ ಕಟ್ಟಿದ ಬಂದರು ಪ್ರಯೋಜನಕ್ಕೆ ಬರದಾಗಿದೆ.

ಆದುದರಿಂದ ಹೊಸ ಪೋರ್ಟ್‌ನ್ನು ಕಟ್ಟಲಿಕ್ಕೆ ಬೇಕಾದಂತಹ ಹಣವನ್ನು ಕೇಂದ್ರ ಸರಕಾರದವರು ಕೊಡಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಆ ಕುರಿತು ಮಾನ್ಯ ಮುಖ್ಯ ಮಂತ್ರಿಯವರು ಕೇಂದ್ರ ಸರಕಾರದವರಿಗೆ ಮನವಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ, ಹುಬ್ಬಳ್ಳಿ, ಕಾರವಾರ, ರೈಲ್ವೆ ಬಗ್ಗೆ ಬಹಳಷ್ಟು ಹೇಳಿದ್ದರೂ ಕೂಡ, ಮನವಿಗಳನು ಕೊಟ್ಟಿದ್ದರೂ ಕೂಡ ಈ ವರ್ಷದ ಕೇಂದ್ರದ ಬಜೆಟ್‌ನಲ್ಲಿ ಒಂದು ವಾಕ್ಯವೂ ಇಲ್ಲವಾಗಿದೆ. ಈ ರೈಲು ಮಾರ್ಗದಿಂದ ಕೇವಲ ಕಾರವಾರ ಜಿಲ್ಲೆಗಷ್ಟೇ ಅಲ್ಲದೇ ಇಡೀ ಉತ್ತರ ಕರ್ನಾಟಕಕ್ಕೆ ಇದರಿಂದ ವಿಕಾಸ ಹೊಂದುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ದಯವಿಟ್ಟು ಮುಖ್ಯ ಮಂತ್ರಿಯವರು ಈ ಬಗ್ಗೆ ಕೇಂದ್ರಕ್ಕೆ ಮನವಿಯನ್ನು ಸಲ್ಲಿಸಬೇಕು.

ನಾಲ್ಕನೇಯದಾಗಿ, ನಮ್ಮ ಸನ್ಮಿತ್ರರಾದ ಉದಾಸಿಯವರು ಬೆಳೆ ವಿಮೆ ಆಗಬೇಕು ಎಂದು ಹೇಳಿದರು ಹಾಲಿ ಇರುವುದು ಬೆಳೆ ಸಾಲದ ವಿಮೆ, ಬೆಳೆ ಸಾಲದ ವಿಮೆಯಲ್ಲ ಕೂಡ ವಿಮೆ ಹಣ ಬರುತ್ತಿಲ್ಲ. ಇದು ಬಹಳ ದುಃಖದ ಸಂಗತಿಯಾಗಿದೆ. ಯಾಕೆಂದರೆ, ಇನ್ಶೂರೆನ್ಸ್ ಕಂಪನಿಯವರು ಏನೊಂದು ಉತ್ಪನ್ನವನ್ನು ಹಿಡಿಯುತ್ತಾರೆ, ಅದಕ್ಕಿಂತ ಕಡಿಮೆ ಆದರೆ ಮಾತ್ರ ಇನ್‌ಶೂರ್ ಹಣ ಸಿಗುತ್ತದೆ. ಅದು ಬಹಳ ಕಡಿಮೆ ಸಿಗುತ್ತದೆ. ಆ ದೃಷ್ಟಿಯಿಂದ ವಿಮೆಯು ಅಷ್ಟು ಉಪಯೋಗ ಆಗಿಲ್ಲ. ಒಂದು ಕೋಟಿ, ೮೦ ಲಕ್ಷ ರೂಪಾಯಿಗಳ ಮಾತ್ರ ಬೆಳೆ ವಿಮೆ ಆಗಬೇಕು. ಇದು ಬಹಳ ಕಡಿಮೆ. ಇದು ಸಿಕ್ಕಿಬೇಕಾದರೆ ಬೇಕಾದಷ್ಟು ಸಮಸ್ಯೆಗಳು ಇವೆ. ಇದರ ನಿವಾರಣೆ ಮಾಡಬೇಕು. ಮುಖ್ಯ ಮಂತ್ರಿಯವರು ಇನ್‌ಶೂರೆನ್ಸ್ ಕಂಪನಿಯವರ ಹತ್ತಿರ ಮಾತನಾಡದೇ ಹೋದರೆ ನಮ್ಮ ಕಾರವಾರ, ಕೊಡಗು, ದಕ್ಷಿಣಕನ್ನಡ ಜಿಲೆಗಳಲ್ಲಿ ಮಳೆ ಯಾವತ್ತೂ ಆಗುತ್ತಿತ್ತೋ, ಅಂತಹ ಕಡೆಗಳಲ್ಲಿ ಈಗ ಅರ್ಧದಷ್ಟು ಕೂಡ ಮಳೆ ಇಲ್ಲವಾಗಿದೆ. ಅಲ್ಲಿ ಕುಡಿಯುವ ನೀರಿನ ಅಭಾವ ಕೂಡ ಬರುವ ಸಂಭವ ಇದೆ. ಅಲ್ಲಿಗೆ ಇನ್‌ಶೂರನ್ಸ್ ಬೇಡ ಎಂಬ ಬೇಡಿಕೆ ಇತ್ತು. ಆದರೆ ಈ ವರ್ಷವೂ ಕೂಡ ಅಲ್ಲಿ ಇನ್‌ಶೂರೆನ್ಸ್ ಸಿಗದಿದ್ದರೆ ಅಲ್ಲಿ ಇನ್‌ಶೂರೆನ್ಸ್ ಬಗ್ಗೆ ಪ್ರತಿಕ್ರಿಯೆ ಬಹಳ ಕೆಟ್ಟದ್ದು ಆಗುತ್ತದೆ. ಈ ದೃಷ್ಟಿಯಿಂದ ಈ ವಿಷಯವನ್ನು ಕೂಡ ಎತ್ತಿಕೊಳ್ಳಬೇಕು.

ಇನ್ನೊಂದು ವಿಷಯದಲ್ಲಿ ಸರಕಾರದವರನ್ನು ಅಭಿನಂದಿಸುತ್ತೇನೆ. ಕಳೆದ ವರ್ಷ ಧಾರವಾಡದಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಾಡಿದರು. ಅದು ಬಹಳ ಒಳ್ಳೆಯ ಕೆಲಸ. ಏಕೆಂದರೆ ಆ ಭಾಗದ ರೈತರ ಸಮಸ್ಯೆಗಳು ಏನಿವೆ ಅದನ್ನು ಪರಿಹರಿಸಲು ಸಹಕಾರಿಯಾದಂತಾಯಿತು ಸರ್ಕಾರಕ್ಕೆ ಯೂನಿವರ್ಸಿಟಿಯವರು ಒಂದು ಪತ್ರವನ್ನು ಬರೆದಿದ್ದಾರೆ ಆ ಪತ್ರದ ಪ್ರಕಾರ ಕಾರವಾರದ ಮಾಗೋಡಿನಲ್ಲಿ ಒಂದು ಫಾರೆಸ್ಟ್ ಕಾಲೇಜು ಆಗಬೇಕು ಎಂದು ಇದೆ. ಇದು ದಯಮಾಡಿ ಮಾಡಿಕೊಡಬೇಕು. ಇಷ್ಟೇ ಅಲ್ಲ ಅಡಿಕೆ, ಮೆಣಸು, ಯಾಲಕ್ಕಿ, ಇವುಗಳು ಒಂದೇ ತೋಟದಲ್ಲಿ ಬೆಳೆಯತಕ್ಕಂಥ ಬೆಳೆಗಳು. ಮೂರು ಬೆಳೆಗಳೂ ಒಂದೇ ಕಡೆಯಲ್ಲಿ ಆಗುವುದರಿಂದ ಒಂದಕ್ಕೆ ರೋಗ ತಗುಲಿದರೆ, ಅದು ಮತ್ತೊಂದು ಬೆಳೆಗೆ ಹಬ್ಬುತ್ತಯೋ, ಇಲ್ಲವೇ? ಹಬ್ಬಿದರೆ ಅದರ ಪರಿಣಾಮಗಳು ಏನು ಎಂಬುದನ್ನು ತಿಳಿದುಕೊಂಡು ಅವುಗಳಿಗೆ ರಕ್ಷಣೆ ಕೊಡಲು ಒಂದು ರಿಸರ್ಚ್ ಸೆಂಟರ್ ಮಾಡಿ ಅನುಕೂಲ ಮಾಡಿಕೊಡಬೇಕು. Composit Crop Research Centre ಮಾಡಬೇಕು. ಇದಕ್ಕಾಗಿ ಎಲ್ಲಾಪುರ ತಾಲ್ಲೂಕಿನಲ್ಲಿರುವ ತಾರಿಹಳ್ಳಿ ಎಂಬ ಊರಿನವರು ಜಾಗವನ್ನು ಕೊಡಲಿಕ್ಕೆ ಸಿದ್ಧರಿದ್ದಾರೆ. ಅಗ್ರಿಕಲ್ಚರ್ ಯೂನಿವರ್ಸಿಟಿಯವರು ಕೂಡ ಕೇಳಿದ್ದಾರೆ. ಆದುದರಿಂದ ಸರಕಾರದವರು ಇದಕ್ಕಾಗಿ ಹಣವನ್ನು ಮತ್ತು ಜಾಗವನ್ನು ಕೊಡುವ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಮೂರನೇಯದಾಗಿ, ಸಿದ್ಧಾಪುರ ತಾಲ್ಲೂಕಿನ ಬಾಳಿಕೊಪ್ಪಲಿನಲ್ಲಿ ಮಾನ್ಯ ಶ್ರೀ ಕೆ.ಹೆಚ್. ಪಾಟೀಲರು ಕೃಷಿ ಮಂತ್ರಿಯವರಾಗಿದ್ದಾಗ ಗ್ರಾಸ್‌ಪೆಲಿಟೈಸೇಶನ್ ಯೂನಿಟ್ ಮಾಡಿದರು. ಆದರೆ ಈಗ ಅದರ ಬಗ್ಗೆ ಕೇಳುವವರೇ ಇಲ್ಲ. ಯಾರ ಲಕ್ಷವೂ ಕಡೆಗೆ ಇಲ್ಲವಾಗಿದೆ. ಈಗ ಬರಗಾಲ ಬಿದ್ದಾಗ ಮೇವಿನ ಸಮಸ್ಯೆ ಬರುತ್ತಿದೆ ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಆ ಯೂನಿಟ್‌ನಲ್ಲಿ ಸಾವಿರಾರು ಎಕರೆ ಪ್ರದೇಶಗಳಲ್ಲಿ ಹುಲ್ಲನ್ನು ಬೆಳೆಸಿದ್ದೇ ಅದಲ್ಲಿ, ನಮಗೆ ಯಾವಾಗಲೂ ಹುಲ್ಲು ಮೇವಿನ ಸಮಸ್ಯೆ ಬರಲಾರದು. ಈ ಕುರಿತು ಏರ್ಪಾಡು ಮಾಡಲಿಕ್ಕೆ ಅಗ್ರಿಕಲ್ಚರ್ ಯೂನಿವರ್ಸಿಟಿಯವರು ಸರಕಾರವನ್ನು ಕೇಳಿಕೊಂಡಿದ್ದಾರೆ. ಅದಕ್ಕೆ ಸರಕಾರದವರು ಹಣವನ್ನು ಕೊಡಬೇಕು.

ಇನ್ನು ನಮ್ಮ ಜಿಲ್ಲೆಯಲ್ಲಿ ಉದ್ಭವಿಸಿದ ಒಂದು ದೊಡ್ಡ ಸಮಸ್ಯೆ ಏನೆಂದರೆ ಪ್ರಮುಖ ಬೆಳೆಗಳ ಬೆಲೆ ಕುಸಿತ. ಮೊದಲು ಅಡಿಕೆಯ ಧಾರಣೆ ಕ್ವಿಂಟಾಲಿಗೆ ೨ ರಿಂದ ೩ ಸಾವಿರ ರೂಪಾಯಿಗಳ ವರೆಗೆ ಇದ್ದುದು ಈಗ ಕಳೆದ ನಾಲ್ಕು ತಿಂಗಳುಗಳಿಂದ ಒಂದ ರಿಂದ ಒಂದೂವರೆ ಸಾವಿರ ರೂಪಾಯಿಗಳಿಗೆ ಕುಸಿತವಾಗಿದೆ. ಈ ಕಾರಣದಿಂದಾಗಿ ಅಡಿಕೆ ಬೆಳೆಗಾರರು ಕಂಗಾಲಾಗಿದ್ದಾರೆ. ಇವೊತ್ತು ಕೆಂಪ್ಕೋ ಎನ್ನುವ ಮಾರ್ಕೆಟಿಂಗ್ ವ್ಯವಸ್ಥೆಯನ್ನು ಮಾಡುತ್ತಾ ಇದ್ದಾರೆ. ಆದರೆ ಅದಕ್ಕೆ ಬೇಕಾದಂತಹ ಕೆಲವು ಸಹಾಯ ಸೌಲಭ್ಯಗಳನ್ನು ಸರಕಾರದವರು ಮಾಡಬೇಕು. ಈ ಕುರಿತು ಒಂದು ಯೋಜನೆಯನ್ನು ಮಾಡಿ ಈ ಒಂದು ವ್ಯವಸ್ಥೆಗೆ ಯೋಗ್ಯ ಸಹಾಯವನ್ನು ಕೊಟ್ಟು ಅಡಿಕೆ ಬೇಸಾಯಗಾರರಿಗೆ ಈಗ ಬಂದಿರತಕ್ಕಂಥ ಒಂದು ಸಂಕಷ್ಟವನ್ನು ನಿವಾರಣೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಾಲ್ಕನೆಯದು ಆಸ್ಪತ್ರೆಗಳ ವಿಷಯ ಉತ್ತರ ಕರ್ನಾಟಕ ಭಾಗದಲ್ಲಿ ಹುಬ್ಬಳಿ ಮೆಡಿಕಲ್ ಕಾಲೇಜ್ ಆಸ್ಪತ್ರೆ ಧಾರವಾಡದಲ್ಲಿ ಸಿವಿಲ್ ಆಸ್ಪತ್ರೆ ಮತ್ತು ಮೆಂಟಲ್ ಆಸ್ಪತ್ರೆ ಇಷ್ಟೇ ಆ ಭಾಗಕ್ಕೆ ಇರುವುದು. ೪೫ ವರ್ಷಗಳಿಂದ ಮೆಂಟಲ್ ಆಸ್ಪತ್ರೆ ಅಲ್ಲಿ ಇದೆ. ಆದರೆ ಅದಕ್ಕೆ ಬೇಕಾದಂಥ ಯೋಗ್ಯ ಸಾಮಗ್ರಿಗಳು ಇಲ್ಲ ಹಾಗೂ ಯೋಗ್ಯ ಡಾಕ್ಟರುಗಳು ಇಲ್ಲ. ಇಷ್ಟು ಹಳೆಯ ಆಸ್ಪತ್ರೆಯನ್ನು ನವೀಕರಣಗೊಳಿಸಿದರೆ ಒಳ್ಳೆಯದು ಸ್ವಾಮಿ. ಸಿವಿಲ್ ಆಸ್ಪತ್ರೆಯನ್ನು ೨೫೦ ಬೆಡ್‌ಗಳಿಗೆ ಏರಿಸಿದರೆ ಒಳ್ಳೆಯದಾಗುತ್ತದೆ. ಇನ್ನು ಕೆಎಂಸಿ ಬಗ್ಗೆ ಹೇಳಿದಷ್ಟೂ ಕಡಿಮೆಯೇ. ಮಾನ್ಯ ಮಂತ್ರಿಗಳಾದ ಶ್ರೀ ಎಸ್. ಆರ್. ಬೊಮ್ಮಾಯಿಯವರು ಸ್ವಲ್ಪ ದಿನಗಳ ಹಿಂದೆ ಒಂದು ಮೀಟಿಂಗ್ ಕರೆಯಿಸಿ ಎಲ್ಲೆಲ್ಲಿ ಯಾವ್ಯಾವ ರೀತಿ ವ್ಯವಸ್ಥೆ ಆಗಬೇಕು ಎಂಬ ಬಗ್ಗೆ ವಿವರ ಸಂಗ್ರಹಿಸಿದ್ದರು. ಅವರ ಜೊತೆಯಲ್ಲಿ ಆಗಿನ ಆರೋಗ್ಯ ಸಚಿವರಾದ ಶ್ರೀ ಹೆಚ್.ಎಲ್. ತಿಮ್ಮೇಗೌಡರೂ ಇದ್ದರು. ಆದರೆ ಇದುವರೆಗೂ ಏನೂ ವ್ಯವಸ್ಥೆ ಆದಂತಾಗಲಿಲ್ಲ. ಉತ್ತರ ಕರ್ನಾಟಕದ ಭಾಗಗಳಿಗೆಲ್ಲಾ ಇರುವ ದೊಡ್ಡ ಆಸ್ಪತ್ರೆ ಇದು. ವ್ಯವಸ್ಥೆ ಇಲ್ಲ, ಶೌಚ ಇಲ್ಲ, ಎಲ್ಲಾ ವಿಭಾಗಗಳಿಗೆ ಡಾಕ್ಟರುಗಳಿಲ್ಲ. ಇದಕ್ಕೆಲ್ಲಾ ವ್ಯವಸ್ಥೆ ಮಾಡಬೇಕೆಂದು ಕೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಮೊದಲು ಮಾತನಾಡಬೇಕಾಗಿದ್ದ ನಾನು ಕೊನೆಗೆ ಮಾತನಾಡುತ್ತಿದ್ದೇನೆ. ಜಾಸ್ತಿ ಹೊತ್ತು ತೆಗೆದುಕೊಳ್ಳದೆ ಕೆಲವು ವಿಷಯವನ್ನು ಮಾತ್ರ ಹೇಳಲಿಕ್ಕೆ ಬಯಸುತ್ತೇನೆ. ಸ್ವಾಮಿ, ನನ್ನ ಪಾರ್ಟಿ ಸದಸ್ಯರು ಈ ಆಯವ್ಯಯದ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಅದರಲ್ಲೂ ಮಾನ್ಯ ಮೊಯ್ಲಿಯವರು ಆಯವ್ಯಯ ಮತ್ತಿತರ ಆದಾಯ ಏನಿದೆ, ಕೇಂದ್ರದಿಂದ ಏನು ಬರಬೇಕು, ಏನು ಬರುವುದಿಲ್ಲ, ನೀವು ಏನು ಮಾಡಬೇಕು, ಏನು ಮಾಡಿಲ್ಲ ಎಂಬುದನ್ನು ವಿವರವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಜನತಾ ಪಕ್ಷದ ಪರವಾಗಿಯೂ ಕೆಲವರು ಮಾತನಾಡಿದ್ದಾರೆ ಹಾಗೂ ಬೆಳಕನ್ನು ಚೆಲ್ಲಿದ್ದಾರೆ. ಆ ವಿಷಯಗಳ ಗೋಜಿಗೆ ಹೋಗದೆ ಉಳಿದಿರುವುದರ ಬಗ್ಗೆ ಮಾತನಾಡುವುದಕ್ಕೆ ಪ್ರಯತ್ನಿಸುತ್ತೇನೆ.

ಈಗ ಏನು ಬಜೆಟ್ ಇಟ್ಟಿದ್ದಾರೆ ಇದು ೧೯೮೩ರಿಂದ ಪ್ರಾರಂಭಗೊಂಡು ಈ ಬಜೆಟ್ ಸಹ ಅಪೂರ್ಣವಾಗಿದೆ. ಈ ಸರ್ಕಾರಕ್ಕೆ ಪೂರ್ಣ ಬಜೆಟನ್ನು ಇಡಲಿಕ್ಕೆ ಆಗುತಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಕೂಲಂಕಷವಾಗಿ ಅಂಕಿಅಂಶಗಳನ್ನು ಪರಿಶೀಲನೆ ಮಾಡಿದಾಗ ಆಯವ್ಯಯ ಪತ್ರ "Budget of Bankruptcy" ಎಂಬ ಭಾವನೆ ಬರುತ್ತದೆ. ಕೊರತೆಯ ವಿಷಯವಾಗಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಎಲ್ಲರೂ ಮಾತನಾಡುವಾಗ ಈ ಬಜೆಟ್ ಮೇಲೆ ಹಾಗೆ ಮಾತನಾಡುವುದು ಕೇವಲ ಪ್ರಾಸಂಗಿಕ ಎಂದು ನನಗೆ ಅನಿಸುತ್ತಿದೆ. ಮಾನ್ಯ ಶ್ರೀ ವೈ.ಕೆ. ರಾಮಯ್ಯನವರು ರಾಜ್ಯಪಾಲರ ಭಾಷಣದ ಮೇಲೆ ಭಾಷಣ ಮಾಡುವಾಗ ಹಾಗೆ ಭಾಷಣ ಮಾಡುವುದು ಪ್ರಾಸಂಗಿಕವಾಗಿದೆ ಎಂದು, ಇದರ ಪರಿಣಾಮ ಏನು ಎಂಬ ಪ್ರಶ್ನೆ ಹಾಕಿದ್ದರು. ನಾವು ಭಾಷಣ ಮಾಡುವುದು, ಅವರು ಕುಳಿತು ಎದ್ದು ಹೋಗುವುದು ಇದೆಲ್ಲಾ ನೋಡಿದರೆ ಇದೂ ಪ್ರಾಸಂಗಿಕವೇನೋ ಎಂದು ಅನಿಸುವಂತಾಗಿದೆ.

ಪ್ರತಿ ದಿನವು ಸೂರ್ಯ ಹುಟ್ಟುತ್ತಾನೆ ಮುಳುಗುತ್ತಾನೆ. ಅದೇ ರೀತಿಯಾಗಿ ವರ್ಷ ಪ್ರತಿಬಜೆಟ್ ಇಡತಕ್ಕಂಥಾದ್ದು ಅದರ ಮೇಲೆ ಚರ್ಚೆ ಭಾಷಣ ಮಾಡುವುದು ಕೇಳುವುದು ನಂತರ ಮಂಜೂರು ಮಾಡಿಕೊಂಡು ಹೋಗುವುದು ನಡೆಯುತ್ತಿದೆ ಆದರೆ ಪರಿಣಾಮಕಾರಿಯಾಗಿರತಕ್ಕಂಥಾದ್ದು ಬಜೆಟ್‌ನಲ್ಲಿ ಏನಾಗಿದೆಯೆಂದು ಯೋಚನೆ ಮಾಡಿದರೆ ೧೯೮೩ ರಿಂದ ಇಲ್ಲಿಯವರೆಗೆ ಏನು ಬಜೆಟ್‌ನಲ್ಲಿ ಹಣ ಮಂಜೂರಾತಿಯಾಗಿದೆ ಅದರಲ್ಲಿ ಆ ವರ್ಷದ ಕೊನೆಯಲ್ಲಿ ಎಷ್ಟು ಖರ್ಚಾಗಿದೆ ಎಷ್ಟು ಖರ್ಚು ಆಗಿಲ್ಲ ಯಾವಾಗ ಖರ್ಚು

ಮಾಡಿದ್ದಾರೆ ಯಾವಾಗ ಖರ್ಚು ಮಾಡಿಲ್ಲ ಎಂಬುದನ್ನು ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ ಏನು ಮಂಜೂರಾತಿಯಾಗಿದೆ ಅದನ್ನು ಖರ್ಚು ಮಾಡುವುದಿಲ್ಲ ಖರ್ಚು ಮಾಡಿದ ಹಾಗೆ ಮಾಡುತ್ತಾ ಬಂದಿದ್ದಾರೆ. ೧೯೮೩ನೇ ಇಸವಿಯಲ್ಲಿ ೬೦೦ ಕೋಟಿ ರೂಪಾಯಿಯ ಕೊರತೆಯನ್ನು ತೋರಿಸಿದರು. ಎರಡನೇ ಬಡ್ಜೆಟ್ ಅನ್ನು ಮಾಡಿದರು. ಆಗ ಅದೆಲ್ಲಾ ಮಾಯವಾಗಿ ೩೦೦ ಕೋಟಿ ರೂಪಾಯಿಗೆ ಬಂದು ಬಿಟ್ಟಿತು. ಈ ತರಹ ಚಕಮಕಿ ಜನತಾ ಪಕ್ಷದವರು ಅಧಿಕಾರಕ್ಕೆ ಬಂದ ಮೇಲೆ ನಡೆಯುತ್ತಾ ಇದೆ. ಇನ್ನು ೧೯೮೬-೮೭ ರಲ್ಲಿ ಏನು ಖರ್ಚು ಮಾಡಿದ್ದಾರೆನ್ನುವುದನ್ನು ನೋಡಿದರೆ ಸುಮಾರು ಆರು ತಿಂಗಳಿಂದ ಬರೀ ಸರಕಾರೀ ನೌಕರರಿಗೆ ಸಂಬಳವನ್ನು ಕೊಡುವುದರಲ್ಲೇ ಕಾಲವನ್ನು ವ್ಯಯ ಮಾಡಿದ್ದಾರೆಯೇ ವಿನಃ ಬೇರೆ ಕೆಲಸಗಳನ್ನು ತೆಗೆದುಕೊಂಡು ಅದನ್ನು ಕಾರ್ಯಗತ ಮಾಡುವುದರಲ್ಲಿ ವಿಫಲರಾಗಿದ್ದಾರೆಂದು ಸ್ಪಷ್ಟವಾಗಿ ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ದಿನಾಂಕ ೩೧-೧೨-೮೬ರವರೆಗೆ ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಹಣ ಕೊಡತಕ್ಕಂಥಾದ್ದು ಬಾಕಿ ಇದೆ ಯೆಂದು ಪ್ರಶ್ನೆ ಕೇಳಿದೆ. ಆಗ ಮಾನ್ಯ ದೇವೇಗೌಡರು ೩೬ ಕೋಟಿ ರೂಪಾಯಿ ಬಾಕಿ ಇದೆ ಎಂದು ಹೇಳಿದರು ಅಂದರೆ ಈ ಮೂರು ತಿಂಗಳಿಗೆ ೭೦ ಕೋಟಿ ಆಗಿರಲೇಬೇಕು ಕೊಟ್ಟಿದ್ದು ಯಾರಿಗೂ ಇಲ್ಲ ಸಮಂಜಾಯಿಷಿ ಮಾಡತಕ್ಕಂಥಾದ್ದು. ಹೊಸದಾಗಿ ಬಿಲ್ ಮಾಡತಕ್ಕಂಥಾದ್ದು ಹಾಗೆ ನಡೆಯುತ್ತಿರುತ್ತದೆ. ನಾನು ಇದೊಂದು ಇಲಾಖೆಯ ಬಗ್ಗೆ ಮಾತ್ರ ಹೇಳುತ್ತಿದ್ದೇನೆ ಆದರೆ ಇವತ್ತು ಎಲ್ಲಾ ಇಲಾಖೆಗಳಲ್ಲೂ ಕೂಡ ಇದು ನಡೆಯುತ್ತದೆ. ಯಾರ್ಯಾರು ಸಪ್ಲೈ ಮಾಡಿದ್ದಾರೆ, ಯಾರ್ಯಾರು ಕಂಟ್ರಾಕ್ಟರ್ಸ್ ಇದ್ದಾರೆ, ಯಾರ್ಯಾರಿಗೆ ಹಣ ಕೊಡಬೇಕಾಗಿತ್ತು ಅವರಲ್ಲಿ ಯಾರಿಗೂ ಕೊಡದೆ ಬರೀ ನೌಕರರಿಗೆ ಸಂಬಳ ಕೊಟ್ಟು ವ್ಯವಹಾರ ಮಾಡುತ್ತಿದ್ದಾರೆ. ಇವರ ಕೈಯ್ಯಲ್ಲಿ ಈ ಸರಕಾರವನ್ನು ಸಮಂಜಸವಾಗಿ, ಅರ್ಥಗರ್ಭಿತವಾಗಿ ಈ ಕರ್ನಾಟಕದ ಜನತೆಗೆ ಉಪಕಾರ ಮಾಡುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಇಲ್ಲವೇ ಎಂಬ ಪ್ರಶ್ನೆಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ ಇವರ ಕೈಯ್ಯಲ್ಲಿ ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ ಎಂದು ದಿನಾಂಕ ೧೨-೧-೮೭ರಲ್ಲಿ ಹಿಂದೂ ಪತ್ರಿಕೆಗೆ ಮಾನ್ಯ ರಾಮಕೃಷ್ಣ ಹೆಗಡೆಯವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಅವರು ನಿಮ್ಮ ಬಡ್ಜೆಟ್ ಹೇಗೆ ಇರುತ್ತದೆ, ಎಷ್ಟು ಟ್ಯಾಕ್ಸ್ ಹಾಕುತ್ತೀರಿ ಎಂದು ಅವರು ಕೇಳಿದ್ದಕ್ಕೆ, I am not a highly taxing Finance Minister ಎಂದು ಉತ್ತರ ಕೊಟ್ಟರು. ಇವತ್ತು ಟ್ಯಾಕ್ಸ್ ಹಾಕಿದ್ದಾರೆ. ಎಷ್ಟೆಂದರೆ ಹೊರಲಿಕ್ಕೆ ಆಗಬಾರದಷ್ಟನ್ನು ಹಾಕಿದ್ದಾರೆ, ಅದೂ ಯಾವುದರ ಮೇಲೆ ಹಾಕಿದ್ದಾರೆಂದರೆ ಯಾರ್ಯಾರು ಯಾವ್ಯಾವ ಬಾಬಿನ ಮೇಲೆ ಕರ ಹಾಕಬಾರದೆಂದಿದ್ದರೋ ಆ ಬಾಬಿನ ಮೇಲೆ ಹಾಕುತ್ತಾ ಹೋಗಿದ್ದಾರೆ. ಇವರು ಮಾನ್ಯ ರಾಜೀವ್ ಗಾಂಧಿ ನೇತೃತ್ವದಲ್ಲಿ ಅಧಿಕಾರದಲ್ಲಿರುವ ಕೇಂದ್ರ ಸರಕಾರಕ್ಕೆ ಬುದ್ಧಿವಾದ ಹೇಳುವುದು. He says their economic policy should be just and prudent. The way in which they are going is not just and prudent ?ಅನ್ನುವುದನ್ನೂ ಕೂಡ ಅದೇ ಪತ್ರಿಕೆಯಲ್ಲಿ ಆಗಲೇ ಹೇಳಿದ್ದಾರೆ. ಈ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಬರ ಬಂತು, ಮಳೆ ಹೋಯಿತು ಇಮ್ ಮೆಟೀರಿಯಲಿಸಮ್, ಇಮ್ ಮೆಟೀರಿಯಲ್ ಆರ್ಗ್ಯುಮೆಂಟಿನಲ್ಲಿ ನನಗೆ ನಂಬಿಕೆ ಇಲ್ಲ. ಅವತ್ತಿನಿಂದ ಈವತ್ತಿನವರೆಗೆ ಬರಗಾಲಕ್ಕೆ ವ್ಯಯ ಮಾಡಲು ಹಣ ಕೊಡಬೇಕೆಂದು ಅರ್ಜಿ ಹಾಕಿದ್ದೂ ಹಾಕಿದ್ದೇ, ಹಣವಿಲ್ಲವೆಂದು ಕೇಂದ್ರಕ್ಕೆ ದೂರು ಹೇಳತಕ್ಕಂಥಾದ್ದು ನಡೆದುಕೊಂಡು ಹೋಗಿದೆ, Now this Government has a bankrupt budgetary provision and they have no money to spend for the welfare of the people. ಅನ್ನುವುದಕ್ಕೆ ಉದಾಹರಣೆ ಹೇಳುತ್ತಿದ್ದೇನೆ. Opening deficit is Rs. 65.40 Crores. ನಂತರ ಟ್ಯಾಕ್ಸ್ ಹಾಕಿದ್ದೀರಿ, ಡೆಫಿಸಿಟ್ 147.54 ಕ್ರೋರ್ಸ್ ಆಯಿತು. Tax is also uncertain. I am just going to calculate this.

೫-೦೦ ಪಿ. ಎಂ.

ಎ. ಜಿ. ಅವರ ವರದಿ ಪ್ರಕಾರ ೩೧-೩-೧೯೮೫ರಲ್ಲಿ ಕರ್ನಾಟಕ ಜನಗಳ ಮೇಲೆ ಡೆಟ್ ಇರುವುದು ೨೪೮೭.೫೮ ಕೋಟಿ ರೂಪಾಯಿಗಳಷ್ಟು ಇದೆ. ಇದಕ್ಕೆ ಇಂಟರೆಸ್ಟ್ ಛಾರ್ಜ್ ಎಷ್ಟು ನಾವು ಸರ್ಕಾರಕ್ಕೆ ಕೊಡತಕ್ಕಂಥದ್ದು ಎಂದರೆ ೨೪೭.೬೪ ಕೋಟಿ ರೂಪಾಯಿಗಳು. ಅದನ್ನು ಕೊಡಲೇಬೇಕು. ಕೊಡದೇ ಹೋದರೆ ಆಗುವುದಿಲ್ಲ. ಇದೆಲ್ಲವನ್ನೂ ಸೇರಿಸಿದರೆ ಒಟ್ಟಿಗೆ ೬೦೬.೫೩ ಕೋಟಿ ಆಯಿತು.

ಅದು ಒಳಗೆ ಹೋಗತಕ್ಕಂಥದ್ದು ಹೇಳುತ್ತಿದ್ದೇನೆ. ಕೊನೆಯದಾಗಿ ನಮ್ಮಲ್ಲಿ ಬಜೆಟ್ ಎಷ್ಟು ಇದೆ. ಸ್ವಾಮಿ ? ೨೭೦೬.೫೫ ಕೋಟಿ ನಿವ್ವಳ ಆದಾಯ ಇದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗೆ ನಾವು ಬಜೆಟ್‌ನಲ್ಲಿ ಹಾಕಿರತಕ್ಕಂಥದ್ದು ೯೫೧.೯೧ ಕೋಟಿ ರೂಪಾಯಿಗಳು. ಇದರಲ್ಲಿ ೬೦೬.೫೩ ಕೋಟಿ ರೂಪಾಯಿಯನ್ನು ಸೇರಿಸಿದರೆ ೧೫೫೭.೪೪ ಕೋಟಿ ರೂಪಾಯಿಗಳು ಆಗುತ್ತದೆ. ಒಟ್ಟು ಆದಾಯದಲ್ಲಿ ೧೧೮೪.೦೨ ಕೋಟಿ ರೂಪಾಯಿಯನ್ನು ನಾವು ಕಳೆದರೆ ಉಳಿದದ್ದು ಅಷ್ಟೇ ಮಾತ್ರ ಸರ್ಕಾರಕ್ಕೆ ಖರ್ಚು ಮಾಡುವುದಕ್ಕೆ ಇರತಕ್ಕಂಥದ್ದು. ಮಂಡಲ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತಿನ ಬಗ್ಗೆ ನಿಮ್ಮ ಅಧಿಕಾರವನ್ನು ನಿಮ್ಮ ಕೈಗೆ ಕೊಡುತ್ತೇವೆ, ಎಂದು ಹೇಳಿದ್ದಾರೆ ಹಾಗಾದಲ್ಲಿ ೯೫೦.೮೧ ಕೋಟಿ ರೂಪಾಯಿಗಳನ್ನು ಅವರಿಗೇ ಕೊಡಬೇಕಾಗುತ್ತದೆ. ನಮ್ಮ ಗೌರ್ನ್‌ಮೆಂಟ್ ಸರ್ವೆಂಟ್ಸ್‌ಗಳಿಗೆ ಸ್ಯಾಲರಿಗೆ ೧೦೦ಕ್ಕೆ ೪೦ ಭಾಗದಷ್ಟು ಹೋಗುತ್ತಿದೆ. ನನ್ನ ಅಂದಾಜು ಪ್ರಕಾರ ೩೦೦ ಕೋಟಿ ರೂಪಾಯಿಗಳು ಹೋಗುತ್ತದೆ. ೩೦೦ ಕೋಟಿ ರೂಪಾಯಿಗಳ ಹಣ ಹೋದರೆ ಸರ್ಕಾರದ ಕೈಯಲ್ಲಿ ಖರ್ಚು ಮಾಡಲಿಕ್ಕೆ ಇರುವುದು ೮೪ ಕೋಟಿ ರೂಪಾಯಿ ಮಾತ್ರ. ಮೇಜರ್ ಅಂಡ್ ಮೈನರ್ ಇರಿಗೇಷನ್ ಬಗ್ಗೆ ಶ್ರೀಮಾನ್ ದೇವೇಗೌಡರು ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆ, ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿದ್ದೇವೆ, ಅದಕ್ಕಾಗಿ ಇಷ್ಟು ಖರ್ಚು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇವತ್ತು ಕೈಯಿಂದ ಜಿಲ್ಲಾಪರಿಷತ್ತಿಗೆ ಬಜೆಟ್‌ನಲ್ಲಿ ಏನೇನು ಹೋಗಿವೆ. ಅವೆಲ್ಲಾ ಹೋಗಿ ಅವರ ಕೈಗೆ ಸಿಗುವುದು ಕಟ್ಟುವ ಕಟ್ಟಡಗಳು, ಜಿಲ್ಲಾ ಪರಿಷತ್ತು ಹೊರತಾಗಿ ಕಟ್ಟುವ ಕಟ್ಟಡಗಳು ಮಾತ್ರ ಅವರ ಕೈಗೆ ಸಿಗುತ್ತದೆ. ಅಪ್ಪರ್ ಕೃಷ್ಣ, ಘಟಪ್ರಭ, ಮಲಪ್ರಭ, ಹಾರಂಗಿ, ಹೇಮಾವತಿ, ಕಬಿನಿ ಇಷ್ಟಕ್ಕೆಲ್ಲಾ ಖರ್ಚು ಮಾಡುವುದಕ್ಕೆ ಹಣ ಅಷ್ಟರಲ್ಲಿಯೇ ಇರಬೇಕು. ೮೪ ಕೋಟಿ ರೂಪಾಯಿ ಮಾತ್ರದಲ್ಲಿ ಅವರು ವ್ಯವಹಾರವನ್ನು ಮಾಡಬೇಕಾಗುತ್ತದೆ. ಪುನಃ ಬೇರೆ ಬಾಬುಗಳಿಗೆ ನೀವು ಏನು ಖರ್ಚು ಮಾಡಬೇಕೆಂದು ಇದ್ದೀರಿ, ಆ ಹಣವನ್ನು ಎಲ್ಲಿ ಇಟ್ಟುಕೊಂಡಿದ್ದೀರಿ ಎಂಬುದು ನನ್ನ ಪ್ರಶ್ನೆ. ಇರಿಗೇಷನ್ ಪೊಟೆನ್ಷಿಯಲ್ ಬಗ್ಗೆ ಹೋದ ಸಾರಿಯೇ ೨೬.೪೬ ಲಕ್ಷ ಎಕರೆಗೆ ನೀರನ್ನು ಒದಗಿಸಲಿಕ್ಕೆ ನಾವು ಅದನ್ನು ಜಾಸ್ತಿ ಮಾಡುತ್ತೇವೆ ಎಂದು ಹೇಳಿದ್ದರು. ಈ ವರ್ಷ ಎಷ್ಟು ಮಾಡಲಿಕ್ಕೆ ಆಯಿತು ? ಆರು ತಿಂಗಳಿಂದ ಕಂಟ್ರಾಕ್ಟರ್‌ಗೆ ದುಡ್ಡು ಕೊಟ್ಟಿಲ್ಲ ಎಂದು ಕಾಣುತ್ತದೆ. ಅಲ್ಲಿ ದುಡ್ಡು ಕೊಟ್ಟಿದ್ದಾರೋ ಬಿಟ್ಟಿದ್ದಾರೋ ನನಗಂತೂ ಗೊತ್ತಿಲ್ಲ, ನಿರ್ದಿಷ್ಟವಾಗಿ ಹೇಳುತ್ತಿದ್ದೇನೆ, ಕಂಟ್ರಾಕ್ಟ್‌ದಾರರಿಗೆ ಕೆಲಸ ಮಾಡತಕ್ಕಂಥ ವರಿಗೆ ಅಲ್ಲಿ ಹಣ ಒದಗಿಸಿಲ್ಲವೋ ಏನೂ ಗೊತ್ತಿಲ್ಲ. ಆದರೆ ಅವರು ಅಲ್ಲಿ ಕೆಲಸ ಮಾಡಿಲ್ಲ. ಎಷ್ಟು ಒದಗಿಸಿದ್ದಾರೆ? ೧.೯೧ ಲಕ್ಷ ಸುಮಾರು ಎರಡು ಲಕ್ಷ ರೂಪಾಯಿ ಎಂದು ಇಟ್ಟುಕೊಳ್ಳೋಣ. ಎರಡು ಲಕ್ಷ ಎಕರೆಗೆ ಮಾತ್ರ ನೀರು ಒದಗಿಸಲಿಕ್ಕೆ ಅವರಿಗೆ ಸಾಧ್ಯವಾಗುತ್ತದೆ. ಅಂದರೆ ಅವರು ಹೇಳಿರ ತಕ್ಕಂಥ ವಾಗ್ದಾನಗಳು ಒಂದು, ಆದರೆ ಮಾಡತಕ್ಕಂಥ ಕೆಲಸವೇ ಇನ್ನೊಂದು. ಇವರು ಕೈಯಲ್ಲಿ ಹೆಚ್ಚು ವಾಗ್ದಾನವನ್ನು ಮಾಡುತ್ತಾರೆ, ಜನತೆಗೆ ನಾವು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೇಳಿ ಇವರು ಮಾಡತಕ್ಕಂಥ ಕೆಲಸವೇ ಬೇರೆ.

ಕಾರಣ ಹಣ ಇಲ್ಲ. ನಿಮಗೆ ಹಣವನ್ನು ಒದಗಿಸಲಿಕ್ಕೂ ಆಗುವುದಿಲ್ಲ ಮತ್ತು ಹಣವನ್ನು ಯಾವ ರೀತಿ ಸಂಪಾದನೆ ಮಾಡಬೇಕು ಅನ್ನುವುದರ ಬಗ್ಗೆಯೂ ನಿಮಗೆ ವಿವೇಚನೆ ಇಲ್ಲ. ಉದಾಹರಣೆ ಹೇಳುತ್ತೇನೆ. ನೀವು ಇದುವರೆಗೆ ಜನಗಳಿಗೆ ಎಷ್ಟು ಕೊಟ್ಟಿದ್ದೀರಿ ? ಒಟ್ಟು ಅವರಿಗೆ ೨೨೨.೫೫ ಕೋಟಿ ರೂಪಾಯಿಗಳನ್ನು ಸಾಲ ಕೊಟ್ಟಿದ್ದೀರಿ. ಅವರಿಂದ ವಸೂಲಾಗಿರುವುದು ೫೬.೬೨ ಕೋಟಿ ರೂಪಾಯಿಗಳು ಮಾತ್ರ ಉಳಿದುದೆಲ್ಲಾ ಹಾಗೆಯೇ ಇದೆ. ಅವರಿಂದ ವಸೂಲ್ಮಾಡುವುದಕ್ಕಾಗುವುದಿಲ್ಲ. ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟಿಗೆ, ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಸ್ವೇಚ್ಛೆಯಾಗಿ ನೇಮಕ ಮಾಡಿ ಕೊಳ್ಳುತ್ತಿದ್ದೀರಿ. ಇದರಲ್ಲಿ ೪೦ ಜನ ಚೀಫ್ ಇಂಜಿನೀಯರ್‌ಗಳನ್ನು ಇಟ್ಟುಕೊಂಡಿದ್ದೀರಿ, ಅವರಿಗೆ ಯಾವ ಕೆಲಸವೂ ಇಲ್ಲ. ಸುಮ್ಮನೆ ಸಂಬಳ ತೆಗೆದುಕೊಂಡು ಸುಖವಾಗಿ ಅವರವರ ಜೀವನವನ್ನು ನಡೆಸಿ ಕೊಂಡು ಹೋಗುತ್ತಿದ್ದಾರೆ. ಕರ್ನಾಟಕದಲ್ಲಿ ಈ ರೀತಿ ಇರುವಾಗ ಯಾರೇ ಆಗಲಿ ಸಮಂಜಸವಾಗಿ ಕೆಲಸ ಮಾಡುವುದಕ್ಕಾಗುತ್ತದೆಯೇ ? ಎಷ್ಟು ಜನ ಸೂಪರಿಂಟೆಂಡೆಂಟ್ ಇಂಜಿನೀಯರ್ ಇದ್ದಾರೆ, ಎಷ್ಟು ಜನ ಎಕ್ಸಿಕ್ಯೂಟೀವ್ ಇಂಜಿನೀಯರ್ ಇದ್ದಾರೆ, ಎಷ್ಟು ಜನ ಅಸಿಸ್ಟೆಂಟ್ ಇಂಜಿನೀಯರ್ ಇದ್ದಾರೆ ಅವರಿಗೆ ಮಾಡುವುದಕ್ಕೆ ಕೆಲಸವೇ ಇಲ್ಲ. ಅವರಿಗೆ ಕೈತುಂಬ ಕೆಲಸ ಕೊಡಬೇಕು, ಅದಕ್ಕೆ ತಕ್ಕಂತೆ ಹಣ ಒದಗಿಸಬೇಕು, ಅವರಿಂದ ಕೆಲಸ ತೆಗೆದುಕೊಳ್ಳಬೇಕು ಹಾಗಾದರೆ ಮಾತ್ರ ರಾಜ್ಯಕ್ಕೆ ಉಪಕಾರವಾದಂತಾಗುತ್ತದೆ. ನೀವು ಆ ಕೆಲಸಕ್ಕೆ ಹಣವನ್ನು ಒದಗಿಸುವುದೇ ಇಲ್ಲ. ಆದುದರಿಂದ

ಅವರನ್ನು ಸಂಬಳ ಕೊಟ್ಟು ಅವರು ತಮ್ಮ ಜೀವನವನ್ನು ಮಾಡಿಕೊಂಡು ಹೋಗುವುದಕ್ಕೆ ಇಟ್ಟಿದ್ದೀರಿ ಅಂತ ಹೇಳಬೇಕಾಗುತ್ತದೆ. ಜನಗಳಿಗೆ ಉಪಕಾರ ಮಾಡುತ್ತೇವೆ, ಹಾಗೇ ಹೀಗೆ ಎಂದು ಮಾತನಾಡುತ್ತೀರಿ. ಆದರೆ ಅವರಿಗೆ ಕೈತುಂಬ ಕೆಲಸ ಕೊಟ್ಟು, ಹಣ ಒದಗಿಸಿಕೊಟ್ಟು ಕೆಲಸ ಮಾಡುವುದಾದರೆ ನಿಮ್ಮ ಮಾತು ಒಪ್ಪೋಣ. ಇನ್ನು ಈ ಅಧಿಕಾರ ವರ್ಗ ಏನು ಇದೆ ಇದು ರಾಕ್ಷಸೀ ವರ್ಗ ಹಾಗೆ ಇದೆ. ರಾಕ್ಷಸನಿಗೆ ಹೊಟ್ಟೆ ತುಂಬ ಆಹಾರ ಕೊಡಬೇಕು ಇಲ್ಲದೇ ಹೋದರೆ ಏನು ಸಿಗುತ್ತದೋ ಅದನ್ನೇ ನುಂಗಿಬಿಡುತ್ತಿದ್ದ. ಹಾಗೆಯೇ ಇವರಿಗೆ ಕೈತುಂಬ ಕೆಲಸ ಕೊಟ್ಟು ಹಣ ಒದಗಿಸಿ ಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳಬೇಕು ಇಲ್ಲದೇ ಹೋದರೆ ನಿಮ್ಮನ್ನೇ ಅವರು ನುಂಗಿಬಿಡುತ್ತಾರೆ. What is the investment in public sector industries ? It is Rs. 446.20 crores What is the return for this investment ? Rs. 48 lakhs return you get. They are not going to recover anything. You have done it. Everything is running under a big loss. I am giving another instance. There are 36 Government companies. The Investment in these companies is Rs. 228.17 crores. What is the return you get ? I am sorry to tell this House that only Rs. 35.91 lakhs is recovered. from these companies out of the investment of Rs. 228.17 crores. Tell me where are we going ? Whatever is invested, we are not worried. Whatever loan is given, we are not worried to recover Government officers from top to bottom keep quiet, because we pay them. All the officers, who are appointed by the Government, who are running these company, are happy. They use the hospitality of the factories, big companies and they do not care as to what happens to the Government. They do not care to run these factories profitably. ಇದು ನಿಮ್ಮ ಅವಸ್ಥೆಯಾಗಿದೆ. ನಾವು ಕೆಲಸವನ್ನು ಚೆನ್ನಾಗಿ ಮಾಡಿದ್ದೇವೆ ಎನ್ನುವುದದಾರೆ ಎದೆ ಬಡಿದುಕೊಂಡು ಹೋಗಬೇಕಾಗುತ್ತದೆ. ನೀವು ಪಬ್ಲಿಕ್ ಕಂಪನೀಸ್‌ಗಳಿಗೆ ೯೦೦.೮೭ ಕೋಟಿ ರೂಪಾಯಿಗಳಿಗೆ ಗ್ಯಾರಂಟಿ ಕೊಟ್ಟಿದ್ದೀರಿ. ಆದರಿಂದ ನಮಗೆ ಕಮೀಷನ್ ೭೨.೮೫ ಕೋಟಿ ರೂ.ಗಳಷ್ಟು ಕಮೀಷನ್ ಬರಲೇ ಬೇಕು. You have given bank gurantee. Commission is Rs. 72.85 lakhs. Suppose you do not get commission. what is the use of your standing guarantee for all the companies ?

ಈ ಸಕ್ಕರೆ ಕಾರ್ಖಾನೆಗಳಿಗೆ, ಕೋ-ಆಪರೇಟಿವ್ ಟೆಕ್ಸ್‌ಟೈಲ್ ಮಿಲ್‌ಗಳಿಗೆ ಹಾಗೂ ಇನ್ನಿತರ ಕಂಪನಿಗಳಿಗೆ ಸರ್ಕಾರ ಗ್ಯಾರಂಟಿ ಕೊಟ್ಟಿದ್ದೂ ಕೊಟ್ಟಿದ್ದೆ. ಸುಮಾರು ೯೦೭.೯೮ ಕೋಟಿ ರೂ.ಗಳಷ್ಟು ಹಣಕ್ಕೆ ಸರ್ಕಾರ ಗ್ಯಾರಂಟಿ ಕೊಟ್ಟಿದೆ. ಈ ಹಣದಲ್ಲಿ ಯಾರೂ ಸಹ ಮೂರು ಕಾಸು ಸರ್ಕಾರಕ್ಕೆ ಕೊಡುವುದಿಲ್ಲ. ಈ ಗ್ಯಾರಂಟಿ ಹಣಕ್ಕೆ ಸರ್ಕಾರಕ್ಕೆ ೭೨.೮೫ ಕೋಟಿಯಷ್ಟು ಕಮೀಷನ್ ಬರಬೇಕಾಗಿತ್ತು ಆದರೆ ಅದಕ್ಕೆ ಬದಲು ಸರ್ಕಾರವೇ ೪೮ ಕೋಟಿ ರೂಪಾಯಿಗಳಷ್ಟು ಹಣವನ್ನು ಸಾಲ ಕೊಟ್ಟಿರುವ ಬ್ಯಾಂಕ್‌ಗಳವರಿಗೆ ಕಮೀಷನ್ ರೂಪದಲ್ಲಿ ಕೊಡುತ್ತಿದೆ. ಇದೇ ಪದ್ಧತಿಯನ್ನು ನೀವು ಮುಂದುವರಿಸಿ ಕೊಂಡು ಹೋದರೆ ನೀವು ಯಾವ ರೀತಿ ಸರ್ಕಾರ ನಡೆಸುತ್ತೀರಿ ? ಈ ಸಲ ಕೊರತೆ ಬಜೆಟ್‌ನ್ನು ಮಂಡನೆ ಮಾಡಿದ್ದೀರಿ. ಈ ಕೊರತೆಯನ್ನು ಸಮತೋಲನ ಮಾಡಬೇಕಾದರೆ ನೀವು ಹೊಸ ತೆರಿಗೆಗಳನ್ನು ಹಾಕಲೇಬೇಕಾಗುತ್ತದೆ. ಈ ತೆರಿಗೆಗಳ ಮೂಲಕ ಬರುವ ಹಣ ಸಾಲದಿದ್ದರೆ ಸಾರ್ವಜನಿಕರಿಂದ ಸಾಲವನ್ನು ಎತ್ತಬೇಕಾಗುತ್ತದೆ. ಹೋದ ವರ್ಷ ಸಹ ನೀವು ಹೊಸ ಕರಗಳನ್ನು ಹಾಕಿದ್ದಿರಿ. ಎಷ್ಟು ಹಣವನ್ನು ನೀವು ವಸೂಲಿ ಮಾಡಿದಿರಿ ? ನಿಮಗೆ ವರಮಾನ ಏನಿದ್ದರೂ ಎಕ್ಸೈಜ್ ಬಾಬಿನಿಂದಲೇ ಬರಬೇಕು. ಸೇಲ್ಸ್‌ಟ್ಯಾಕ್ಸ್‌ನಿಂದ ಮತ್ತು ಕಮರ್ಷಿಯಲ್ ಟ್ಯಾಕ್ಸ್‌ನಿಂದ ನಿಮಗೆ ಸಾಕಷ್ಟು ವರಮಾನ ಬರುವುದಿಲ್ಲ. ಏಕೆಂದರೆ ಈ ತೆರಿಗೆ ಕೊಡುವವರು ಮಧ್ಯವರ್ತಿಗಳನ್ನು ಸರಿ ಮಾಡಿಕೊಂಡಿರುತ್ತಾರೆ. ಆದ್ದರಿಂದ ನೀವು ಲೆಕ್ಕ ಹಾಕಿದಷ್ಟು ಬರುವುದಿಲ್ಲ. ನಿಮ್ಮ ಲೆಕ್ಕದಲ್ಲಿ ಅರ್ಧದಷ್ಟು ಸಹ ಬರುವುದಿಲ್ಲ. ನಿಮಗೆ ಆದಾಯ ಏನಿದ್ದರೂ ಎಕ್ಸೈಜ್‌ನಿಂದಲೇ ಬರಬೇಕು. ಇವೊತ್ತಿನ ದಿವಸ ಹೆಂಡ ಬ್ರಾಂದಿ, ಸಾರಾಯಿ ಹಾಗೂ ವಿಸ್ಕಿಯನ್ನು ಜನರಿಗೆ ಕುಡಿಸುವುದು ಸಾರೋದ್ಧಾರವಾಗಿ ನಡೆದಿದೆ,

ಇವೊತ್ತು ಪ್ರತಿ ಹಳ್ಳಿಯಲ್ಲಿಯೂ ಮೂರು ನಾಲ್ಕು ಸಾರಾಯಿ ಮತ್ತು ಬ್ರಾಂದಿ ಅಂಗಡಿಗಳು ಇವೆ. ಕುಡಿಸಿ ಕುಡಿಸಿ ನಮ್ಮ ಜನರನ್ನು ನೀವು ಹಾಳು ಮಾಡುತ್ತಿದ್ದೀರಿ. ಜನರ ಸೇವೆ ಮಾಡುತ್ತೇವೆ. ಜನರಿಗೇ ಅಧಿಕಾರ ಕೊಡುತ್ತೇವೆ ಎಂದು ಹೇಳಿ ಎಲ್ಲರಿಗೂ ಬ್ರಾಂದಿಯನ್ನು ಕುಡಿಸುತ್ತಿದ್ದೀರಿ. ಇದನ್ನು ಕುಡಿದವರಿಗೆ ಪ್ರಜ್ಞೆ ಇರುವುದಿಲ್ಲ. ನಮ್ಮ ಜನರು ಕುಡಿದು ಪ್ರಜ್ಞಾಹೀನರಾಗುತ್ತಿದ್ದಾರೆ. ಒಂದು ಕಡೆ ನಮ್ಮ ಹೆಣ್ಣು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಬೇಕು, ಅವರಿಗೆ ತೊಂದರೆ ಕೊಡಬಾರದೆಂದು ಹೇಳುತ್ತೀರಿ, ಮತ್ತೊಂದು ಕಡೆ ಕೋ–ಆಪರೇಟಿವ್ ಸೊಸೈಟಿಗಳ ಮೂಲಕವೂ ಸಹ ಜನರಿಗೆ ಕುಡಿಸಲು ಹೊರಟಿದ್ದೀರಿ. ಈ ಪದ್ಧತಿ ಜಾರಿಗೆ ಬಂದರೆ, ಅಲ್ಲಿ ಕೆಲಸ ಮಾಡುವವರೂ ಸಹ ಕುಡಿದು ಅಲ್ಲಿಯೇ ಮಲಗುತ್ತಾರೆ. ಈ ವ್ಯವಸ್ಥೆಗೆ ಯಾರು ಸಲಹೆ ಮಾಡಿದರು? ಇದರಿಂದ ದೇಶದ ಉದ್ಧಾರ ಆಗುತ್ತದೆಯೇ ? ಈ ವ್ಯವಸ್ಥೆ ಸರಿಯಲ್ಲ ಎಂದು ಮಂತ್ರಿ ಮಂಡಲದಲ್ಲಿರುವಂತಹ ಸದಸ್ಯರು ಮುಖ್ಯ ಮಂತ್ರಿಗಳಿಗೆ ಬುದ್ಧಿ ಹೇಳುವುದಕ್ಕಾಗುವುದಿಲ್ಲವೇ ? ನಮ್ಮ ಸಹಕಾರಿ ಕ್ಷೇತ್ರ ಇನ್ನೂ ಚೆನ್ನಾಗಿ ಬೆಳೆಯಬೇಕು. ಆದರೆ ಸಹಕಾರಿ ಸಂಘಗಳ ಮೂಲಕ ಮದ್ಯದ ಮಾರಾಟ ಮಾಡುವುದನ್ನು ಈ ಹಿಂದೆ ಯಾರೂ ಸಹ ಯೋಚನೆ ಮಾಡಿರಲಿಲ್ಲ. ಆದರೆ ನಿಮಗೆ ಈ ಕೆಟ್ಟ ಬುದ್ಧಿ ಏತಕ್ಕೆ ಬಂತು ? ಈ ಈ ಸಹಕಾರಿ ಸಂಘಗಳಿಂದ ಸುಮಾರು ೪೫೦ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬಾಕಿ ಬರಬೇಕು ಎಂದು ಮಾನ್ಯ ಜಾಲಪ್ಪನವರು ಹೇಳುತ್ತಿದ್ದಾರೆ. ಇಷ್ಟು ಹಣ ವಾಪಸ್ ಬರುತ್ತದೆಂಬ ಗ್ಯಾರಂಟಿ ಇಲ್ಲದಿರುವಾಗ ಮತ್ತೆ ಸಹಕಾರ ಸಂಘಗಳ ಮೂಲಕ ಮದ್ಯದ ಮಾರಾಟ ಮಾಡಲು ಅವಕಾಶ ಕೊಟ್ಟರೆ ಅಲ್ಲಿರುವವರೂ ಕುಡಿಯುತ್ತಾರೆ, ಜೊತೆಗೆ ನೀವು ಸಹ ಹೋಗಿ ಕುಡಿದು ಮಜಾ ಮಾಡಿ. ಈ ಹುಚ್ಚುತನ ನಿಮಗೆ ಏತಕ್ಕೆ ಬಂತು ಎಂದು ನನಗೆ ಅರ್ಥವಾಗುವುದಿಲ್ಲ. ಜನರಿಗೆ ಕುಡಿಸಿ ಅವರಿಗೆ ಪ್ರಜ್ಞೆ ಇಲ್ಲದಂತೆ ಮಾಡಿ ನೀವು ರಾಜ್ಯಭಾರ ಮಾಡುವುದು ಸರಿಯಲ್ಲ. ಆದ್ದರಿಂದ ದಯಮಾಡಿ ಇದನ್ನು ಪುನರಾಲೋಚನೆ ಮಾಡಿ ಈ ವ್ಯವಸ್ಥೆಯನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಮುಂದೆ ಬಹಳ ಅನ್ಯಾಯವಾಗುತ್ತದೆ.

ಇನ್ನು ಕೊರತೆ ಬಡ್ಜೆಟ್ ಬಗ್ಗೆ ನನ್ನ ಸ್ನೇಹಿತರು ಬಹಳ ಚೆನ್ನಾಗಿ ಹೇಳಿದ್ದಾರೆ. ಆದ್ದರಿಂದ ನಾನು ಜಾಸ್ತಿ ಹೇಳುವುದಿಲ್ಲ. ಈ ನಮ್ಮ ಕರ್ನಾಟಕ ರಾಜ್ಯಕ್ಕೆ ಕೊರತೆ ಆಯವ್ಯಯ ಪತ್ರ ಬೇಕಾಗಿರಲಿಲ್ಲ. ಇದು ಅನಾವಶ್ಯಕ. ನೀವೂ ಕೊಟ್ಟ ಸಾಲವನ್ನು ಸರಿಯಾಗಿ ವಸೂಲಿ ಮಾಡಿದ್ದರೆ ಈ ಕೊರತೆ ಎಲ್ಲಿ ಬರುತ್ತದೆ ?

ಶ್ರೀ ಆರ್. ವೆಂಕಟರಾಮಯ್ಯ. — ಕೇಂದ್ರದಲ್ಲಿ ಎಷ್ಟಿದೆ ಎಂದು ಹೇಳಲಿ.

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ಹುಚ್ಚು ಹತ್ತಿದೆಯೇ ? ನೀವು ಕಲ್ಕತ್ತಾಗೆ ಹೋಗಿ.

ಅಧ್ಯಕ್ಷರು.— ಕಲ್ಕತ್ತಾ ವಿಚಾರ ಬಿಡಿ.

ಶ್ರೀ ಬಿ. ಬಸವಲಿಂಗಪ್ಪ.— ಸರಿಯಾಗಿ ಕುಣಿಯುವುದಕ್ಕೆ ಆಗುವುದಿಲ್ಲ, ಅದಕ್ಕೆ ನೆಲ ಸರಿಯಿಲ್ಲ ಎಂದು ಹೇಳುವುದು, ಸರಿಯಾಗಿ ಕುಣಿಯುವುದನ್ನು ಕಲಿತುಕೊಳ್ಳಿ. ಬೇರೆಯವರು ಸರಿಯಾಗಿ ಕುಣಿಯುವುದಿಲ್ಲ ಎನ್ನುವುದು ನಿಮಗೆ ಏಕೆ ? ಮಾನ್ಯ ಅಧ್ಯಕ್ಷರೆ, ನಾವು ಪ್ರಜ್ಞಾವಂತರಾದರೆ ಹೆಚ್ಚುವರಿ ಆಯವ್ಯಯ ಪತ್ರವನ್ನು ಮಂಡಿಸಲಿಕ್ಕೆ ಅವಕಾಶವಿದೆ, ಕೊರತೆ ಆಯವ್ಯಯ ಪತ್ರವನ್ನು ಮಂಡಿಸತಕ್ಕಂಥ ಪ್ರಮೇಯ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾ ಇದ್ದೇನೆ. ಸ್ವಾಮಿ, ಇನ್ನೊಂದು ವಿಚಾರ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ. ಅವರು ಚೆನ್ನಾಗಿ ಇರಬೇಕು, ಚೆನ್ನಾಗಿ ಹೇಗಿರಬೇಕು ಅಂದರೆ ಮಾದರಿಯಾಗಿರಬೇಕು. ಮಾದರಿ ಹೇಗಿರಬೇಕು, ಎಲ್ಲರಿಗೂ ಹೆಂಡ ಕುಡಿಸಿಬಿಟ್ಟು ಕುಡಿಯುತ್ತಾರೋ ಇಲ್ಲವೋ ಎಂದು ನೋಡುವುದಲ್ಲ. ಅಮೇರಿಕಾ ದೇಶದಲ್ಲಿ ಒಂದು ವಾಡಿಕೆ ಇದೆ. ಪ್ರೆಸಿಡೆಂಟ್ ಆಗಿರತಕ್ಕವರು ದಾರಿ ಬಿಟ್ಟು ಹೋದರೆ, ಅಥವಾ ನಡತೆ ಸರಿಯಿಲ್ಲದೇ ಹೋದರೆ ಒಂದು ನಿಮಿಷ ಕೂಡ ಇರುವುದಿಲ್ಲ. ಆದ್ದರಿಂದ ಮಂತ್ರಿಯಾಗಿರತಕ್ಕವರು, ಮುಖ್ಯಮಂತ್ರಿಯಾಗಿರತಕ್ಕವರು ತಮ್ಮ ದಾರಿಯನ್ನು ಸರಿಯಾಗಿ ಇಟ್ಟುಕೊಂಡು ಜನಗಳಿಗೆ ಸರಿಯಾಗಿರತಕ್ಕ ನಾಯಕತ್ವ ಕೊಡಬೇಕು. ಕೊಡದೇ ಹೋದರೆ ಜನಗಳೇ ನಾಯಕರ ಹಾಗೆ ನಡೆಯುತ್ತಾರೆ. ಕುಡಿಸತಕ್ಕ ಪ್ರಸಂಗ ಇದ್ದರೆ ಜನಗಳು ಯಾವರೀತಿ ಇರುತ್ತಾರೆ ? ಆದ್ದರಿಂದ ನಾಯಕತ್ವ ಈ ರೀತಿ ಇರಬಾರದು, ಇದು ಸರಿಯಿಲ್ಲ. ಸ್ವಾಮಿ, ಈಗ ಕರ್ನಾಟಕ ರಾಜ್ಯದಲ್ಲಿ ಸ್ಟ್ರೈಕ್‌ಗಳು ಆಗುತ್ತಿವೆ. ಸ್ಟ್ರೈಕನ್ನು ಮಾಡುವುದಕ್ಕೆ ಯಾರಿಗೆ ಹಕ್ಕಿಲ್ಲ ಅಂತಹವರು ಸ್ಟ್ರೈಕ್ ಮಾಡುತ್ತಿದ್ದಾರೆ. ಸರ್ಕಾರಿ ನೌಕರರದು ಸ್ಟ್ರೈಕ್, ಮತ್ತೆ ಫ್ಯಾಕ್ಟರಿಗಳಲ್ಲಿರತಕ್ಕವರದು ಸ್ಟ್ರೈಕ್ ನೌಕರ ವರ್ಗದಲ್ಲಿ ೭೯ ಸಂಘಗಳಿಗೆ ಪರವಾನಗಿ ಕೊಟ್ಟಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದರು. Article–19 permits all people to form associations. Sir, with great

respect I submit to this House that the Government servants have no right to form associations because, they have surrendered their complete freedom at the time of joining the service. They have a restricted freedom. They cannot form association for each cadre, ಸ್ಟ್ರೈಕ್‌ಗಳನ್ನು ಕಟ್ಟಿಕೊಂಡು ಸರ್ಕಾರ ನಡೆಸುವುದಕ್ಕೆ ಆಗುತ್ತದೆಯೇ ? ಇವರಿಗೆಲ್ಲಾ ಅಸೋಸಿಯೇಷನ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರ ಕೊಟ್ಟು ನೀವು ಸರ್ಕಾರ ನಡೆಸಲಿಕ್ಕೆ ಆಗುತ್ತದೆಯೇ ? ಸರ್ಕಾರ ನಡೆಸಲಿಕ್ಕೆ ಆಗುವುದಿಲ್ಲ. ದೊಡ್ಡ ದೊಡ್ಡ ಅಧಿಕಾರಿಗಳು ಇರುತ್ತಾರೆ. ಕೆಳದರ್ಜೆಯಲ್ಲಿ ಕೆಲಸ ಮಾಡತಕ್ಕವರು ಸಂಘ ಮಾಡಿಕೊಂಡಿರುತ್ತಾರೆ. ಆದಕ್ಕೆ ಅವರು ಪ್ರೆಸಿಡೆಂಟ್, ಕಾರ್ಯದರ್ಶಿ ಆಗಿರುತ್ತಾರೆ. ಹೀಗಾಗಿ ಅವರು ಮಂತ್ರಿಮಂಡಲದ ಲೆವೆಲ್‌ನಲ್ಲಿ, ಹೋಗಿ ಕಂಡು ಅವರ ಕಷ್ಟಸುಖಗಳನ್ನು ನಿವಾರಣೆ ಮಾಡತಕ್ಕ ಅವಕಾಶ ನೀವು ಕೊಟ್ಟರೆ ನಿಮ್ಮ ಮಾತೂ ಕೇಳುವುದಿಲ್ಲ, ಅಧಿಕಾರಿಗಳ ಮಾತೂ ಕೇಳುವುದಿಲ್ಲ, ನೀವು ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ ಅವನ್ನು ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ನೀವು ಇದಕ್ಕೆ ದಯಮಾಡಿ ಅವಕಾಶ ಕೊಡಬೇಡಿ. ಆಮೇಲೆ ಒಂದು ವಿಚಾರವನ್ನು ಹೇಳುತ್ತೇನೆ. ಮೈಸೂರು ಸಿವಿಲ್ ಸರ್ವೀಸ್ ಪ್ರಿವೆನ್ಷನ್ ಆಫ್ ಸ್ಟ್ರೈಕ್ ಆಕ್ಟ್ ೧೯೬೬ ಇಲ್ಲಿದೆ. ಈ ಆಕ್ಟ್ ಪ್ರಕಾರ ಯಾವುದೇ ಸರ್ಕಾರಿ ನೌಕರನು ಸ್ಟ್ರೈಕ್ ಮಾಡುವಹಾಗಿಲ್ಲ. Section–4 says:

> "Any State civil servants who commences, continues or otherwise acts in furtherance of a strike shall be punished with imprisonment for a term which may extend to six months or with fine which may extend to five hundred rupees or with both."

This refers to strikes. This also refers to associations formed by these Government servants. Further Section–8 reads as follows:

> "Where an offence under this Act has been committed by an association, every person who at the time the offence was committed was in charge of, and was responsible to, the association for the conduct of the business of the association, as well as the association, shall be deemed to be guilty of the offence and shall be liable to be proceeded against and punished accordingly."

These sections are specific. This Act is not quashed. It is still in vogue, it is in effect. Are you going to implement this Act or are you going to encourage formation of these associations for all problems of the government employees ? I advise you, as a person in Government for many years, please don't allow any government servant to form any association. ಫ್ಯಾಕ್ಟರಿಗಳಲ್ಲಿ ಕೂಡ ಇದೇ ರೀತಿ ಮಾಡುತ್ತಿದ್ದರು. ೧೯೭೬ನೇ ಇಸವಿಯಲ್ಲಿ ಎಮರ್ಜೆನ್ಸಿ ಬಂದಾಗ ಉತ್ಪಾದನೆ ಜಾಸ್ತಿಯಾಯಿತು. ನಂತರ ಎಮರ್ಜೆನ್ಸಿ ಹೋದಮೇಲೆ ಉತ್ಪಾದನೆ ಕಡಿಮೆಯಾಯಿತು. ಮತ್ತೊಮ್ಮೆ ಎಮರ್ಜೆನ್ಸಿಯನ್ನು ತಂದು ಈ ದೇಶದ ಸಂಪತ್ತನ್ನು ಸರಿಯಾಗಿ ಅಭಿವೃದ್ಧಿ ಮಾಡದೇ ಹೋದರೆ, ಜನರುಗಳನ್ನು ಭಿಕ್ಷುಕರನ್ನಾಗಿ ಮಾಡಿದಂತಾಗುತ್ತದೆ. ಸೀರೆ ಕೊಡುತ್ತೇವೆ, ತಾಳಿ ಕೊಡುತ್ತೇವೆಂದು ಹೇಳುವುದು ಬೇಡ. ಯಾವ ಗಂಡಸು ತಾಳಿ ಕೊಡಿ ಎಂದು ಕೇಳುತ್ತಾನೆ ? ಉತ್ಪಾದನೆಯ ದಿಕ್ಕಿನಲ್ಲಿ ಗಂಡು ಮತ್ತು ಹೆಣ್ಣುಮಕ್ಕಳು ದುಡಿಯುವಂಥ ಒಂದು ಶಕ್ತಿಯನ್ನು ಮತ್ತು ಆ ಒಂದು ಅನುಕೂಲವನ್ನು ಒದಗಿಸಿಕೊಟ್ಟರೆ, ಈ ಸರ್ಕಾರ ಇದ್ದುದಕ್ಕೂ ಸಾರ್ಥಕವಾಗುತ್ತದೆ. ಅದನ್ನು ಬಿಟ್ಟು ಬರೀ ಭಾಷಣಗಳನ್ನು ಮಾಡುವುದರಿಂದ ವಾಗ್ದಾನಗಳನ್ನು ಕೊಡುವುದರಿಂದ ಉಪಯೋಗ ಏನೂ ಇಲ್ಲ. ೧೯೮೩ ರಲ್ಲಿ ತಾವು ಕೊಟ್ಟಂಥವಾಗ್ದಾನ

ಗಳ ಪಟ್ಟಿಯನ್ನು ಸದನದಲ್ಲಿಟ್ಟಿದ್ದೆ. ಬರೀ ಪ್ರಾರಂಭದ ಶೂರತ್ವ. ೧೯೮೬ರ ಬಜೆಟ್ ಭಾಷಣದಲ್ಲಿ ವಾಗ್ದಾನಗಳ ಸುರಿಮಳೆ. ೧೯೮೫ರ ಭಾಷಣದಲ್ಲೂ ಅದೇ. ಅಲ್ಲಿಂದ ಇಲ್ಲಿಯವರೆವಿಗೂ ಎಲ್ಲಾ ಮಾಡಿದ್ದೇವೆಂದು ಹೇಳಿದ್ದೀರಿ. ನಿಮ್ಮ ಸರ್ಕಾರ ಹಣದ ವ್ಯವಸ್ಥೆ ವಿಚಾರದಲ್ಲಿ ಸರಿಯಾದ ಪ್ರಜ್ಞಾವಂತಿಕೆಯನ್ನು ಬೆಳೆಸಿಕೊಳ್ಳದೇ ಹೋದರೆ ದಿವಾಳಿಯಾಗುತ್ತದೆ. ದಯಮಾಡಿ, ರಿಸೋರ್ಸಸ್ ಮೊಬಿಲೈಜೇಷನ್ ಏನು ಮಾಡಿದ್ದೀರಿ ಎಂಬುದನ್ನು ಹೇಳಿ. ರಿಸೋರ್ಸಸ್ ಮೊಬಲೈಜೇಷನ್ ಎಲ್ಲಿದೆ ? ಸಾಲ ಕೊಟ್ಟಿರುವುದನ್ನು ವಸೂಲು ಮಾಡಬೇಕು, ಗ್ಯಾರಂಟಿ ಕೊಟ್ಟಿರುವುದನ್ನು ವಸೂಲು ಮಾಡಬೇಕು, ಕಂಪನಿಗಳಿಗೆ ಕೊಟ್ಟಿರುವುದನ್ನು ವಸೂಲು ಮಾಡಬೇಕು, ಕಾರ್ಪೋರೇಷನ್‌ಗಳು, ಬೋರ್ಡುಗಳಿಗೆ ಹಣ ಕೊಟ್ಟಿರುವುದನ್ನು ವಸೂಲು ಮಾಡಬೇಕು. ನೀವು ನೇರವಾಗಿ ವಸೂಲು ಮಾಡಿದರೆ ರಿಸೋರ್ಸಸ್ ಮೊಬಿಲೈಜೇಷನ್ ಆಗುತ್ತದೆ. This is called resource mobilisation. But who cares for this ? Mr. Speaker Sir, this Government machinery which is at the top of this Government, is callous. They don't care for their duties and responsibilities. You should not defend them.

Has the Government kept any IAS officer under suspension. Or, any IAS Officer who has committed dereliction of duty is dismissed from service ? ಅವರ ತಲೆ ಮೇಲೆ ಜವಾಬ್ದಾರಿ ಹಾಕಿ. ಅವರು ಚೀಫ್ ಸೆಕ್ರೆಟರಿಯಾಗಿದ್ದು ತನ್ನ ಕರ್ತವ್ಯ ನಿರ್ವಹಣೆ ಮಾಡದೇಹೋದರೆ ಅಂಥವರನ್ನು ಏತಕ್ಕೆ ಇಟ್ಟುಕೊಳ್ಳುತ್ತೀರಿ? ೮೦೦೦ ರೂಪಾಯಿ ಸಂಬಳ ಕೊಡುತ್ತೇವೆ, ಅದಕ್ಕೆ ಅನುಗುಣವಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸದೆ ಹೋದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಿ. ಇವತ್ತು ಸಾಮಾನ್ಯ ಮನುಷ್ಯ ಎಂದು ಯಾರನ್ನು ಕರೆಯುತ್ತೇನೆ ಅಂದರೆ ಹಿಂದಿಯಲ್ಲಿ ''ಹಂಲೋಗ್'' ಎಂದು ಯಾರಿಗೆ ಹೇಳುತ್ತೇವೆ, ಆ ಸಾಮಾನ್ಯ ಜನರ ತಿಂಗಳ ಉತ್ಪತ್ತಿ ೩೦ ರೂಪಾಯಿ ಇಲ್ಲ, ೫೦ರೂಪಾಯಿ ಇಲ್ಲ ಬಿಕ್ಷುಕರಾಗಿದ್ದಾರೆ. ಅರೆ ಹೊಟ್ಟೆಗೂ ಇಲ್ಲದ ಪರಿಸ್ಥಿತಿಯಲ್ಲಿದ್ದಾರೆ. ಒಂದೆರಡು ಮಕ್ಕಳಾದರೆ, ಹೆಣ್ಣು ಮಕ್ಕಳನ್ನು ನೋಡುವುದಕ್ಕಾಗುವುದಿಲ್ಲ, ಬರೀ ತೊಗಲು ಇರುತ್ತದೆ. ಅದೇ ರೀತಿ ಗಂಡು ಮಕ್ಕಳನ್ನು ನೋಡುವುದಕ್ಕಾಗುವುದಿಲ್ಲ, ಬರೀ ತೊಗಲು ತುಂಬಿಕೊಂಡಿರುತ್ತದೆ. ಆದರೆ ಇಲ್ಲಿ ಇರತಕ್ಕ ಜನರ ಚರ್ಬಿ ಎಷ್ಟು, ಜಂಜ ಎಷ್ಟು ಅವುಗಳನ್ನು ಹೇಳತೀರದು ಇವರು ತಮ್ಮ ಸಂಬಳಕ್ಕೆ ಸರಿಯಾಗಿ ಕೆಲಸ ಮಾಡಬೇಕು. ಎಫಿಷಿಯನ್ಸಿ ಮತ್ತು ಮೆರಿಟ್ ಎಂದು ಹೇಳುತ್ತೀರಿ.

ಸರ್ಕಾರಿ ಅಧಿಕಾರಿಗಳನ್ನು ಇಟ್ಟಿರುವುದು ಏತಕ್ಕೆ ? ಬಡವರನ್ನು ಉದ್ಧಾರ ಮಾಡಲಿಕ್ಕೆ ಅಲ್ಲವೇನು ? ಎಫಿಷಿಯೆನ್ಸಿ ಏತಕ್ಕೆ ಬೇಕು ಮೆರಿಟ್ ಏತಕ್ಕೆ ಬೇಕು ಎಂಬುದನ್ನು ಯೋಚನೆ ಮಾಡಬೇಕು ಅನಕ್ಕೆ ಅರ್ಥವನ್ನು ಕೊಡಬೇಕಾಗುತ್ತದೆ. ಅರ್ಥ ಏನು ಅಂದರೆ, ಯಾವ ಒಬ್ಬ ಅಧಿಕಾರಿ, ಬಡವರ ಜೀವನ ಮಟ್ಟವನ್ನು ಮೇಲಕ್ಕೆ ಎತ್ತಲಿಕ್ಕೆ ಪ್ರಯತ್ನ ಮಾಡುತ್ತಾನೆ. ಸರ್ಕಾರದ ಕಾರ್ಯಕ್ರಮವನ್ನು ಅವರ ಮನೆಯ ಬಾಗಿಲಿಗೆ ತೆಗೆದುಕೊಂಡು ಹೋಗಿ ಕೊಡುತ್ತಾನೆ, ಅದಕ್ಕೆ ಎಫಿಷಿಯೆನ್ಸಿ, ಮೆರಿಟ್ ಎಂದು ಹೇಳಿ. ಅದನ್ನು ಬಿಟ್ಟು ಇಂಗ್ಲೀಷ್‌ನಲ್ಲಿ ಹತ್ತು ಪುಟವನ್ನು ಬರೆದರೆ, ಕನ್ನಡದಲ್ಲಿ ಹತ್ತು ಪುಟಗಳನ್ನು ಬರೆದರೆ ಅದು ಎಫಿಷಿಯೆನ್ಸಿ ಆಗುತ್ತದೆಯೋ ? ಇಂತಹವರನ್ನು ಮನೆಗೆ ಕಳುಹಿಸಿ. Never look at their files. I used to look at their actions on the programmes of the government. Therefore, I appeal to you, don't look to the files. Look to the steps and work done by these people. Judge them. If they are efficient, okay. If they are not efficient, don't de enomoured by the notes prepared by them. This is my advice because, I have a right to advice. I was in office for many years. I have done this job many times. ನಮ್ಮ ಜನ ನಿಮ್ಮನ್ನು ಬಯ್ಯುತ್ತಿದ್ದಾರೆ. ನಾವು ಪ್ರಜೆಗಳನ್ನು ಅಧಿಕಾರಿಗಳನ್ನು ಬಯ್ಯಲಿಕ್ಕೆ ಹೋಗಿಯೇ ಇಲ್ಲ. ಈ ಮಂತ್ರಿಮಂಡಲವನ್ನು ಬಯ್ಯುತ್ತಿದ್ದೇವೆ. ಮುಖ್ಯ ಮಂತ್ರಿಗಳನು ಬಯ್ಯುತ್ತಿದ್ದೇವೆಯೇ ಹೊರತು ಅಧಿಕಾರಿಗಳನ್ನು ಬಯ್ಯಲಿಕ್ಕೆ ಹೋಗಿಯೇ ಇಲ್ಲ. ಯಾವ ಅಧಿಕಾರಿ ಜನತೆಗೆ ಮೋಸ ಮಾಡಿ, ಲಂಚ ತೆಗೆದುಕೊಂಡು ನೆಲ ಬೆಳೆಸಿಕೊಂಡಿರುತ್ತಾನೋ, ಅಂತಹವನ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು.

ಈ ವಿಚಾರದಲ್ಲಿ ನಮ್ಮ ಜನರು ದಂಗೆ ಏಳಲು ತಯಾರು ಮಾಡಿದರೆ ಆಗ ಅದು ಸಾರ್ಥಕ ವಾಗುತ್ತದೆಯೋ ಹೊರತು, ಇಲ್ಲದೇ ಹೋದರೆ ಅದು ಸಾರ್ಥಕವಾಗುವುದಿಲ್ಲ. ಈ ವಿಚಾರವನ್ನು ನಾನು ಬಹಳ ನೋವಿನಿಂದ, ಬಹಳ ಸಂಕಟದಿಂದ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ, ಈ ಅಧಿಕಾರಿಗಳ ಮನೋವೃತ್ತಿಯೇ ಬೇರೆ. ಇವರು ಸರ್ಕಾರದಿಂದ ಎಷ್ಟು ಹಣ ಹೊಡೆಯಬೇಕು ಎನ್ನುವ ಬಗ್ಗೆ ಮಧ್ಯಸ್ಥಗಾರರನ್ನು ಪಕ್ಕದಲ್ಲಿ ಇಟ್ಟುಕೊಂಡು ಸುಳ್ಳು ಬಿಲ್ಲುಗಳನ್ನು ಮಾಡಿಕೊಂಡು ಹಣ ಮಾಡುತ್ತಿದ್ದಾರೆ. ಇದರ ಮೇಲೆ ಗಮನ ಇಡಬೇಕೆಂದು ಹೇಳುತ್ತೇನೆ. ಇನ್ನು ಕನ್ನಡದ ಬಗ್ಗೆ ಒಂದು ಪ್ರಶ್ನೆ ಇದೆ. ಕನ್ನಡದ ಬಗ್ಗೆ ನನಗೆ ಒಳ್ಳೆಯ ಭಾವನೆ ಇದೆ. ಕರ್ನಾಟಕ ರಾಜ್ಯ ಏಕೀಕರಣ ಮಾಡುವಾಗ ನಾನು ಕಾರ್ಯದರ್ಶಿಯಾಗಿದ್ದೆ. ಕರ್ನಾಟಕ ರಾಜ್ಯ ಆಗುವುದರ ಬಗ್ಗೆ ನಾನು ಸ್ವಲ್ಪ ದುಡಿದಿದ್ದೇನೆ. ಆಸಕ್ತಿ ವಹಿಸಿರುವುದು ತಮಗೆಲ್ಲಾ ಗೊತ್ತು. ನಮ್ಮ ರಾಜ್ಯಕ್ಕೆ ಕನ್ನಡ ಬೇಕು, ಆದರೆ ಕನ್ನಡವೇ ಬೇಕು ಎಂದು ಹೇಳತಕ್ಕದ್ದು ದಡ್ಡರ ವಾದ. . ಇದು ಮುಂದಾಲೋಚನೆ ಇಲ್ಲದವರ ವಾದ. ಆವೊತ್ತು ಕನ್ನಡದ ಬಗ್ಗೆ ಮಾತನಾಡಿದ್ದೇನೆ. ಪುನಃ ಮಾತನಾಡಲಿಕ್ಕೆ ಇಚ್ಛೆಯಾಗಿದೆ, ಮಾತನಾಡುತ್ತೇನೆ. ಸೆಂಟ್ರಲ್ ಗವರ್ನ್‌ಮೆಂಟ್‌ನಲ್ಲಿ ಎಷ್ಟು ಜನ ನೌಕರರು ಇದ್ದಾರೆ ಅಂದರೆ ೫೦ಲಕ್ಷ ಜನ ನೌಕರರು ಇದ್ದಾರೆ. ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ನಲ್ಲಿ ಎಷ್ಟು ಜನ ನೌಕರರು ಇದ್ದಾರೆ ಅಂದರೆ ಇಪ್ಪತ್ತೈದು ಲಕ್ಷ ಜನ ನೌಕರರು ಇದ್ದಾರೆ. ಅಲ್ಲಿ ನಮ್ಮ ಮಕ್ಕಳು ಕೆಲಸಕ್ಕೆ ಸೇರಬೇಕೋ, ಬೇಡವೋ, ಕನ್ನಡ ಕಲಿತವರು ಡೆಲ್ಲಿಗೆ ಹೋಗುತ್ತಾರೆಯೋ ? ನಮ್ಮ ಸರ್ಕಾರ ಕನ್ನಡ ಮಾತನಾಡಬೇಕೆಂದು ಹೇಳಿದರು, ಕನ್ನಡ ಕಲಿಸಬೇಕೆಂದು ಹೇಳಿದರು. ಕನ್ನಡ ಕಲಿತು ನೌಕರಿ ಕೊಡಿ ಎಂದರೆ ಮನೆಗೆ ಹೋಗಿ ಎಂದು ಹೇಳುತ್ತಾರೆ. ಪಬ್ಲಿಕ್ ಸೆಕ್ಟರ್ ಇಂಡಸ್ಟ್ರಿಸಲ್ಲಿ ಸೈನ್ಸ್ ಅಂಡ್ ಟೆಕ್ನಾಲಜಿ ಏನು ಇದೆ, ಅದನ್ನು ಕನ್ನಡದಲ್ಲಿ ಬರೆದುಕೊಂಡು ಕಲಿತುಕೊಳ್ಳುವುದಕ್ಕೆ ಆಗುತ್ತದೆಯೇ? ಇವೊತ್ತು ಇಂಗ್ಲಿಷ್ ಪ್ರಪಂಚದ ಭಾಷೆ. ಇದನ್ನು ಕಲಿಯದೇ ಹೋದರೆ ನಮ್ಮ ಮಕ್ಕಳನ್ನು ದನ ಕಾಯಲಿಕ್ಕೆ ಕಳುಹಿಸಬೇಕಾಗುತ್ತದೆ. ಆದ್ದರಿಂದ, ಸರ್ಕಾರ ತನ್ನ ಧೋರಣೆಯನ್ನು ಬದಲಾವಣೆ ಮಾಡಿ, ಎಲ್ಲಾ ಭಾಷೆಯನ್ನು ಕಲಿಯಿರಿ ಎಂದು ಹೇಳಲಿ. ಅದು ಬಿಟ್ಟು ಕನ್ನಡವನ್ನೇ ಕಲಿಯಬೇಕು ಎನ್ನುವುದು ಮುಟ್ಠಾಳಗಿರಿ ಎಂದು ಹೇಳುತ್ತೇನೆ.

ಶ್ರೀ ಬಿ. ಜಿ. ಕೊಟ್ರಪ್ಪ.— ರಷ್ಯಾ ಮತ್ತು ಚೈನಾದಲ್ಲಿ ಅವರವರ ಭಾಷೆಯಲ್ಲಿ ಮುಂದುವರಿದಿರುವಂಥದ್ದು ಇದೆ. ನೀವು ರಷ್ಯಾಕ್ಕೆ ಹೋಗಿದ್ದಾರೋ ಇಲ್ಲವೋ ಗೊತ್ತಿಲ್ಲ.

೫.೩೦ ಪಿ.ಎಂ

ಶ್ರೀ ಬಿ. ಬಸವಲಿಂಗಪ್ಪ.— ನಾನು ಬೇರೆಕಡೆ ವಿಚಾರಕ್ಕೆ ಬರುತ್ತಿದ್ದೇನೆ. ತಾ ೧೧-೧-೮೪ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾದಂಥ ಕೆಲವಾರ ವಾಗ್ದಾನಗಳ ಬಗ್ಗೆ ಕೆಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇನೆಂದು ತೀರ್ಮಾನ ತೆಗೆದುಕೊಂಡಿದ್ದಾರೆ, ಮಾನ್ಯ ಹೆಗ್ಡೆಯವರು ಅದೇ ರೀತಿ gave an interview to ‘ PATRIOT ’ wherein had said as follows.

> " Karnataka Chief Minister Mr. Ramakrishna Hagde said here today that his Government would enquire into the concrete cases of corruption against the previeous Congress (I) Government. In an interview he said the people of the State were disillusbioned and dissatisfied and obviously wanted a change of Government as they have disgusted with the political and administrative corruption and non-performance of the previous Government. "

ಸ್ವಾಮಿ, ಇದರಲ್ಲಿ ರಾಜಕೀಯವಾಗಿ ಕಾಂಗ್ರೆಸ್ ಸರ್ಕಾರದಲ್ಲಿ ಯಾರ್ಯಾರು ಲಂಚ ರುಷುವತ್ತುಗಳ ಆರೋಪಕ್ಕೆ ಒಳಪಟ್ಟಿದ್ದಾರೆ ಅದನ್ನೆಲ್ಲಾ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದರು. ಆದರೆ ಅದನ್ನು ಮಾಡುವುದಕ್ಕೆ ಹೋಗಲಿಲ್ಲ. ಕಾರಣ ನಾಳೆ ಅವರ ಸರ್ಕಾರ ಬಂದರೆ ನಮ್ಮ ಮೇಲೆ ಏನು ಮಾಡು

ತ್ತಾರೋ ಎಂಬ ಹೆದರಿಕೆ ಇರಬಹುದು, ದಯವಿಟ್ಟು ಆ ಕೆಲಸವನ್ನು ಮಾಡುವುದು ಬೇಡ. ಜನತೆಗೆ ಅವಕಾಶ ಸಿಕ್ಕಿತು. ನಮ್ಮ ಸರ್ಕಾರವನ್ನು ಕಿತ್ತು ಬಿಸಾಡಿದರು. ಅದು ಸರಿ. ಆದರೆ ಅದೇ ದಾರಿಯಲ್ಲಿ ಮತ್ತೆ ಅದನ್ನೇ ನೀವೂ ಮಾಡಲಿಕ್ಕೆ ಹೊರಟಿದ್ದೀರಿ. ನಾನು ತಮಗೆ ಹೇಳುತ್ತೇನೆ, ದಯವಿಟ್ಟು ತಿಳಿದುಕೊಳ್ಳಿ. ನೀವು ಹೇಳಿರತಕ್ಕ, ನೀವು ಕೊಟ್ಟಿರತಕ್ಕ ವಾಗ್ದಾನಗಳನ್ನು ನೀವು ಕಾರ್ಯಗತ ಮಾಡದೇ ಹಾಗೆಯೇ ವರ್ಷಗಳು ಕಳೆದುಹೋದುವು. ಜಿಲ್ಲಾಪರಿಷತ್ತು, ಮಂಡಲ ಪಂಚಾಯಿತ್‌ಗಳಲ್ಲಿ ಹೇಗೋ ಜಯಗಳಿಸಿದ್ದೇವೆ ಎನ್ನತಕ್ಕ ಭ್ರಮೆಯಲ್ಲಿ ನೀವು ಯಾವುದೋ ಕನಸನ್ನು ಕಾಣುವುದಕ್ಕೆ ಹೋಗಬೇಡಿ. ನಾವು ಯಾವರೀತಿ ಅಧಿಕಾರದಿಂದ ಹೊರಗೆ ಹೋದಂಥ ಪರಿಸ್ಥಿತಿ ಬಂತೋ ಅದೇ ರೀತಿ ನೀವೂ ಕೂಡ ಹಿಂದೆ ಜನತೆಗೆ ಕೊಟ್ಟ ಆಶ್ವಾಸನೆಗಳನ್ನು ಹಾಗೂ ವಾಗ್ದಾನಗಳನ್ನು ಈಡೇರಿಸಲು ಕಾರ್ಯೋನ್ಮುಖ ಆಗದಿದ್ದರೆ, ನೀವು ಸರಿಯಾಗಿ ಕೆಲಸಮಾಡದಿದ್ದರೆ ನಮ್ಮ ಪರಿಸ್ಥಿತಿಯೇ ನಿಮಗೂ ಬರತಕ್ಕದ್ದು ಅನಿವಾರ್ಯ. ತಾ. ೯-೧-೮೭ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನೊಂದು ಮಾತನ್ನು ಹೇಳಿದ್ದಾರೆಂದರೆ "we will frame the Government servants service rules, ಗೌರ್ನಮೆಂಟ್ ಸರ್ವಿಸ್ ರೂಲ್ಸ್‌ನ್ನು ಬದಲಾವಣೆ ಮಾಡಿ ಸರ್ಕಾರೀ ನೌಕರರನ್ನು ಜೈಲಿಗೆ ಕಳುಹಿಸುವಂತೆ ಮಾಡಬೇಕು. ಯಾರ್‍ಯಾರು ಕರಪ್ಟ್ ಇದ್ದಾರೆ, ಬೇಜವಾಬ್ದಾರಿಯುತವಾಗಿ ಕೆಲಸಮಾಡುತ್ತಾರೆ ಅಂಥವರನ್ನು ಜೈಲಿಗೆ ಕಳಿಸುವ ಸಲುವಾಗಿ ಸರ್ವೀಸ್ ರೂಲ್ಸ್‌ನ್ನು ಬದಲಾವಣೆ ಮಾಡಿ ತರುತ್ತೇವೆಂದು ಹೇಳಿದರು. ನಾನಾದರೂ ಕೇಳುತ್ತೇನೆ, ಅದನ್ನು ಏತಕ್ಕೆ ಬದಲಾವಣೆ ಮಾಡಲಿಲ್ಲ ? ಹೇಗೆ ಇತ್ತೋ ಹಾಗೆಯೇ ನಡೆಸಿಕೊಂಡು ಹೋಗುತ್ತಿದ್ದಾರೆ. ನೀವು ಈಗ ಇದರ ಬಗ್ಗೆ ಸರಿಯಾದ ಗಮನವನ್ನು ಕೊಡದಿದ್ದರೆ, ನೌಕರರನ್ನು ಸರಿಯಾಗಿ ಕಂಟ್ರೋಲ್ ಮಾಡದಿದ್ದರೆ ದಕ್ಷತೆಯಿಂದ ನೀವು ಆಡಳಿತವನ್ನು ಮಾಡುವುದಕ್ಕಾಗುವುದಿಲ್ಲ. ಸ್ವಾಮಿ, ನಾವು ಗ್ರಿವೆನ್ಸ್ ಸ್ಸೆಲನ್ನು ಮಾಡುತ್ತೇವೆ, ಜನತೆಯ ಸಮಸ್ಯೆಗಳನ್ನು ಪರಿಹಾರ ಮಾಡುತ್ತೇವೆಂದು ಹೇಳಿದ್ದರಿ. ೧,೧೬,೩೯೨ ದೂರುಗಳ ಪೈಕಿ ನಿಮ್ಮ ಪುಸ್ತಕದಲ್ಲಿ ನೀವೇ ಕೊಟ್ಟಿರುವ ಪ್ರಕಾರ ೩೦೦-೪೦೦ ದೂರುಗಳು ಅಂದರೆ ಸಮಸ್ಯೆಗಳನ್ನು ಪರಿಹಾರ ಮಾಡಿದ್ದೀರಿ. ಈ ಮಾತನ್ನು ನಾನು ಹೇಳುತ್ತಿಲ್ಲ. ನೀವೇ ನಿಮ್ಮ ಈ ಪುಸ್ತಕದಲ್ಲಿ ಹೇಳಿದ್ದೀರಿ. ಇದೂಹೋಗಲಿ, ಬೆಂಗಳೂರು ಪ್ರಾಧಿಕಾರದಲ್ಲಿ ಬಹಳಷ್ಟು ಅವ್ಯವಹಾರಗಳು ನಡೆದಿದೆ. ಇದು ತಮಗೂ ಗೊತ್ತಿದೆ. ಮೊದಲು ಏನು ಹೇಳಿದಿರಿ ನಾವು ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಆದರೆ ಇದುವರೆಗೂ ಏತಕ್ಕೆ ತೆಗೆದುಕೊಳ್ಳಲಿಲ್ಲ ಸ್ವಾಮಿ ? ಕೋಟ್ಯಾಂತರ ರೂಪಾಯಿ ಅವ್ಯವಹಾರ ಅಲ್ಲಿರತಕ್ಕವರು ಮಾಡಿದ್ದಾರೆ. ಅವರ ಮೇಲೆ ಇನ್ನೂ ಯಾವುದೇ ಕ್ರಮವನ್ನೂ ನೀವು ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಈಗೆಲ್ಲಾ ಅವಸರ ಮಾಡಿದರೆ ಏನು ಮಾಡುವುದು ? ಪ್ರತಿಯೊಂದು ವಿಷಯವನ್ನು ಒಂದೊಂದೇ ವಾಕ್ಯದಲ್ಲಿ ಮುಗಿಸುತ್ತೇನೆ. ಪಬ್ಲಿಕ್ ಅಕೌಂಟ್ಸ್ ಬಗ್ಗೆ ಒಂದು ಕಿವಿ ಮಾತನ್ನು ಹೇಳುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಯಾವ ಯಾವ ಅಧಿಕಾರಿಗಳ ಮೇಲೆ ಆಪಾದನೆ ಮಾಡಿ ಎಷ್ಟೆಷ್ಟು ಕೋಟಿ ರೂಪಾಯಿಗಳನ್ನು ಲಂಚ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ ಅವರ ಮೇಲೆ ಇದುವರೆವಿಗೂ ಏನು ಕ್ರಮ ತೆಗೆದುಕೊಂಡಿಲ್ಲ ಆ ಕೆಲಸ ಮಾಡಿ ನಿಮ್ಮ ಕೆಲಸ ಸರಿಹೋಗುತ್ತದೆ. ಮತ್ತೆ ಜನಗಳ ಮನಸ್ಸನ್ನು ಡೈವರ್ಟ್ ಮಾಡುವುದಕ್ಕೆ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಇದರ ಬಗ್ಗೆ ಹೋಗುವುದಿಲ್ಲ. ಮುಖ್ಯಮಂತ್ರಿ ರಾಜೀನಾಮೆ ಕೊಡುವುದು ಇದೆಲ್ಲಾ ಬಹಳವಾಗಿ ನೋಡಿದ್ದೇನೆ. ಅದಕ್ಕೆ ನಾನು ಒಂದು ಮಾತನ್ನು ಹೇಳುತ್ತೇನೆ, ಇದರ ಒಟ್ಟು ಅರ್ಥ ಮುಖ್ಯಮಂತ್ರಿಗಳಾಗಿ, ತಾವೇ ನಾಯಕರಾಗಿ ಇರಬೇಕೆಂಬುದಾಗಿದೆ. ಇದರಿಂದ ಬೇರೆಯವರ ವಿಚಾರ ಏನಾಗುತ್ತದೆ ? ಬೇರೆಯವರಿಗೆ ಪ್ರಾಶಸ್ತ್ಯ ಸಿಗುವ ಪ್ರಶ್ನೆಯೇ ಬರುವುದಿಲ್ಲ. ನಾನು ಅವರಿಗೆ ಒಂದು ಮಾತನ್ನು ಹೇಳುವುದಕ್ಕೆ ಕಾತುರನಾಗಿದ್ದೇನೆ. ಡಾ|| ಅಂಬೇಡ್ಕರ್‌ರವರು ಒಂದು ಮಾತನ್ನು ಹೇಳಿದರು. "Bhakti in religion may be a road to salvation, but in politics, Bhakti is a sure road to degradation and dictatorship" ಇದು ಎಂ. ಎಲ್. ಎ. ಗಳು ಜನತಾ ಪಾರ್ಟಿಯವರು ರಾಜೀನಾಮೆಯನ್ನು ಕೊಡುತ್ತೇವೆಂದು ಹೇಳುವುದು ಇದನ್ನೆಲ್ಲಾ ಒಟ್ಟಿನಲ್ಲಿ ನೋಡುವುದಾದರೆ ಅಸಹ್ಯವಾಗುತ್ತದೆ. ಇಂಥ ಒಂದು ಪ್ರಸಂಗ ಬಾರದೆ ಇರಲಿ ಎಂದು ಈ ಸದನಕ್ಕೆ ಹೇಳುತ್ತೇನೆ. ಇನ್ನೊಂದು English

poet has said, "No country can remain democratic, no people can preserve the constitutional Government if the people are imbued with an immoderate sense of hero worship", ಎರಡನೆಯದು ಕೂಡ ಪ್ರಬುದ್ಧರಾಗಿ ಇರತಕ್ಕಂಥ ಮಾನ್ಯ ಲೇಖಕರು ಹೇಳಿದಂಥ ಮಾತನ್ನು ಈ ಸದನದಲ್ಲಿ ಹೇಳಬೇಕಾಗುತ್ತದೆ. ಹಲವಾರು ವಿಷಯಗಳನ್ನು ಹೇಳಬೇಕಾಗಿದೆ. ಆದರೆ ಅದೆಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವಿಚಾರವನ್ನು ಮಾತ್ರ ಹೇಳುತ್ತೇನೆ ತಾವು ಏನೇನು ವಾಗ್ದಾನ ಮಾಡಿದ್ದೀರಿ, ಅದನ್ನೆಲ್ಲ ಕಾರ್ಯಗತ ಮಾಡಿ. ನನ್ನ ಅನುಭವಕ್ಕೆ ಬಂದ ಒಂದು ಮಾತನ್ನು ಶೇಕ್ಸ್‌ಪೀಯರ್ ಹೇಳಿದ್ದು ಹೇಳುತ್ತೇನೆ. "If what you say is correct, chapels would have been churches and poorman's cottages would have been palaces". ಇದು ಅವರ ಸಾಧನೆಗಳು. ನಾವು ಓದಿದ್ದೇವೆ, ನೀವು ಓದಿದ್ದೀರಿ. ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ತಾವು ಹೇಳಿದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಏನು ಒಂದು ಬಿದ್ದುಹೋಗಿರುವ ಅರ್ಥ ವ್ಯವಸ್ಥೆ ಅದನ್ನು ಸರಿಮಾಡಿಕೊಂಡು ಕನ್ನಡ ಜನತೆಗೆ ಸೇವೆಯನ್ನು ಮಾಡಿ. ಮುಂದಿನ ವರ್ಷವಾದರೂ ಆಗಿರತಕ್ಕಂಥ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಸರ್ಕಾರವನ್ನು ನಡೆಸಿಕೊಂಡು ಹೋಗಬೇಕೆನ್ನುವ ಮಾತನ್ನು ಹೇಳಿ ನನ್ನ ಮಾತನು ಮುಗಿಸುತ್ತೇನೆ.

ಶ್ರೀ ಬಿ. ರಾಮಕೃಷ್ಣ (ಕಮಲಾಪುರ).—ಸನ್ಮಾನ್ಯ ಅಧ್ಯಕ್ಷರೇ, ಈವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಬಡ್ಜೆಟ್‌ನ ಬಗ್ಗೆ ನಾನು ಕೆಲವೊಂದು ಮಾತುಗಳನ್ನು ಆಡುತ್ತಾ ಈ ಬಡ್ಜೆಟನ್ನು ಖಂಡಿಸುತ್ತೇನೆ ಸನ್ಮಾನ್ಯ ಅಧ್ಯಕ್ಷರೇ, ಈ ಬಡ್ಜೆಟ್ ನೋಡಿದರೆ ಮೊಟ್ಟ ಮೊದಲನೆಯದಾಗಿ ಜಿಲ್ಲಾ ಪರಿಷತ್ತಿನ ಎಲೆಕ್ಷನ್‌ನಿಂದಾಗಿ ಎಷ್ಟು ಮಂದಿಯನ್ನು ಬೆಂಗಳೂರು ನಗರಕ್ಕೆ ಕರೆದುಕೊಂಡು ಬಂದರು ಎಂಬುದರಿಂದ ಶುರುವಾಗಿದೆ. ಸಹಜವಾಗಿಯೂ ಇವತ್ತಿನ ಬಡ್ಜೆಟ್‌ನಲ್ಲಿ ಮೊದಲನೆಯ ಪೇಜ್‌ನಲ್ಲಿ ಮೊದಲನೆಯ ಪ್ಯಾರಾದಲ್ಲಿ ಜನತಾ ಪಕ್ಷದ ಪ್ರಚಾರಕ್ಕಾಗಿ ಹಾಕಲ್ಪಟ್ಟಿದೆ ಎಂದು ನನಗನಿಸುತ್ತದೆ. ಈ ರಾಜ್ಯದ ಎಲ್ಲಾ ಹಳ್ಳಿಗಳಿಂದ ಆರಿಸಿಬಂದಂತಹ ಸುಮಾರು ೬೦ ಸಾವಿರ ಜನರನ್ನು ಸೇರಿಸಿ ಒಂದು ದೊಡ್ಡ ಸಮ್ಮೇಳನ ಮಾಡಬೇಕೆಂಬ ದೃಷ್ಟಿಯಿಂದ, ರಾಜಕೀಯ ಮಾಡತಕ್ಕ ಈ ಪಕ್ಷ ಜನರ ಕೈಗೆ ಅಧಿಕಾರ ಕೊಡತಕ್ಕ ದೃಷ್ಟಿಯಿಂದ, ಸಮ್ಮೇಳನ ಜರುಗಿಸುತ್ತಿದ್ದೇವೆಂದು ಬೆಂಗಳೂರು ನಗರದಲ್ಲಿ ಜರುಗಿಸಿದರು. ಅಲ್ಲಿ ೬೦ ಸಾವಿರ ಜನರನ್ನು ಸೇರಿಸುವುದಕ್ಕೆ ಮೊದಲೇ ಮುಖ್ಯಮಂತ್ರಿಗಳು ಈ ಸದನದಲ್ಲಿ ಒಂದು ಮಾತು ಹೇಳಿದರು. ಚುನಾಯಿತ ಸದಸ್ಯರೆಲ್ಲರನ್ನೂ ಒಂದೇ ಬಸ್ಸಿನಲ್ಲಿ ಯಾವುದೇ ತಾರತಮ್ಯವಿಲ್ಲದೆ, ನಾವು ಕಾಂಗ್ರೆಸ್ಸಿನವರು, ನಾವು ಜನತಾದವರು, ಇಂಥ ಪಕ್ಷಕ್ಕೆ ಸಂಬಂಧಪಟ್ಟವರು ಎಂಬ ಭಾವನೆ ಬರಬಾರದೆಂಬ ದೃಷ್ಟಿಯಿಂದ ಒಟ್ಟುಗೂಡಿಸಿ ತಂದು ಒಂದೇ ಜಾಗದಲ್ಲಿಟ್ಟಿದ್ದೇವೆಂದು ಹೇಳಿದರು. ಇದು ಆರಿಸಿ ಬಂದ ಮೇಲೆ ವಿಚಾರ ಮಾಡತಕ್ಕ ವಿಚಾರ. ಆರಿಸಿ ಬರುವುದಕ್ಕೆ ಮೊದಲೇ ಈ ಸದನದಲ್ಲಿ ನಾವು ಎಲ್ಲ ಹೇಳಿದ್ದೇವೆ. ಪಕ್ಷದ ಹೆಸರಿನಲ್ಲಿ ಎಲೆಕ್ಷನ್ ಮಾಡುವುದು ಬೇಡ ಹಳ್ಳಿಯಲ್ಲಿ ನೆಮ್ಮದಿಯಿಂದ ಇದ್ದ ಜನರಲ್ಲಿ ಕೆಟ್ಟ ಭಾವನೆ ಮೂಡುತ್ತದೆ, ಆದ್ದರಿಂದ ಪಕ್ಷಭೇದವಿಲ್ಲದೆ ಚುನಾವಣೆಯಾಗಬೇಕು. ಹಿಂದೆ ತಾಲ್ಲೂಕು ಬೋರ್ಡುಗಳಲ್ಲಿ ಯಾವ ರೀತಿ ಎಲೆಕ್ಷನ್ ಆಗಿದೆ ಅದೇ ರೀತಿ ಆಗಬೇಕು, ಪಕ್ಷದ ಹೆಸರಿನಲ್ಲಿ ಆಗುವುದು ಬೇಡ ಅಂದಾಗ ಒಪ್ಪದೆ ಪಕ್ಷದ ಹೆಸರಿನಲ್ಲೇ ಆಗಬೇಕು ಎಂದು ಚುನಾವಣೆ ಮಾಡಿದರು. ಜನತಾ ಪಕ್ಷಕ್ಕೆ ಸೇರಿದವರು ಬೇರೆ ಇರಬೇಕು, ಕಾಂಗ್ರೆಸ್ ಪಕ್ಷಕ್ಕೇ ಸೇರಿದವರು ಬೇರೆ ಇರಬೇಕೆಂದು ಮಾಡಿದರು. ಇದರ ಉದ್ದೇಶ ಇಷ್ಟೆ : ಜನತಾ ಪಕ್ಷ ಅಧಿಕಾರಕ್ಕೆ ಬಂದು ೪ ವರ್ಷ ಆಗುತ್ತಿದೆ. ಇದರ ಪ್ರಚಾರ ಹಳ್ಳಿಗಳಿಗೆ, ಮನೆ ಮನೆಗೆ ಮುಟ್ಟಲಿ ಎಂಬ ಭಾವನೆಯಿಂದ ಮಾಡಿದ್ದಾರೆಂದು ನನಗನ್ನಿಸುತ್ತಿದೆ ಆ ಪಕ್ಷಕ್ಕೆ ಸಂಬಂಧಪಟ್ಟ ಎಲ್ಲಾ ಮುಖಂಡರ ಉದ್ದೇಶ ಇದಾಗಿತ್ತು. ಕರ್ನಾಟಕ ರಾಜ್ಯದಲ್ಲಿರತಕ್ಕ ಕಾಂಗ್ರೆಸ್ ನಿರ್ನಾಮವಾಗುತ್ತದೆಂದು ಮಾಡಿದ್ದಾರೆ. ಆದರೆ ಕರ್ನಾಟಕದ ಜನ ಎಚ್ಚರಿಕೆಯುಳ್ಳ ಜನ. ವಿಚಾರ ಮಾಡಿ ಇಬ್ಬರನ್ನೂ ಸರಿಸಮಾನವಾಗಿ ಆರಿಸಿದರು. ಹಾಗೆ ಆರಿಸಿದ ಮೇಲೆ ಇವರು ವಿಚಾರ ಮಾಡಿ ಹೇಳಿದರು. ವಿರೋಧಪಕ್ಷ ಕೂಡ ಸರಿಸಮಾನವಾಗಿ ಇರಲಿ ಎಂದು ರಾಜ್ಯದ ಜನ ಆರಿಸಿದ್ದಾರೆಂದೂ ಮುಖ್ಯಮಂತ್ರಿಗಳು ಹೇಳಿದರು. ಒಂದು ವೇಳೆ ಕಾಂಗ್ರೆಸ್ ಪಕ್ಷಕ್ಕೆ ಸಂಬಂಧಪಟ್ಟ ಅಭ್ಯರ್ಥಿಗಳು ಆರಿಸಿಬರದಿದ್ದರೆ ಈ ರಾಜ್ಯದಿಂದ ಕಾಂಗ್ರೆಸ್ ಪಕ್ಷ ಅಳಿದು ಹೋಯಿತು, ಜನರು ಕಾಂಗ್ರೆಸ್ ಪಕ್ಷವನ್ನು ಅಳಿಸಿದರು ಎಂಬ ಮಾತು ಬರುತ್ತಿತ್ತು. ಈಗ ಆರಿಸಿ ಬಂದ ಮೇಲೆ ಈ ಮಾತನ್ನು ಹೇಳುತ್ತಿದ್ದಾರೆ. ಹೇಗೆ ಪ್ರತ್ಯೇಕ

ವಾಗಿ ಕಾಂಗ್ರೆಸ್ ಪಕ್ಷ, ಜನತಾ ಪಕ್ಷಕ್ಕೆ ಸಂಬಂಧಪಟ್ಟ ಅಭ್ಯರ್ಥಿಗಳು ಎಂದು ಚುನಾವಣೆ ಮಾಡಿದರೋ ಅದೇ ರೀತಿ ಈಗಲೂ ಅವಕಾಶ ಮಾಡಿಕೊಡಬೇಕಾಗಿತ್ತು. ಈಗ ಸರಿಸಮಾನವಾಗಿ ಆರಿಸಿಬಂದಂತಹ ಅಭ್ಯರ್ಥಿಗಳು ಇರುವುದರಿಂದ ಎಲ್ಲರಿಗೂ ಒಂದೇ ವ್ಯವಸ್ಥೆ ; ಮಾಡಿದರು ಎಂದು ಅನ್ನಿಸುತ್ತದೆ. ಇಲ್ಲಿ ೬೦ ಸಾವಿರ ಜನರನ್ನು ಕರೆಸಿದ ಮೇಲೆ ಅವರ ಗತಿ ಏನಾಯಿತು ? ಹಳ್ಳಿಯಲ್ಲಿ ಜನ ಮುಖ್ಯ ಮಂತ್ರಿಗಳು ಬೆಂಗಳೂರು ತೋರಿಸಿದರೆ ಏನು ಕೇಳಿದರೆ ನಾವು ಹೋದದ್ದೇ ತಪ್ಪಾಯಿತು ಅನ್ನುತ್ತಾರೆ. ಏನೋ ಒಳ್ಳೆಯ ವಿಚಾರಗಳನ್ನು ಕೊಡಬಹುದು. ಒಳ್ಳೆಯ ಉದ್ದೇಶ ಇರಬಹುದೆಂದು ಬಂದು ಏನು ಮಾಡಬೇಕೆಂದು ತಿಳಿಯಲಿಲ್ಲ ; ಉಳಿಯುವುದಕ್ಕೆ ಅನುಕೂಲವಾಗಲಿಲ್ಲವೆಂದರು. ಬೀದರ್, ಗುಲ್ಬರ್ಗದ ಜನರು ಬರಬೇಕಾದರೆ ರಾತ್ರಿ ಹಗಲು ಬರಬೇಕಾಯಿತು. ಬೆಂಗಳೂರಿಗೆ ಹೋಗಬೇಕೆಂದು ಹೊರಾಟ ಜನ ಮುಂಜಾನೆಯೇ ಸಿದ್ಧರಾಗಿ ಎದ್ದು ಎಷ್ಟು ಹೊತ್ತಿಗೆ ಬಸ್ಸು ಬರುತ್ತದೋ ಎಂದು ರೊಟ್ಟಿ ಬುತ್ತಿ ಕಟ್ಟಿಕೊಂಡು ಹಗಲು ರಾತ್ರಿ ಪ್ರಯಾಣ ಮಾಡಿ ಮುಂಜಾನೆ ಇಲ್ಲಿಗೆ ಬಂದರು. ಸಮಾರಂಭ ಶುರುವಾದ ಮೇಲೆ ಕೆಲವರು ೧೧-೧೨ ಗಂಟೆಯವರೆಗೆ ಬಂದರು.

ಗುಲ್ಬರ್ಗದಿಂದ ಬೆಂಗಳೂರಿಗೆ ೧೨ ಗಂಟೆಯವರೆಗೂ ಬಂದರು. ಬಂದಮೇಲೆ ಅವರಿಗೆ ಊಟ ಸಿಗಲಿಲ್ಲ. ಇರುವುದಕ್ಕೆ ಆಶ್ರಯ ಸಿಗಲಿಲ್ಲ ಅಲ್ಲಿ ಬಹಳಷ್ಟು ಅಸ್ತವ್ಯಸ್ತತೆ ಆಗಿತ್ತು. ಅಲ್ಲಿಂದ ಬಂದಿದ್ದ ಜನ ಏನೋ ತಿಳಿದುಕೊಂಡಿದ್ದರು ಒಳ್ಳೆಯದು ಏನಾದರೂ ಹೇಳಬಹುದು ಎಂದು. ಆದರೆ ೬೦ ಸಾವಿರ ಜನರನ್ನು ಕರೆದು ಸಮ್ಮೇಳನ ಮಾಡಿದ್ದರಿಂದ ಏನೂ ಉದ್ಧಾರವಾಗಲಿಲ್ಲ. ಬೇಕಾದಷ್ಟು ಖರ್ಚಾಯಿತು. ಬೇಕಾದಷ್ಟು ಅವ್ಯವಹಾರಗಳು ಆಯಿತು. ಎಷ್ಟು ಖರ್ಚಾಯಿತು? ಎಷ್ಟು ಅವ್ಯವಹಾರ ಗಳಾಯಿತು ಎಂದು ಪತ್ರಿಕೆಯಲ್ಲಿ ಬಂತು. ಆದರೂ ಸಹ ಇವತ್ತು ಪಕ್ಷಕ್ಕೆ ಸಂಬಂಧಪಟ್ಟವರು ಹೇಳುತ್ತಾರೆ ಏನೊ ದೊಡ್ಡ ಕೆಲಸ ಮಾಡಿದ್ದೇವೆ ಎಂದು. ೬೦ ಸಾವಿರ ಮಂದಿ ಕರೆಸಿ ಬಹಳಷ್ಟು ಹೆಮ್ಮೆ ಗಳಿಸಿದ್ದೇವೆ ಎಂದು ಅವರು ಹೇಳುವುದು ಸರಿಯಾದುದಲ್ಲ ಬಜೆಟ್ ಬಗ್ಗೆ ಹೇಳಬೇಕಾದರೆ, ಕಳೆದ ನಾಲ್ಕು ವರ್ಷಗಳ ಕಾಲ ನಿರಂತರವಾಗಿ ಕಾಡಿದ ಬರಗಾಲದಿಂದ ಬಳಲಿದ್ದ ರಾಜ್ಯದ ಆರ್ಥಿಕ ಪರಿಸ್ಥಿತಿ ಚೇತರಿಸಿಕೊಂಡಿದೆ ಎಂದು ಹೇಳುತ್ತಾರೆ. ಇದಕ್ಕೂ ಮೊದಲು ಬರಗಾಲದ ಬಗ್ಗೆ ಸದನದಲ್ಲಿ ಬೇಕಾದಷ್ಟು ಚರ್ಚೆಯಾಯಿತು. ಆದರೂ ಸಹ, ಸರ್ಕಾರ ಇವತ್ತಿನವರೆಗೆ ಬರಗಾಲ ಹೋಗಿದೆ ಎಂಬ ಭಾವನೆಯನ್ನಿಟ್ಟುಕೊಂಡಿದ್ದರೂ ಕೂಡ ಬರಗಾಲ ಭೀಕರವಾಗಿದೆ. ನಮ್ಮ ಜಿಲ್ಲೆಯಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಜನ ಊರು ಬಿಡುತ್ತಿದ್ದಾರೆ. ಹಳ್ಳಿಯಲ್ಲಿ ಇರತಕ್ಕ ಜನ ಇರಲಿ ಜಿಲ್ಲೆಯಲ್ಲಿರತಕ್ಕ ಜನ ಊರು ಬಿಡುತ್ತಾರೆ ನಾವು ನಾಲ್ಕು ದಿವಸ ಉಪವಾಸ ಸತ್ಯಾಗ್ರಹ ಮಾಡಿದೆವು. ಆದರೂ ಏನೂ ಆಗಲಿಲ್ಲ. ಸರ್ಕಾರದವರು ಬೇಕಾದಷ್ಟು ಬೋರ್‌ವೆಲ್‌ಗಳನ್ನು ಹಾಕಿದ್ದೇವೆ. ಕಾಂಗ್ರೆಸ್ ಸರ್ಕಾರ ಹಾಕಲಾರದಷ್ಟು ಹಾಕಿದ್ದೇವೆ ಎಂದು ಹೇಳುತ್ತಾರೆ, ಆದರೆ ಬೋರ್‌ವೆಲ್ ತೆಗೆದ ಮೇಲೆ ನೀರು ಬರುತ್ತಿದೆಯೋ ಇಲ್ಲವೋ ಎಂಬುದನ್ನು ವಿಚಾರ ಮಾಡಬೇಕು. ಎಷ್ಟು ಬೋರ್‌ವೆಲ್ ಹಾಕಿದ್ದಾರೆ, ಅದರಲ್ಲಿ ಎಷ್ಟು ನೀರು ಬರುತ್ತಿದೆ, ಎಷ್ಟು ಜನರಿಗೆ ಸಹಾಯ ಆಗುತ್ತಿದೆ ಎಂಬುದು ಮುಖ್ಯ. ಹೇಳಬಹುದು, ಒಂದೊಂದು ಊರಿನಲ್ಲಿ ೮-೧೦ ಬೋರ್‌ವೆಲ್‌ಗಳನ್ನು ಹಾಕಿದ್ದೇವೆ ಎಂದು. ಆದರೆ ಜನ ನೀರು ಕುಡಿಯುತ್ತಿದ್ದಾರೋ ಸಾಯುತ್ತಿದ್ದಾರೋ ಎಂಬುದನ್ನು ನೋಡಬೇಕು ಹಳ್ಳಿಯಲ್ಲಿ ಯಾವ ಪರಿಸ್ಥಿತಿ ಇದೆ ಎಂಬುದನ್ನು ನೋಡಲಿ. ಬರೀ ಬೋರ್‌ವೆಲ್ ಹಾಕಿ ಜನರಿಗೆ ನೀರು ಕುಡಿಯುವುದಕ್ಕೆ ಅನುಕೂಲವಾಗುತ್ತದೆ ಎಂದರೆ ಅದು ತಪ್ಪು. ಜನ ಬೋರ್‌ವೆಲ್ ಹಾಕಿರಿ ಎಂದು ಕೇಳುತ್ತಿಲ್ಲ. ಕುಡಿಯುವುದಕ್ಕೆ ನೀರು ಬೇಕು ಎಂದು ಕೇಳುತ್ತಿದ್ದಾರೆ. ಈ ರೀತಿ ಬೋರ್‌ವೆಲ್ ಹಾಕುವುದನ್ನು ಬಿಟ್ಟು ನಾಲ್ಕೈದು ಕಿಲೋ ಮೀಟರ್‌ವರೆಗೆ ಪೈಪ್ ಹಾಕಿ ಅದರ ಮುಖಾಂತರ ನೀರು ಕೊಟ್ಟರೆ ಮಾತ್ರ ಅನುಕೂಲವಾಗುತ್ತದೆ. ‘ಇಡೀ ರಾಷ್ಟ್ರದಲ್ಲೇ ಗ್ರಾಹಕ ಬೆಲೆ ಶೇಕಡ ೭.೪ರಷ್ಟು ಏರಿದ್ದರೆ ರಾಜ್ಯದಲ್ಲಿ ಈ ಏರಿಕೆ ೬.೧ರಷ್ಟು ಮಾತ್ರ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಿ ಪರಿಣಾಮಕಾರಿಯಾಗುವಂತೆ ಮಾಡಿರುವುದು ಹಾಗೂ ಜನತೆಯ ದುರ್ಬಲ ವರ್ಗಗಳಿಗೆ ಅತ್ಯಾವಶ್ಯಕ, ಸಾಮಗ್ರಿಗಳು ಅಗ್ಗದ ದರದಲ್ಲಿ ದೊರೆಯುವಂತೆ ಮಾಡಿರುವುದೇ ಇದಕ್ಕೆ ಮುಖ್ಯ ಕಾರಣ ಎಂದು ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ ರಾಜ್ಯದಲ್ಲಿರತಕ್ಕ ಬಡಜನರಿಗೆ ಬಹಳ ಅನುಕೂಲ ಮಾಡಿಕೊಡುತ್ತಿದ್ದೇವೆ ಎಂದು ಸರ್ಕಾರ ಹೇಳಿದೆ, ಅವರಿಗೆ ಬೇಕಾದಂಥ ದವಸ ಧಾನ್ಯಗಳನ್ನು ಅಗ್ಗದ ದರದಲ್ಲಿ ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಕಾಗದದಲ್ಲಿ ಹೇಳಿದರೆ ಸಾಕಾ ? ಹಸಿರು ಕಾರ್ಡ್ ಎಷ್ಟು ಮಂದಿಗೆ ಹಂಚಿದ್ದೀರಿ ? ಯಾರು ಅದರ ಸವಲತ್ತನ್ನು ಪಡೆಯುತ್ತಿದ್ದಾರೆ ? ಒಂದು ಕ್ಷೇತ್ರದಲ್ಲಿ ಮನೆ ಮಾಡಿಕೊಂಡು ಯಾರಿಗೆ ಕಾರ್ಡ್ ಬೇಕಾಗಿದೆಯೋ

ಅವರಿಗೆ ಅದು ಸಿಗುತ್ತಿಲ್ಲ. ಬೇಕಾದಷ್ಟು ಉಂಡು ತಿಂದವರಿಗೆ ಹಸಿರು ಕಾರ್ಡ್ ಸಿಗುತ್ತಿದೆ. ಗರೀಬರಿಗೆ ಸಿಗುತ್ತಿಲ್ಲ. ಆದರೂ ಸಹ ಸರ್ಕಾರ ಬೇಕಾದಷ್ಟು ಸವಲತ್ತನ್ನು ಕೊಡುತ್ತಿದ್ದೇವೆ ಎಂದು ಹೇಳಿ ಕೊಳ್ಳುತ್ತಿದೆ. ಇದು ಸರಿಯಾದುದಲ್ಲ. ಆಮೇಲೆ ಆರೋಗ್ಯದ ಬಗ್ಗೆ ಇಲ್ಲಿ ಹೇಳಿದ್ದಾರೆ. "ಕ್ರಿ ಶ. ೨೦೦೦ದ ಹೊತ್ತಿಗೆ 'ಸರ್ವರಿಗೂ ಆರೋಗ್ಯ' ಎನ್ನುವ ಯೋಜನೆಯನ್ನು ಸಾಧಿಸುವುದಕ್ಕಾಗಿ ನಾವು ಆರೋಗ್ಯ ವಿಮಾ ಯೋಜನೆಯನ್ನು ಪ್ರಾರಂಭಿಸುವ ಕಾರ್ಯಕ್ರಮವನ್ನು ದೇಶದಲ್ಲೇ ಪ್ರಥಮ ಬಾರಿಗೆ ಹಾಕಿಕೊಂಡಿದ್ದೇವೆ'' ಎಂದು ಹೇಳಿದ್ದಾರೆ. ಇದು ಸರಿ ಇರಬಹುದು. ಆದರೆ ನಮ್ಮ ರಾಜ್ಯದಲ್ಲಿರತಕ್ಕ ಆರೋಗ್ಯದ ಬಗ್ಗೆ ವಿಚಾರ ಮಾಡುವುದಾದರೆ ಯಾವ ಪರಿಸ್ಥಿತಿ ಇದೆ? ಹಳ್ಳಿಯಲ್ಲಿರತಕ್ಕ ಆರೋಗ್ಯ ಕೇಂದ್ರ ಬೇಡ ಜಿಲ್ಲೆಯಲ್ಲಿರತಕ್ಕ ಆರೋಗ್ಯ ಕೇಂದ್ರದ ಪರಿಸ್ಥಿತಿ ಏನಿದೆ? ಜನರು ಏನು ಸವಲತ್ತು ಪಡೆಯುತ್ತಿದ್ದಾರೆ ? ಏನು ಅನುಕೂಲತೆ ಪಡೆಯುತ್ತಿದ್ದಾರೆ ? ಏನು ಸಾರ್ಥಕತೆ ಆಗಿದೆ ಎಂಬುದನ್ನು ನಾವು ನೋಡಬೇಕಾಗಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಇರುವಂಥ ಆಸ್ಪತ್ರೆ ನೋಡಿದರೆ ಬಹಳ ದೊಡ್ಡ ಕಟ್ಟಡ ಇದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಸರ್ಕಾರ ಕಟ್ಟಿಸಿದೆ. ಆ ಕಟ್ಟಡದಲ್ಲಿ ರೋಗಿಗಳು ಹೋಗಬೇಕಾದರೆ, ಏನನ್ನು ವಿಚಾರ ಮಾಡುತ್ತಾರೆಂದರೆ, ಆ ಕಟ್ಟಡದಲ್ಲಿ ನಾನು ಹೋದರೆ ಸಾಯುತ್ತೇನೆ ಅಂತ ಹೇಳುತ್ತಾರೆ. ಯಾರಾದರೂ ಬಡವರು ಅಲ್ಲಿಗೆ ಹೋಗಿ ಚಿಕಿತ್ಸೆಯನ್ನು ತೆಗೆದುಕೊಳ್ಳಬೇಕಾದರೆ, ಡಾಕ್ಟರ್ ಸರಿಯಾಗಿ ನೋಡಿಕೊಳ್ಳುವುದೇ ಇಲ್ಲ ಅಂತ ಹೇಳುತ್ತಾರೆ. ನಂತರ ಅಲ್ಲಿಗೆ ಹೋದರೆ, ಅಲ್ಲಿ ಏನೂ ಸಿಕ್ಕುವುದಿಲ್ಲ. ನಂತರ ಅಲ್ಲಿನ ಡಾಕ್ಟರ್‌ಗಳು ಪ್ರತಿಯೊಂದಕ್ಕೂ ದುಡ್ಡು ಕೊಡಿ ಎಂಬುದಾಗಿ ಒತ್ತಾಯ ಮಾಡುತ್ತಾರೆ. ಪ್ರತಿಯೊಂದು ಔಷಧಿಯನ್ನೂ ಹೊರಗಿನಿಂದ ತರಬೇಕು, ಡಾಕ್ಟರನ್ನು ಕೇಳಿದರೆ ಸರ್ಕಾರದಿಂದ ನನಗೆ ಔಷಧಿ ಬರುವುದಿಲ್ಲ ಅಂತ ಹೇಳುತ್ತಾರೆ ಎಂದು ಆ ರೋಗಿಗಳು ಹೇಳಿದರು. ಈ ಬಗ್ಗೆ ಸತ್ಯಾಂಶವನ್ನು ವಿಚಾರಿಸುವ ಸಲುವಾಗಿ ೩-೪ ಸಾರಿ ನಾನೇ ಸ್ವತಃ ಅಲ್ಲಿನ ಡಾಕ್ಟರ್‌ಗಳನ್ನು ವಿಚಾರಿಸಲಾಗಿ ರೋಗಿಗಳು ಹೇಳಿದ ರೀತಿಯಲ್ಲಿ ಅವರೂ ಸಹ ಸರ್ಕಾರದಿಂದ ಹಣವನ್ನು ಕೊಡುತ್ತಿಲ್ಲ, ಔಷಧಿಯನ್ನು ಎಲ್ಲಿಂದ ತರೋಣ ಎನ್ನತಕ್ಕಂತಹ ಮಾತನ್ನು ಹೇಳಿದರು. ಇದೇ ರೀತಿಯ ಪರಿಸ್ಥಿತಿ ಪ್ರತಿಯೊಂದು ಜಿಲ್ಲೆಯಲ್ಲೂ ಇರಬೇಕು. ಇದರ ಬಗ್ಗೆ ಸರ್ಕಾರ ಏನು ವಿಚಾರ ಮಾಡಿದೆ ಎಂಬುದನ್ನು ಹೇಳಬೇಕು. ಜಿಲ್ಲೆ ಯಲ್ಲಿರತಕ್ಕ ದವಾಖಾನೆಗಳು ಏನು ಇವೆ, ಅವುಗಳಿಗೆ ಔಷಧೋಪಕರಣಗಳಿಗಾಗಿ, ಅಗತ್ಯವಾಗಿರತಕ್ಕ ಹಣವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆನಂತರ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಇನ್ನೊಂದು ಸಂಗತಿಯನ್ನು ಹೇಳಿದ್ದಾರೆ. ಅದೇನೆಂದರೆ.—

> "ಗೋಣಿ ಚೀಲಗಳ ಮೇಲಿನ ಪ್ರವೇಶ ತೆರಿಗೆ ೧-೪-೧೯೮೩ ರಿಂದ ೨೮-೧೦-೧೯೮೩ರ ವರೆಗೆ ವಿನಾಯಿತಿ ನೀಡಲಾಗುವುದು. ವ್ಯಾಪಾರಿಗಳಿಗೆ ಉಂಟಾಗುವ ಕೆಲವು ತೊಂದರೆ ಗಳನ್ನು ನಿವಾರಿಸಲು ಈ ಕ್ರಮ ಕೈಗೊಳ್ಳಲಾಗಿದೆ''.

ಗೋಣಿ ಚೀಲಗಳನ್ನು ತಯಾರು ಮಾಡುವವರು ಯಾರು ? ಅದನ್ನೇನು ನಮ್ಮ ರಾಜ್ಯದಲ್ಲಿ ತಯಾರು ಮಾಡುತ್ತಾರೆಯೋ ? ಇದರಿಂದ ಕರ್ನಾಟಕ ಜನರಿಗೆ ಏನು ಅನುಕೂಲವಾಗುತ್ತದೆ ? ಈ ರೀತಿ ಗೋಣಿ ಚೀಲಗಳ ಮೇಲೆ ಪ್ರವೇಶ ತೆರಿಗೆಯಲ್ಲಿ ವಿನಾಯಿತಿಯನ್ನು ನೀಡಿರುವುದನ್ನು ನೋಡಿದರೆ ಬೇರೆ ರಾಜ್ಯ ಗಳಲ್ಲಿರತಕ್ಕವರಿಗೆ ಅನುಕೂಲ ಮಾಡುವ ದಿಸೆಯಲ್ಲಿ ಇದನ್ನು ಮಾಡಿದ್ದಾರೆಂದು ನನಗನ್ನಿಸುತ್ತದೆ. ನಂತರ ಜನತಾ ಗೃಹ ನಿರ್ಮಾಣದ ವಿಷಯವಾಗಿ ಹೇಳುವುದಾದರೆ, ಜನತಾ ಮನೆಗಳು, ಕಡಿಮೆ ವೆಚ್ಚದ ಪ್ರಾಯೋಗಿಕ ಮನೆಗಳು, ಹಾಗೂ ಗಿರಿಜನರ ಮನೆಗಳು ಈ ರೀತಿಯ ಕೆಲವು ಯೋಜನೆಗಳನ್ನು ತೆಗೆದು ಕೊಂಡು ಬಂದಿದ್ದೇವೆಂದು ಹೇಳಿದ್ದಾರೆ. ಈ ಮನೆಗಳನ್ನು ಕಟ್ಟುವ ವಿಚಾರದಲ್ಲಿ ಜನತಾ ಮನೆ ಗಳೆಷ್ಟು ? ಕಡಿಮೆ ವೆಚ್ಚದ ಪ್ರಾಯೋಗಿಕ ಮನೆಗಳೆಷ್ಟು ? ಹಾಗೂ ಗಿರಿಜನರ ಮನೆಗಳೆಷ್ಟು ಎಂಬುದರ ಬಗ್ಗೆ ವಿವರಗಳನ್ನು ಕೊಡಬೇಕು. ಹೋದ ವರ್ಷ ಎಷ್ಟು ಮನೆಗಳನ್ನು ಕಟ್ಟಿದ್ದೀರಿ, ಹೋದ ವರ್ಷ ತೆಗೆದುಕೊಂಡಂತಹ ಮನೆಗಳ ಪೈಕಿ ಇನ್ನೂ ಎಷ್ಟು ಮನೆಗಳನ್ನು ಕಟ್ಟ ಬೇಕಾಗಿದೆ ಎಂಬುದರ ಬಗ್ಗೆಯೂ ಕೂಡ ವಿವರಗಳನ್ನು ನೀಡಬೇಕು. ಬಡ್ಜೆಟ್ಟಿನಲ್ಲಿ ಏನೇನು ವಿಚಾರವನ್ನು ಹೇಳಿರುತ್ತಾರೋ ಅದನ್ನು ಕಾರ್ಯರೂಪಕ್ಕೆ ತರಬೇಕೇ ಹೊರತು ಬರೀ ಕಾಗದ ಪತ್ರಗಳನ್ನು ಜನರ ಎದುರಿನಲ್ಲಿ ಇಡುವಂತಹದ್ದು ಅಷ್ಟೊಂದು ಸೂಕ್ತವಾದುದಲ್ಲ. ಹೋದ ವರ್ಷ ಎಷ್ಟೆಷ್ಟು ಕಾರ್ಯಕ್ರಮಗಳನ್ನು ತೆಗೆದು ಕೊಂಡಿದ್ದೀರಿ. ಯಾವ ಯಾವ ಕಾರ್ಯ ಕ್ರಮಗಳ ಪೈಕಿ ಎಷ್ಟೆಷ್ಟು ಸಾಧನೆಯನ್ನು ಮಾಡಿದ್ದೀರಿ ಎಂಬುದನ್ನು ಹೇಳಬೇಕು? ಮನೆಗಳ ಬಗ್ಗೆ

ಹೇಳುವುದಾದರೆ ಹೋದ ವರ್ಷ ತೆಗೆದುಕೊಂಡಿರತಕ್ಕಂತಹ ಮನೆಗಳಿಗೆ ಈವರೆವಿಗೂ ಹಣವೇ ಬಂದಿಲ್ಲ ಎಂಬುದಾಗಿ ಸ್ಥಳೀಯ ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೂ ಈ ವರ್ಷವೂ ಪುನಃ ಮನೆಗಳನ್ನು ಕಟ್ಟುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಸರಿಯಾದುದಲ್ಲ.

ನಂತರ ಕೊಳಚೆ ಪ್ರದೇಶ ನಿರ್ಮೂಲನೆ ಬಗ್ಗೆ ಹೇಳುವುದಾದರೆ, ಇಲ್ಲಿಯವರೆಗೆ ಎಷ್ಟು ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಿದ್ದೀರಿ? ಇರತಕ್ಕಂತಹ ಬಹಳಷ್ಟು ಕೊಳಚೆ ಪ್ರದೇಶಗಳು ಇನ್ನೂ ಹಾಗೆಯೇ ಇರುವಂತಹದ್ದನ್ನು ಎಲ್ಲರೂ ನೋಡಿದ್ದೇವೆ. ಗುಲ್ಬರ್ಗದಲ್ಲಿ ಇರತಕ್ಕ ಕೊಳಚೆ ಪ್ರದೇಶ ಬಹಳಷ್ಟು ವರ್ಷಗಳಿಂದ ಹಾಗೆಯೇ ಉಳಿದುಕೊಂಡು ಬಂದಿದೆ. ಆದರೂ ಪ್ರತಿ ವರ್ಷ ಬಡ್ಜೆಟ್ಟಿನಲ್ಲಿ ಕೊಳಚೆ ಪ್ರದೇಶ ನಿರ್ಮೂಲನೆ ಮಾಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆಂದು ಹೇಳುವುದು ಒಂದು ವಾಡಿಕೆಯಾಗಿಬಿಟ್ಟಿದೆ. ಇದರ ಬಗ್ಗೆ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಯಾವುದೇ ವಿಚಾರವನ್ನು ಬಡ್ಜೆಟ್ಟಿನಲ್ಲಿ ಹೇಳಿದ ಮೇಲೆ ಅದನ್ನು ಸದನದಲ್ಲಿ ಮಂಡನೆ ಮಾಡಿದ ಮೇಲೆ ಅದನ್ನು ಕಾರ್ಯರೂಪಕ್ಕೆ ತರಬೇಕು ಹಾಗೂ ಅದನ್ನು ಪೂರ್ತಿಗೊಳಿಸಬೇಕು. ಇಲ್ಲದಿದ್ದರೆ ಜನರಿಗೆ ಮೋಸ ಮಾಡಿದ ಹಾಗೆ ಆಗುತ್ತದೆಂದು ಹೇಳಿ ಇಲ್ಲಿಯವರೆಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

SRI BLASIUS M. D. SOUZA (Mangalore).— Mr. Speaker, Sir, the Hon'ble Chief Minister has presented the Budget for the year 1987-88. What we find from the Budget that this has been more a taxing budget and the hon'ble Chief Minister has inflicted the maximum tax in this Budget when compared to the other budgets presented by him previously. We have expected a good Budget this time in view of the new Zilla Parishad and Mandal Panchayats. As you know, we have thirteen Cabinet Ministers and two State Ministers and.........

ಶ್ರೀ ಜಿ. ನಾರಾಯಣ ಕುಮಾರ್.— ಅಧ್ಯಕ್ಷರೇ, ಅವರು ಮಂಗಳೂರಿನವರು, ಕರ್ನಾಟಕದವರೇ ಅದ ಅವರಿಗೆ ಕನ್ನಡ ಬರುವುದಿಲ್ಲವೇ ? ಅಲ್ಲಿ... ..

ಅಧ್ಯಕ್ಷರು.— ಅವರು ಕನ್ನಡ ಭಾಷೆಯನ್ನು ಬಲ್ಲರು. ಕನ್ನಡದಲ್ಲಿ ಸರಿಯಾಗಿ ಭಾಷಣ ಮಾಡುವುದಕ್ಕೆ ಬರುವುದಿಲ್ಲವಾದರಿಂದ......

ಶ್ರೀ ಜಿ. ನಾರಾಯಣ ಕುಮಾರ್.— ಶೇಕಡಾ ೯೯.೯೯ ಕನ್ನಡದವರೇ ಇರುವ......

ಅಧ್ಯಕ್ಷರು.— ಮಾನ್ಯ ಡಿಸೋಜಾ ಅವರೇ ತಮ್ಮ ಮದರ್ ಟಂಗ್ ಯಾವುದು ?

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.— ಅಧ್ಯಕ್ಷರೇ, ಅವರು ನನ್ನ ಹತ್ತಿರ ಮಾತನಾಡುವಾಗ ಕನ್ನಡದಲ್ಲೇ ಮಾತನಾಡುತ್ತಾರೆ.

ಅಧ್ಯಕ್ಷರು.— ಅವರ ಮದರ್ ಟಂಗ್ ಇಂಗ್ಲೀಷ್ ಇದೆ. ಮುಂದಿನ ಸಾರಿ ಅವರು ಕನ್ನಡದಲ್ಲಿ ಮಾತನಾಡಲು ಪ್ರಯತ್ನ ಮಾಡುತ್ತಾರೆ. ಈಗ ಅವರು ಭಾಷಣ ಮುಂದುವರಿಸಲಿ.

(ಗೊಂದಲ)

ಶ್ರೀ ಎಂ. ಎಸ್. ಪಾಟೀಲ್.— ಮಾನ್ಯ ನಾರಾಯಣ ಕುಮಾರ್ ಅವರಿಗೆ ನೀವು ಏನಾದರೂ ಮಾಡಬೇಕಾಗುತ್ತದೆ. ಈ ಬಗ್ಗೆ ಮುಖ್ಯ ಮಂತ್ರಿಗಳನ್ನೂ ಕೇಳಿಕೊಳ್ಳುತ್ತೇನೆ. ಅವರು ಸುಮ್ಮನೆ ಮಾನ್ಯ ಸದಸ್ಯರನ್ನು ಡಿಸ್‌ಟರ್ಬ್ ಮಾಡುವುದು ಸರಿಯಲ್ಲ.

ಅಧ್ಯಕ್ಷರು.— ಮುಂದಿನ ಸಾರಿ ಅವರು ಕನ್ನಡದಲ್ಲಿ ಮಾತನಾಡುತ್ತಾರೆ.

ಶ್ರೀ ಜಿ. ನಾರಾಯಣ ಕುಮಾರ್.— ನಾವೂ ಅವರ ಭಾಷಣ ಏನೆಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.— ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಆರ್ಟಿಕಲ್ ೨೧೦ ಏನು ಹೇಳುತ್ತದೆ ಎಂದರೆ......

ಶ್ರೀ ಜಿ. ನಾರಾಯಣ ಕುಮಾರ್.— ಅವರು ನನ್ನ ಹತ್ತಿರ ಪ್ರತಿನಿತ್ಯ ಕನ್ನಡದಲ್ಲಿ ಮಾತನಾಡುತ್ತಾರೆ. ಅವರಿಗೆ ಕನ್ನಡ ಗೊತ್ತಿದೆ.

ಅಧ್ಯಕ್ಷರು.— ಅವರಿಗೆ ಕನ್ನಡದಲ್ಲಿ ಭಾಷಣ ಮಾಡುವುದಕ್ಕೆ ಸರಿಯಾಗಿ ಬರುವುದಿಲ್ಲ ವೆಂದು ಹೇಳಿ.....

ಶ್ರೀ ಜಿ. ನಾರಾಯಣ ಕುಮಾರ್.— ರಾಜ್ಯದಲ್ಲಿ ನೂರಕ್ಕೆ ೯೯ ಭಾಗ ಕನ್ನಡವನ್ನೇ ಬಳಸುತ್ತಾ ಬಂದಿರುವಾಗ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು ಆ ಬಗ್ಗೆ ಬಲಾತ್ಕಾರ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಎ. ಉಮರಬ್ಬ.— ಹಾಗಾದರೆ ನಾವು ತುಳು ಭಾಷೆಯಲ್ಲಿ ಮಾತನಾಡಬಹುದಲ್ಲವೇ ,

ಶ್ರೀ ಜಿ. ನಾರಾಯಣ ಕುಮಾರ್.— ತುಳು ಹಾಗೂ ಕೊಂಕಣಿ ಭಾಷೆಗಳಿಗೆ ಲಿಪಿಯೇ ಇಲ್ಲ? ಕನ್ನಡದ ಲಿಪಿ ಬಳಕೆಯಲ್ಲಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಅಧ್ಯಕ್ಷರೇ, ಸ್ವಲ್ಪ ಮಾನ್ಯ ನಾರಾಯಣ ಕುಮಾರ್ ಅವರನ್ನು ಸುಮ್ಮನಿರಿಸುವ ಬಗ್ಗೆ ಮುಖ್ಯ ಸಚೇತಕರಿಗೆ ಹೇಳಿ.

ಶ್ರೀ ಜಿ. ನಾರಾಯಣ ಕುಮಾರ್.— ತಮ್ಮ ಆದೇಶವನ್ನು ಅವರು ಪಾಲಿಸಬೇಕು. ಕರ್ನಾಟಕದ ರಾಜಧಾನಿ ಇದು.

(ಗೊಂದಲ)

ಅಧ್ಯಕ್ಷರು.— ತಾವೆಲ್ಲರೂ ಕುಳಿತುಕೊಳ್ಳಿ. ಆರ್ಟಿಕಲ್ ೨೧೦ ಏನು ಹೇಳುತ್ತದೆಂದರೆ.

" Notwithstand anything in Part XVII, but subject to the provisions of article 348, business in the Legislature or a State shall be trsnsacted in the official language or languages of the State or in Hindi or in English."

೬-೦೦ ಪಿ. ಎಂ.

ಶ್ರೀ ಜಿ. ನಾರಾಯಣ ಕುಮಾರ್.— ಸ್ವಾಮಿ, ತಾವು ಏನು ಓದುತ್ತೀರೋ ನನಗೆ ಗೊತಾಗಲಿಲ್ಲ ಬಯ್ತೀರೋ ಏನೋ ತಿಳಿಯಲಿಲ್ಲ.

ಅಧ್ಯಕ್ಷರು.— ೨೧೦ನೇ ಆರ್ಟಿಕಲ್ ಪ್ರಕಾರ ಯಾವುದೇ ಒಬ್ಬ ಸದಸ್ಯರು ಶಾಸನಸಭೆಯಲ್ಲಿ ರಾಜ್ಯದ ಭಾಷೆಯಲ್ಲಾಗಲೀ, ಹಿಂದಿ ಭಾಷೆಯಲ್ಲಾಗಲೀ, ಅಥವಾ ಇಂಗ್ಲೀಷ್ ಭಾಷೆಯಲ್ಲಾಗಲೀ ಮಾತನಾಡಬಹುದು.

ಶ್ರೀ ಜಿ. ನಾರಾಯಣ ಕುಮಾರ್.— ಅದು ಕನ್ನಡ ಭಾಷೆ ಬರದೇ ಇದ್ದರೆ.

ಅಧ್ಯಕ್ಷರು.— ಈ ಮೂರೂ ಭಾಷೆಗಳು ಸ್ಪಷ್ಟವಾಗಿ ಬಾರದೇ ಇದ್ದರೆ ಅವರ ಮಾತೃಭಾಷೆ ಅದು ಉರ್ದು ಇರಲಿ, ಇನ್ನೊಂದೇ ಇರಲಿ ಮಾತನಾಡಬಹುದು ಎಂದು ಇದೆ.

ಶ್ರೀ ಜಿ. ನಾರಾಯಣ ಕುಮಾರ್.— ಶ್ರೀ ಜೆ. ಹೆಚ್. ಪಾಟೀಲರು ಲೋಕಸಭಾ ಸದಸ್ಯರಾಗಿ ಮಾತನಾಡುವಾಗ ಅದನ್ನು ತರ್ಜುಮೆ ಮಾಡಿದರು. ಕೇಂದ್ರದಲ್ಲೇ ಇಷ್ಟು ಮಾನ್ಯತೆ ಕೊಟ್ಟಿದ್ದಾರೆ. ಇಲ್ಲಿ ಇವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ. ಹಾಗಾದರೆ ಅವರ ಭಾಷಣವನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿ.

ಅಧ್ಯಕ್ಷರು.— ನೀವು ಕೂಡಿ. ನಾನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಸದಸ್ಯರು ಮಾತನಾಡುವಾಗೆಲ್ಲಾ ತೊಂದರೆ ಮಾಡುತ್ತಿದ್ದಾರೆ ಈ ಮಾನ್ಯ ನಾರಾಯಣ ಕುಮಾರ್‌ರವರು ಈ ಸಭೆಗೆ ಇವರೊಬ್ಬರೇ ಚಾಂಪಿಯನ್ ಅಂತ ತಿಳಿದುಕೊಂಡುಬಿಟ್ಟಿದ್ದಾರೆ,

ಶ್ರೀ ಜಿ. ನಾರಾಯಣ ಕುಮಾರ್.— ಅವರಿಗೆ ಕನ್ನಡ ಬರುವುದಿಲ್ಲವೇ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇವರು ಯಾರು ತಮಗೆ ಡಿಕ್ಟೇಟ್ ಮಾಡುವುದಕ್ಕೆ ? ಇವರೂ ನಮ್ಮ ಹಾಗೆ ಒಬ್ಬ ಸದಸ್ಯರು.

ಶ್ರೀ ಜಿ ನಾರಾಯಣ ಕುಮಾರ್.— ಇಂಗ್ಲೀಷ್‌ನಲ್ಲಿ ಮಾತನಾಡಿದರೆ ಹೇಗೆ ಸ್ವಾಮಿ ಇವರಿಗೆ ಅಧಿಕಾರ ಬೇಕು, ಎಂ. ಎಲ್. ಎ. ಆಗಬೇಕು, ಮುಖಂಡರು ಆಗಬೇಕು. ನೀವೇ ಹೇಳಿ ಸ್ವಾಮಿ?

(ಗೊಂದಲ)

ಅಧ್ಯಕ್ಷರು.— ಮಾನ್ಯ ಡಿಸೋಜಾರವರೇ, ನೀವು ಮಾತನಾಡಿ.

ಶ್ರೀ ಜಿ. ನಾರಾಯಣ ಕುಮಾರ್.— ಸಮಸ್ಯೆ ಬಗೆಹರಿಯಲಿಲ್ಲವಲ್ಲ ಸ್ವಾಮಿ. ಕನ್ನಡ ಆಡಳಿತ ಭಾಷೆಯಾಗಿ ಘೋಷಣೆಯಾದ ಮೇಲೆ ಅವರು ಕನ್ನಡದಲ್ಲಿ ಮಾತನಾಡದಿದ್ದರೆ ಹೇಗೆ ? ಅವರು ಮಾತನಾಡುವುದು ನಮಗೆ ತಿಳಿಯುವುದು ಬೇಡವೇ ? ಯಾರಿಂದಲಾದರೂ ತರ್ಜುಮೆ ಮಾಡಿಸಿ ನನಗೆ ತಿಳಿಸಿ.

ಅಧ್ಯಕ್ಷರು.— ನೀವು ಕೂಡಿರಿ.

ಶ್ರೀ ಜಿ. ನಾರಾಯಣ ಕುಮಾರ್.— ಕನ್ನಡದಲ್ಲಿ ಮಾತನಾಡಿ ಎಂದು ದೊಡ್ಡ ಮಾತನ್ನು ಹೇಳಿ.

ಅಧ್ಯಕ್ಷರು.— ಮುಂದಿನ ಸಾರಿ ಕನ್ನಡದಲ್ಲಿ ಭಾಷಣ ಮಾಡುವಂತೆ ನಾನು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಗೊತ್ತಿರುವ ಭಾಷೆಯಲ್ಲಿ ಅವರು ಮಾತನಾಡುತ್ತಾರೆ.

ಅಧ್ಯಕ್ಷರು.— ಮಾತೃಭಾಷೆಯಲ್ಲಿ ಮಾತನಾಡುವುದಕ್ಕೆ ಹಕ್ಕಿದ್ದರೂ, ಇವರು ಕೂಡ ಕನ್ನಡ ಕಲಿಯಲಿ ಎಂದು ಶ್ರೀ ನಾರಾಯಣ ಕುಮಾರ್ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇವರಿಂದ ಏನೂ ಕಲಿಯಬೇಕಾಗಿಲ್ಲ. ಪ್ರತಿಯೊಂದಕ್ಕೂ ಯಾವಾಗಲೂ ಪಬ್ಲಿಸಿಟಿಗೋಸ್ಕರ ಹೀಗೆ ಮಾಡಿದರೆ ಬಹಳ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಬಿ. ಎಂ. ಉಮರಬ್ಬ.— ಜಿಲ್ಲಾಪರಿಷತ್ತಿನ ಅನೇಕ ಮುಖ್ಯ ಕಾರ್ಯದರ್ಶಿಗಳಿಗೆ ಕನ್ನಡ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದನ್ನು ಬಹಳ ಲಘುವಾಗಿ ತಾವು ತೆಗೆದುಕೊಳ್ಳುತ್ತಿದ್ದೀರಿ.

ಶ್ರೀ ಜಿ. ನಾರಾಯಣ ಕುಮಾರ್.— ಅವರಿಗೆ ಕನ್ನಡ ಬರುವುದಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇಲ್ಲಿ ನೀವು ಒಬ್ಬರೇ ಏನು ಕನ್ನಡದ ಬಗ್ಗೆ ಕಂಟ್ರಾಕ್ಟ್ ಹಿಡಿದಿದ್ದೀರಾ ? ಈ ಸದನದಲ್ಲಿ......

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.— ನೋಡಿ ಸ್ವಾಮಿ. ಎಷ್ಟು ಉದ್ಧಟತನದಿಂದ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಅಧ್ಯಕ್ಷರೇ, ಇಂತಹ ಸದಸ್ಯರಿಗೆ ತಾವು ವಾರ್ನಿಂಗ್ ಕೊಡಬೇಕು. ನಾವು ಇಲ್ಲಿ ಮಾತನಾಡುವುದೇ ಬೇಡವೇ ? ನಮಗೂ ಕನ್ನಡದ ಬಗ್ಗೆ ಅಭಿಮಾನ ಇದೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.-- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ನಾರಾಯಣ ಕುಮಾರ್ ಅವರಿಗೆ ಕನ್ನಡ ಅಭಿಮಾನ ಇದೆ. ಹಾಗೆಯೇ ನಮ್ಮೆಲ್ಲರಿಗೂ ಕನ್ನಡದ ಬಗ್ಗೆ ಅಭಿಮಾನ ಇದೆ. ನಾವು ಮನೆಯಲ್ಲಿ ಮಾತನಾಡುವುದು ತುಳು ಭಾಷೆಯಾದರೂ ಕೂಡ ಇಲ್ಲಿ ಕನ್ನಡದಲ್ಲಿಯೇ ಮಾತನಾಡುತ್ತೇವೆ. ಆದರೆ ಒಬ್ಬರು ಇದನ್ನು ಹೆಚ್ಚು ಪ್ರದರ್ಶನ ಮಾಡಿದರೆ ಏನಾಗುತ್ತದೆ ? ಕನ್ನಡದ ಬಗ್ಗೆ ಜನ ಅಸಹ್ಯಪಡುವಂಥ ರೀತಿಯಲ್ಲಿ ಪ್ರಚಾರ ಮಾಡಬಾರದು. ಕನ್ನಡದ ಬಗ್ಗೆ ಎಷ್ಟು ಗೌರವ, ಅಭಿಮಾನ ಇರಬೇಕೋ ಅಷ್ಟು ಇದ್ದರೆ ಅದಕ್ಕೆ ಪ್ರಾಮುಖ್ಯತೆ ಬರುತ್ತದೆ. ಮಾನ್ಯ ಸದಸ್ಯರು ಒಂದು ಮಾತು ಹೇಳಿದರು, ಅದೇನೆಂದರೆ, ಬಹಳ ಉದಟತ್ವನದಿಂದ ಮಾತನಾಡುತ್ತಾರೆಂದು ಹೇಳಿದ್ದಾರೆ. ತಾವು ದಯಮಾಡಿ, ಅದನ್ನು ಕಡತದಿಂದ ತೆಗೆದುಹಾಕಬೇಕು. ಈ ಮಾತು ಅವರಿಗೆ ಶೋಭೆ ತರುವುದಿಲ್ಲ. ಮಾನ್ಯ ಡಿಸೋಜಾರವರೂ ಕೂಡ ಸ್ಪಷ್ಟವಾದ ಇಂಗ್ಲಿಷಿನಲ್ಲಿ ಮಾತನಾಡುತ್ತಾರೆ. ಅವರ ಇಂಗ್ಲೀಷ್ ಕೇಳುವುದಕ್ಕೂ ಸೊಗಸಾಗಿರುತ್ತದೆ. ಭಾಷೆ ಯಾವುದಾದರೂ, ಆದರ ಸೊಗಸು ಮುಖ್ಯ. ಅದು ಕೇಳುವುದಕ್ಕೂ ಇಂಪಾಗಿರುತ್ತದೆ. ಸದನಕ್ಕೂ ಶೋಭೆ ಬರುತ್ತದೆ ಅವರು ಕನ್ನಡದಲ್ಲಿ ಮಾತನಾಡಬೇಕು ಎಂದು ಪ್ರತಿಭಟನೆ ತೋರಿಸಿದರು......

ಶ್ರೀ ಜಿ. ನಾರಾಯಣ ಕುಮಾರ್.-- ಮಾನ್ಯ ಮೊಯ್ಲಿಯವರು, ಆ ಮಾತು ಹೇಳಬಾರದು.

ಅಧ್ಯಕ್ಷರು.-- ಮಾನ್ಯ ಡಿಸೋಜಾರವರೇ ಈಗ ತಾವು ಮಾತನಾಡಿ.

SRI BLASIUS M. D' SOUZA.—Mr. Speaker, Sir, when the Hon. Chief Minister presented the Budget in 1983-84, he said, Budget is not a mere catalogue of programmes, and the Budget should reflect the problems of the people and the measures taken to solve them. Unfortunately, we can see this Budget is only a lifeless statistics. Absolutely there is no programme for the poorer, no programme for the labourer and no programme for the fishermen. In the earlier budgets, our Hon. Chief Minister used to give some programme to the poor people. Unfortunately, today this Budget has inflicted the maximum tax, ever taxed in the History of Karnataka. We find that this Budget is only a jugglery of figures. There is no programme regarding Housing and Health which are important in this year. This Budget is merely a taxing budget. They have taxed coffee, tea and even Supari which is practically unsold in the markets at Mangalore and other places. I would say that when budget is brought out they should know the reality of the business which is in the Karnataka State and in view of the business the taxation should be done. Unfortunately, we find that every bit of it is taxed and Rs. 145.54 crores has been taxed this year.

Sir, this year has been declared as "International Year of the Shelter for Homeless" but I regret to say that there is no programme from this State regarding Housing. It is only stated here that 81,280 houses will be constructed in Karnataka. But surprisingly Sir, from the last 3 years there has been no HUDCO programme. Wherever there have been HUDCO houses, the Programme has been financed by other agencies.

Unfortunately we find that, in the International year of Shelter only 600 houses how been programmed for 1987-88. I should say

that the Chief Minister has not prepared this Budget. If the Hon'ble Chief Minister had prepared this budget, these lines would not have come in the Budget which says. "the Regional Development Centre, Gnana Bharathi, Bangalore is preparing a Monogram." and so on. Instead of giving such a programme, you could have stated as to how to finance the houses, how to give loans to the poor people to construct houses, Instead the Government is thinking of preparing only a monogram. I don't think that by preparing a monogram, you can give a house to a person who does not have a shelter.

Regarding housing, even the Bangalore Development Authority is not interested in giving sites to the people who apply for sites. I came to know that the Bangalore Development Authority has taken a decision to allot the lands in Mathikere, Rajamahal Second Stage, to Preetam Apartments, instead of forming lay-outs and allotting them to the applicants who have deposited Rs. 20,000/- about ten years back. Now the above said apartment builders are selli g the same. I wonder as to how the Government can do such a deal when the people have deposited Rs. 20.0C0/- about ten years back. What role the said Apartment builders have got in the lands acquired by the Bangalore Development Authority. When such being the case, the Government is not interested in allotting the houses to the poor people. Unfortunately I heard that the Government is thinking of re-conveying of some acres of land in Rajmahal Second Stage which are already taken possession of. If that is the case. I would request the Hon'ble Chief Minister to see that the lands should not be re-conveyed to the people and all those lands should be distributed to the people who have no houses.

Sir, it is stated in the Budget, "to achieve the objective of health for all by 2000 A.D., we propose to take a positive step by introducing a Health Insurance Scheme. I am sure everybody know, that we are getting a very poor treatment in the Government hospitals By this Health Insorance Scheme, no purpose will be served. I am of the opinion that unless we go to the roots of it, we will not be able to give health for all by 2000 A.D. If we go to the temples, mosques, churches, we see so many leppers begging alms. We have done nothing for them. I would request that these lepppers should be housed first. There is Begger Cess from 1977 being collected, So far, there has been no boeggar house except in Bangalore. I would request the Hon'ble Minister for Urban Development to see that at least during this year. "Beggar Homes" are built in every area of Municipality and the Corporation. There are lakhs of Rupees of Beggar Cess lying with the Municipalities and Corporations and no Corporation or Municipality has built up a Beggar-Home.

Sir, regarding taxes, I don't want to sheak at length. But I would like to say that the taxes which have been proposed are very high. I would request the Hon'ble Chief Minister, atleast to remove the taxes or reduce the taxes on Coffee, Tea and many other things which are put to day-to-day use by the people Regarding turn-over tax, the same has been decreased from 15 lakhs to five lakhs saying that the merchants class are dividing the business, thus avoiding turn-over tax. This is not true As regards Entry Tax, the same has been increased from one per cent to 2 percent and the salary limit for the purpose of profession tax has been increased from Rs. 1,200/- per month to Rs. 2,000/-per month including Dearness Allowance and other employments. The Hon'ble Chief Minister in his Budget speech for the year 1983-84 had stated that regarding Professional Tax, the Municipalities and the Corporations are finding it very difficult to raise resources for meeting their expenditure and therefore a share of this Tax should go to the Munitcpalities and Corporations. Professional Tax has been collected by the Government since 1975-76 and no share of it goes to the Corporations or the Municipalities. I would request the Hon'ble Chief Minister to see that this Tax goes to the Municipalities and Corporations.

Sir, regarding Karnataka Urban Water Supply and Drainage Board, yesterday the Hon'ble Minister for Urban Development stated that there are arrears to the Board to the tune of 24.47 crores. In Mangalore Municipal Corporation, the Karnataka Urban Water Supply Drainage Board has enhanced its capacity from 9 Million Gallons to 18 Millions Gallons. In the month of April, May there will be no sufficient water in Nethravathi and they will not be able to pump 18 Millions Gallons of Water. When we approached the Board in this connection they tell us that they have no funds and that they require atleast 135 lakhs have the Dam constructed. I would request the Hon'ble Minister to release Rs. One Crore and thirty five lakhs immediately so that a vented Dam could be constructed in Mangalore and they are able to supply 18 Million Gallons of water to the Mangalore Municipal Corporation and other bodies.

Sir, regarding Motor Vehicle taxes, every year there has been an increase and unfortunately the Corporations and Municipalities are not getting any compensation and I am sorry to say that the Mangalore Municipal Coporation is getting only Rs. 24,429/-in lieu of toll-gate being removed. When they are collecting 8 crores, they are getting only Rs. 24,429/- I would request the Hon'ble Minister for Urban Development to see that the share of Municipalities and the Corporations are proportionately increased in these taxes and these taxes are included to the Corporations and Municipalities.

As very little time is available since more time has been taken by hon"ble Member Sri Narayan Kumar, I would like to thank the Hon'ble Speaker for giving this opportunity to speak. Onceagain, I would request the Hon'ble Chief Minister to re-consider the taxes and to be realistic while taxing the middle-classpoor people.

ಶ್ರೀ ಪಟ್ಟಮಂಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ತಮ್ಮ ಕೃಪೆಯಿಂದ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಬಡ್ಜೆಟ್‌ನಲ್ಲಿ ನನಗೆ ಕಂಡು ಬಂದಂತಹ ಕೆಲವು ವಿಚಾರಗಳ ಬಗ್ಗೆ ನನ್ನ ವಿರೋಧವನ್ನು ವ್ಯಕ್ತಪಡಿಸಿ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಬಡ್ಜೆಟ್‌ನ್ನು ಏನು ಮಂಡಿಸಿದ್ದಾರೋ ಅದರಲ್ಲಿ ನಾನು ಬಹಳಷ್ಟು ನಿರೀಕ್ಷೆಯನ್ನಿಟ್ಟುಕೊಂಡಿದ್ದೆ. ಬಹಳಷ್ಟು ಆಶಾಭಾವನೆಯನ್ನು ಹೊಂದಿದ್ದೆ. ಆದರೆ ಆ ರೀತಿ ಬಡ್ಜೆಟ್‌ನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಲಿಲ್ಲ. ಈ ಬಡ್ಜೆಟ್‌ನಿಂದ ಕರ್ನಾಟಕ ರಾಜ್ಯದ ಬಡ ಜನತೆಗೂ ಕರ್ನಾಟಕ ರಾಜ್ಯದ ರಾಜಕೀಯ ಚಿಂತಕರಿಗೂ ಮತ್ತು ಈ ಸದನದ ಎಲ್ಲಾ ಸದಸ್ಯರಿಗೂ ಕೂಡ ಅವರು ನಿರೀಕ್ಷೆ ಮಾಡಿದ್ದ ರೀತಿಯಲ್ಲಿ ಇಲ್ಲ. ಈ ಬಡ್ಜೆಟ್‌ನಲ್ಲಿ ರಾಮನ ದೃಢತೆಯಾಗಲಿ ಕೃಷ್ಣನ ಕ್ರಿಯಾಶೀಲತೆಯಾಗಲಿ ಎರಡೂ ಇಲ್ಲದಂತಹ ಶೂನ್ಯವಾದ ಬಡ್ಜೆಟ್ ಆಗಿದೆ. ಶಯನಾಮ ಸಂವತ್ಸರದ ಕೊನೆಯ ಭಾಗದಲ್ಲಿ ಬಡ್ಜೆಟ್‌ನ್ನು ಮಂಡಿಸಿರತಕ್ಕಂಥ ಮಂತ್ರಿ ಮಂಡಲ ಮತ್ತು ಮಂತ್ರಿ ಮಂಡಲದ ನಾಯಕರ ಮೇಲೆ ಏನಾದರೂ ಪ್ರಭಾವ ಬೀರಿದೆಯೋ ಏನೋ ಎನ್ನುವ ಸಂಶಯ ನನಗೆ ಇದೆ. ಈ ಬಡ್ಜೆಟ್ ಪುಸ್ತಕದಲ್ಲಿ ಕೆಲವು ಅಲಂಕಾರಿತ ಪದಗಳನ್ನು ಹಾಗೂ ವಾಕ್ಯಗಳನ್ನು ಬರೆದಿದ್ದಾರೆ. ಮತ್ತು ಜನರನ್ನು ದಾರಿ ತಪ್ಪಿಸತಕ್ಕಂಥ ಹಲವಾರು ವಿಷಯಗಳನ್ನು ಈ ಬಜೆಟ್ ಭಾಷಣದಲ್ಲಿ ನಾನು ಕಂಡಿದ್ದೇನೆ. ನಾನು ಹೆಚ್ಚು ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಕಾರಣ ಇಷ್ಟೇ, ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ಮಾನ್ಯ ಬಸವಲಿಂಗಪ್ಪನವರು ಹೇಳಿದ ಮಾತುಗಳನ್ನು ಕೇಳಿ ಈ ರಾಜ್ಯದ ಬಜೆಟ್ ರೂಪಿಸಿರತಕ್ಕಂಥ ನಾಯಕರು ಪ್ರಗತಿಯಿಂದ ಅದೆಷ್ಟು ದೂರ ಇದ್ದಾರೆ ಎಂದು ಗೊತ್ತಾಯಿತು. ಕೇಂದ್ರ ಸರ್ಕಾರ ಮಾಡಿರತಕ್ಕಂಥ ಸಹಾಯವನ್ನು ಇವರು ಬಚ್ಚಿಟ್ಟು ಕೇವಲ ತಮ್ಮ ಹೊಗಳಿಕೆಯನ್ನು ಇದರಲ್ಲಿ ಪ್ರಕಟ ಮಾಡಿದ್ದಾರೆ. ಇದನ್ನು ನಾನು ನೋಡಿ ವಿಸ್ಮಯಗೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಲಿಕ್ಕೆ ಇಷ್ಟಪಡುತ್ತೇನೆ. ಈ ಬಜೆಟ್ ಭಾಷಣದ ಪುಸ್ತಕದ ಹತ್ತನೇ ಪುಟದಲ್ಲಿ ಗ್ರಾಮೀಣ ಜನತೆಯ ಸಾಲದ ಅವಶ್ಯಕತೆಗಳನ್ನು ನಿರ್ಧರಿಸುವ ಸಲುವಾಗಿ ಗ್ರಾಮೀಣ ಸಾಲ ಸಮೀಕ್ಷೆಯೊಂದನ್ನು ಈಗಾಗಲೇ ಕೈಗೊಂಡಿದೆ. ಈ ಅಧ್ಯಯನವು ರಾಜ್ಯದ ಒಟ್ಟು ಜನಸಂಖ್ಯೆಯ ೧/೫ ಭಾಗವನ್ನು ಒಳಗೊಳ್ಳುತ್ತದೆ. ಈ ಕಾರ್ಯ ಇಡೀ ರಾಜ್ಯದಲ್ಲಿ ಐದು ವರ್ಷಗಳಲ್ಲಿ ಪೂರ್ಣಗೊಳ್ಳುತ್ತದೆ. ಈ ಯೋಜನೆಗೆ ನೆರವು ಕೋರಿ ಅದನ್ನು ಪ್ರಧಾನ ಮಂತ್ರಿಗಳು ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಿಗೆ ಕಳುಹಿಸಿಕೊಡಲಾಗುತ್ತಿದೆ. ಎಂದು ಹೇಳಿದ್ದಾರೆ. ಅದನ್ನು ಹೀಗೆ ಹೇಳತಕ್ಕ ಅವಶ್ಯಕತೆ ಇರಲಿಲ್ಲ ಏಕೆಂದರೆ, ಈಗಾಗಲೇ ಹಳ್ಳಿಗಳಲ್ಲಿ ಪ್ರತಿ ನಾಡ ಹೋಬಳಿಗಳಲ್ಲಿ ಸರ್ವೆ ಆಗಿರತಕ್ಕಂಥ ವಿಚಾರ ಎಲ್ಲರಿಗೂ ಗೊತ್ತಿದೆ. ಜನರು ತಮ್ಮ ಕುಟುಂಬಕ್ಕೆ ಬೇಕಾಗಿರತಕ್ಕಂಥ ಸಾಲಗಳನ್ನು ಪಡೆಯಲು ಅಧಿಕಾರಿಗಳಿಗೆ ಮನದಟ್ಟು ಮಾಡಿದ್ದಾರೆ. ಈ ಬಜೆಟ್‌ನ್ನು ನೋಡಿದರೆ, ಯೋಜನೆಗಳನ್ನು ಸಿದ್ಧಮಾಡಿ ಕೇಂದ್ರಕ್ಕೆ ಕಳುಹಿಸಲಾಗುತ್ತದೆ. ಕೇಂದ್ರದವರು ಒಪ್ಪಿಗೆ ಕೊಟ್ಟರೆ ರಾಜ್ಯ ಸರ್ಕಾರ ಹಣವನ್ನು ಖರ್ಚು ಮಾಡುತ್ತದೆಂದು ಹೇಳಿದ್ದಾರೆ. ಇದರಿಂದ ಬಡ ಹಳ್ಳಿ ಜನತೆಗೆ ಒಂದು ರೀತಿಯ ಆಸೆಯನ್ನು ಇವರು ಮೂಡಿಸಿದ್ದಾರೆ. ಬಡವರಿಗೆ ಈ ರೀತಿಯ ಆಸೆಗಳನ್ನು ಹುಟ್ಟಿಸುವ ಅವಶ್ಯಕತೆ ಇರಲಿಲ್ಲವೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ತೀರ್ಮಾನವನ್ನು ತೆಗೆದುಕೊಂಡು ಬಡವರ ಗುಡಿಸಿಲಿನ ಹತ್ತಿರ ಹೋಗಿ ಸೌಲಭ್ಯಗಳನ್ನು ತಲುಪಿಸಬೇಕೆಂದು ನಾನು ಹೇಳಲಿಚ್ಛಿಸುತ್ತೇನೆ. ಇಷ್ಟೇ ಅಲ್ಲ, ಇನ್ನೂ ಹೇಳಿದ್ದಾರೆ. ಪುಟ ಹನ್ನೆರಡರಲ್ಲಿ, 'ಕೆಲವೊಂದು ಹೊಂದಾಣಿಕೆಗಳ ಮೂಲಕ ಹಾಗೂ ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆಯ ಮೂಲಕ ಹೆಚ್ಚು ಹಣ ಯೋಜನಾ ಆಯೋಗದ ಅನುಮೋದನೆಯನ್ನು ನಿರೀಕ್ಷಿಸಿ ಒದಗಿಸಲು ನಾನು ತೀರ್ಮಾನಿಸಿದ್ದೇನೆ. ಹೀಗಾಗಿ ಯೋಜನಾ ವೆಚ್ಚವು ೯೧೭ ಕೋಟಿ ರೂಪಾಯಿಯಾಗಲಿದೆ. ನಮಗಿರುವ ಅನಿವಾರ್ಯತೆಯನ್ನು ಯೋಜನಾ ಆಯೋಗವು ಮನಗಂಡು ಈ ಹೆಚ್ಚಿನ ವೆಚ್ಚಕ್ಕೆ ಅನುಮೋದನೆ ನೀಡುತ್ತದೆಂಬ ಭರವಸೆ ನನಗಿದೆ' ಎಂದು ಹೇಳಿದ್ದಾರೆ. ಈ ಮಾತು ನನಗೆ

ಖಂಡಿತವಾಗಿ ಅರ್ಥವಾಗಿಲ್ಲ. ಇದರ ತಾತ್ಪರ್ಯ ಏನು ? ಈ ಮಾತನ್ನು ಯಾವ ಉದ್ದೇಶಕ್ಕೋಸ್ಕರ ಹೇಳಿದ್ದಾರೆ ? ಜನಗಳಿಗೆ ದಾರಿತಪ್ಪಿಸತಕ್ಕಂಥ ದೃಷ್ಟಿಯಲ್ಲಿ ಇದನ್ನು ಹೇಳಿದ್ದಾರೋ ಅಥವಾ ಯಾವ ಉದ್ದೇಶಕ್ಕೆ ಇದನ್ನು ಹೇಳಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ, ಹಣ ಕೇಂದ್ರದಿಂದ ಸಿಕ್ಕಿದರೆ ಮಾತ್ರ ಇದನ್ನು ಮಾಡುತ್ತೇವೆ ಇಲ್ಲದಿದ್ದರೆ ಇದನ್ನು ಕೈಬಿಡುತ್ತೇವೆ ಎಂಬ ಮಾತನ್ನು ಇವರು ಹೇಳಿದಂತಾಗುತ್ತದೆ. ಇವರು ಅಡ್ಡಗೋಡೆಯ ಮೇಲೆ ದೀಪ ಇಡತಕ್ಕಂಥ ಹಾರಿಕೆ ಮಾತುಗಳನ್ನು ಹೇಳಿದ್ದಾರೋ ಅಥವಾ ಅಲಂಕಾರಕ್ಕಾಗಿ ಈ ಪದಪುಂಜಗಳನ್ನು ಬಳಸಿದ್ದಾರೋ ಗೊತ್ತಾಗುತ್ತಿಲ್ಲ. ಇವರ ಮಾತುಗಳು ಜನಗಳಿಗೆ ದಾರಿತಪ್ಪಿಸತಕ್ಕರೀತಿ ಇವೆಯೆಂದು ನಾನು ಭಾವಿಸುತ್ತೇನೆ, ಇನ್ನೊ ಒಂದು ವಿಚಾರ ಏನೆಂದರೆ, ಇವರ ಪ್ರಚಾರಕ್ಕೋಸ್ಕರ ಸರ್ಕಾರದಿಂದ ಖರ್ಚು ಮಾಡಿರುವ ಹಣ ಬಹಳವಾಗಿದೆ. ಈ ಪುಸ್ತಕಗಳನ್ನು ನೋಡಿದರೆ (ಪುಸ್ತಕಗಳನ್ನು ಸದನಕ್ಕೆ ತೋರಿಸಿದರು) ಇವರು ಎಷ್ಟು ಹಣವನ್ನು ಇದಕ್ಕಾಗಿ ಖರ್ಚು ಮಾಡಿದ್ದಾರೆಂದು ಗೊತ್ತಾಗುತ್ತದೆ. ಈ ಪುಸ್ತಕಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡಲ್ಲೂ ಮುದ್ರಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಹೊಗಳಿಕೆಯು ಈ ಪುಸ್ತಕಗಳಲ್ಲಿ ಪ್ರ ಟವಾಗಿವೆ. ಜನಗಳನ್ನು ಮೆಚ್ಚಿಸಲಿಕ್ಕೋಸ್ಕರ ಈ ಪುಸ್ತಕಗಳನ್ನು ಪ್ರಕಟ ಮಾಡಿದ್ದಾರೆಂದು ನಾನು ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಈ ಪುಸ್ತಕಗಳನ್ನು ತಮ್ಮ ಮುಂದೆ ಇಡಲಿಕ್ಕೆ ನಾನು ಇಷ್ಟಪಡುತ್ತೇನೆ. ಇವರು ಆಡಳಿತ ಮಾಡುವುದಕ್ಕೆ ಬಂದ ನಾಲ್ಕು ವರ್ಷಗಳಲ್ಲಿ ಏನೇನು ಸಾಧನೆ ಮಾಡಿದ್ದಾರೆಂದು ತಿಳಿಸಿದ್ದಾರೆ. ಅದರಲ್ಲಿ ಒಂದು ವಿಷಯ ಈ ರೀತಿ ಇದೆ. "ಬೆಂಗಳೂರು ನಗರದಲ್ಲಿ ಹಿಂದೆ ಇದ್ದಂತಹ ಹಾದಿ ಬೀದಿಯಲ್ಲಿ ಪುಂಡರ ಪ್ರತಾಪ ಮೆರೆಯುತ್ತಿರುವುದು ಈಗ ಕಾಣುತ್ತಿಲ್ಲ" ಎಂದು ಹೇಳಿದ್ದಾರೆ. ಅಧ್ಯಕ್ಷರೇ, ಈ ಮಾತು ಸತ್ಯಕ್ಕೆ ದೂರವಾದ ವಿಚಾರವಾಗಿದೆ. ಮೊನ್ನೆ ತಾನೆ, ಕೋತ್ವಾಲ ರಾಮಚಂದ್ರನ ಸಹಚರನೊಬ್ಬನು ಹಾಡು ಹಗಲಲ್ಲೇ ಕೊಲೆಯಾಗಿರತಕ್ಕಂಥ ಭೀಕರ ದೃಶ್ಯವನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಇನ್ನೂ ಸ್ವಲ್ಪ ಮುಂದೆ ಹೋಗಿ ನೋಡಿದರೆ, ರೈತರುಗಳಿಗೆ ಸಂಪೂರ್ಣವಾಗಿ ಈ ಸರ್ಕಾರ ಅನುಕೂಲ ಮಾಡಿಕೊಟ್ಟಿದೆ ಎಂದು ಹೇಳಿದ್ದಾರೆ. ರೈತರುಗಳು ಸಹಕಾರಿ ಬ್ಯಾಂಕುಗಳಿಂದ ಪಡೆದ ಸಾಲವನ್ನು ಮರುಪಾವತಿ ಮಾಡದೇ ವಿಳಂಭವಾಗಿರುವುದಕ್ಕೆ ರೈತರ ಮನೆಗಳನ್ನು ಜಪ್ತಿ ಮಾಡುತ್ತಿದ್ದಾರೆ.

ರೈತರ ಮನವಿಗಳು ಬೆಲೆ ಇಲ್ಲದವುಗಳಾಗಿವೆ. ಅವರ ಕಷ್ಟಕ್ಕೆ ಕಿವಿ ಕೊಡುವವರು ಇಲ್ಲಾ. ಅತೀ ಸಣ್ಣ ಬಡ ರೈತರು ಯಾವ ರೀತಿಯಲ್ಲಿ ಕಷ್ಟಕ್ಕೊಳಗಾಗಿದ್ದಾರೆ ಎಂಬುದನ್ನು ತಾವುಗಳು ಚಿಂತಿಸಿಲ್ಲ. ಒಬ್ಬ ಬಡವ ತನ್ನ ಮೂರು ಗುಂಟೆ ಜಾಗದಲ್ಲಿ ತನ್ನ ಪಾಡಿಗೆ ದುಡಿದು ಜೀವನ ಮಾಡುತ್ತಿದ್ದ. ಅಯನೂರು ಸಹಕಾರಿ ಸಂಘದಿಂದ ಪಡೆದ ಮುನ್ನೂರು ರೂಪಾಯಿಗಳಿಗಾಗಿ, ಆ ಸಾಲವನ್ನು ಹಿಂದಿರುಗಿಸಿಲ್ಲ ಎಂಬ ಕಾರಣಕ್ಕಾಗಿ ಅವನ ಮನೆ ಜಫ್ತಿ ಮಾಡಿ, ಅವನು ತನ್ನ ಬದುಕಿಗಾಗಿ ಇಟ್ಟುಕೊಂಡಿರುವ ಎರಡು ಚೀಲ ಜೋಳ. ಒಂದು ಚೀಲ ಅಕ್ಕಿಯನ್ನು ಜಫ್ತಿ ಮಾಡಿ ತೆಗೆದುಕೊಂಡು ಹೋಗಿದ್ದಾರೆ. ಈ ವಿಚಾರದಲ್ಲಿ ಮಾತನಾಡುವಾಗ ಸನ್ಮಾನ್ಯ ಹಿರಿಯ ಸದಸ್ಯರಾದ ಬಸವಲಿಂಗಪ್ಪನವರು ತುಂಬಾ ನೊಂದು ಬಹಳ ಕಳಕಳಿಯಿಂದ ಹೇಳಿದರು. ನಾನೂ ಕೂಡ ಅಷ್ಟೇ ವೇದನೆಯಿಂದ ಈ ವಿಷಯವನ್ನು ಹೇಳುತ್ತಿದ್ದೇನೆ. ನಿಮ್ಮ ಆಡಳಿತದಲ್ಲಿ ರೈತ ಸಂಪೂರ್ಣವಾಗಿ ತಾತ್ಸಾರಕ್ಕೆ ಒಳಗಾಗಿದ್ದಾನೆ. ಅವನ ಬಗೆ ನಿಮ್ಮ ಚಿಂತನೆ ಇಲ್ಲವಾಗಿದೆ. ಅವನನ್ನು ಕೇಳುವವರಿಲ್ಲದಾಗಿದ್ದಾರೆ. ರೈತರ ಬಗ್ಗೆ ನಿಮ್ಮ ಕಾರ್ಯಶೀಲತೆ ಇಲ್ಲವಾಗಿದೆ.

ಇನ್ನು ಪೋಲೀಸ್ ಖಾತೆಯ ಬಗ್ಗೆ, ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆಯ ಬಗ್ಗೆ ಹೇಳುವ ಕಾಲದಲ್ಲಿ ಪೋಲೀಸರ ಬಗ್ಗೆ ಅಷ್ಟು ದೂರುಗಳು ಕೇಳಿಬರುತ್ತಿಲ್ಲ ಎಂದು ಹೇಳಿದ್ದೀರಿ, ಮಾನ್ಯ ಗೃಹ ಸಚಿವರು ಇಲ್ಲಿಯೇ ಇದ್ದಾರೆ. ಪಾವಗಡದಲ್ಲಿ, ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ತುಮಕೂರಿನಲ್ಲಿ ಇಲ್ಲೆಲ್ಲಾ ಏನು ನಡೆಯಿತು ಸ್ವಾಮಿ ? ಪಕ್ಷದ ಮಾನ್ಯ ಸದಸ್ಯರುಗಳು ಈ ಭಾಷಣದ ಮೇಲೆ ಸಾಕಷ್ಟು ಮಾತನಾಡಿದ್ದಾರೆ ನಮ್ಮ ಗೃಹಸಚಿವರು ಜಡಭರತ ಮುನಿ ಇದ್ದ ಹಾಗೆ. ಬಹಳ ಸಮಾಧಾನ ಸ್ವಭಾವದವರು. ಯಾವುದನ್ನೂ ಕಟ್ಟುನಿಟ್ಟಾಗಿ ಮಾಡುವಂತಹ ಗಂಭೀರವಾಗಿ ಚಾಲನೆಗೆ ಕೊಡುವಂತಹ ಸ್ವಭಾವ ಅವರದ್ದು ಅಲ್ಲ, ಯಾವ ವಿಚಾರಗಳನ್ನು ಕೇಳಿಕೊಂಡೂ ಕೂಡ ಸುಮ್ಮನೇ ಇರುತ್ತಾರೆ. ಕ್ರಿಯೇ ಮತ್ತು ಪ್ರತಿಕ್ರಿಯೆಗಳು ಅವರಲ್ಲಿ ಇಲ್ಲ. ಸುಮ್ಮನೇ ಇರುತ್ತಾರೆ. ರಾಜ್ಯದ ಯಾವ ಮೂಲೆಯಲ್ಲಿ ಏನಾದರೂ ನಡೆದುಕೊಂಡು ಹೋಗುತ್ತಿರಲಿ, ಯಾರು ಏನೇ ಅಪಾದನೆಗಳನ್ನು ಮಾಡಲಿ, ಅದಕ್ಕೆ ಅವರು ಇಲ್ಲಿ ಅವರ ಇಲಾಖಾ ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿಯನ್ನು

ಪ್ರಾಮಾಣಿಕವಾಗಿ ಸದನಕ್ಕೆ ಓದಿ ಒಪ್ಪಿಸುತ್ತಾರೆ. ಈ ಕೆಲಸವನ್ನು ತುಂಬಾ ಚೆನ್ನಾಗಿ ಮಾಡುತ್ತಾರೆ. ಇದನ್ನು ಬಿಟ್ಟರೆ ಬೇರೆ ಕಟ್ಟುನಿಟ್ಟಿನ ಕೆಲಸವನ್ನು ಮಾಡುವುದಿಲ್ಲ. ತಮ್ಮ ಜವಾಬ್ದಾರಿಯನ್ನು ಅರಿತು ತಮಗೆ ಏನು ಭಾವನೆಗಳು ಜನರ ಅಪಾದನೆಗಳ ಬಗ್ಗೆ ಬಾದಿದೆ, ಅದನ್ನು ಇಲ್ಲಿ ಹೇಳುವ ಧೈರ್ಯವನ್ನು ಅವರು ಮಾಡುವುದಿಲ್ಲ, ತಮ್ಮ ಅನಿಸಿಕೆಗಳನ್ನು ಕಾರ್ಯಗತ ಮಾಡುವ ಮನಸ್ಸು, ದೃಡ ನಿರ್ಧಾರ ವನ್ನು ಮಾಡುವುದಿಲ್ಲ. ಬಹುಶಃ ಅವರು ಒಂದು ವೇಳೆ ದಿಟ್ಟನಿಲುವಿನಿಂದ ತಮ್ಮ ಕೆಲಸವನ್ನು ಮಾಡಿದ್ದರೆ, ಖಂಡಿತಾ ಈ ವಾಕ್ಯಗಳು ಅಂದರೆ......ದೂರುಗಳು ಕೇಳಬರುತ್ತಿಲ್ಲ ಎಂಬುದು ಪ್ರಿಂಟ್ ಆಗುತ್ತಿತ್ತೊ ಇಲ್ಲವೋ ?

ಇನ್ನು ಮಂಡಲ–ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತು ಚುನಾವಣೆಗಳಲ್ಲಿ ಸುಮಾರು ಶೇಕಡಾ ೨೦ ರಷ್ಟು ಮಹಿಳೆಯರಿಗಾಗಿ ಮೀಸಲಾತಿ ಇಟ್ಟಿದ್ದೀರಿ. ಇದು ಒಳ್ಳೆಯ ಕೆಲಸ. ಒಪ್ಪತಕ್ಕಂಥ ವಿಚಾರವೂ ಕೂಡ. ನಮ್ಮ ಜನಸಂಖ್ಯೆಯಲ್ಲಿ ಅರ್ಧದಷ್ಟು ಸಂಖ್ಯೆಯಲ್ಲಿ ಸ್ತ್ರೀಯರು ಇದ್ದಾರೆ ಎನ್ನುವ ದೃಷ್ಟಿಯಿಂದ ಇದನ್ನು ಇಟ್ಟಿರಬಹುದು ಎಂದು ನನಗನ್ನಿಸುತ್ತದೆ. ಅದರೆ ಬಜೆಟ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಮಹಿಳೆಯರ ಕಲ್ಯಾಣದ ಬಗ್ಗೆ ಏನನ್ನೂ ಹೇಳಿಲ್ಲ. ಹಳ್ಳಿಗಳಲ್ಲಿ ಬದುಕುತ್ತಿರುವಂತಹ ಮಹಿಳೆಯರ ಬಗ್ಗೆ, ಇವೊತ್ತಿನ ಪರಿಸ್ಥಿತಿಯಲ್ಲಿ ಮಹಿಳೆಯರಿಗೆ, ಅವರ ಕಲ್ಯಾಣ ಕಾರ್ಯ ಕ್ರಮಗಳ ಬಗ್ಗೆ ಯಾವುದನ್ನೂ ಕೂಡ ನಮೂದಿಸಿಲ್ಲ. ಅವರ ಆರ್ಥಿಕ ಉನ್ನತಿಯ ಬಗ್ಗೆ ಕೂಡ ಚಕಾರವನ್ನು ಎತ್ತಿಲ್ಲ. ಆ ಬಗ್ಗೆ ಯಾವುದೇ ಯೋಜನೆಗಳನ್ನು ತಮ್ಮ ಬಜೆಟ್ ಭಾಷಣದಲ್ಲಿ ಹಾಕಿಕೊಂಡಿಲ್ಲ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದ ಹಾಗೆ ಮಹಿಳೆಯರಿಗಾಗಿ ಶೌಚಾಲಯಗಳನ್ನು ನಿರ್ಮಿಸುವ ಒಂದು ಕಾರ್ಯಕ್ರಮವನ್ನು ಬಿಟ್ಟರೆ, ಬೇರೆ ಯಾವ ಕಾರ್ಯಕ್ರಮಗಳನ್ನೂ ಕೂಡಾ ಶೇಕಡಾ ೨೦ರಷ್ಟು ಮೀಸಲಾತಿ ಇಟ್ಟಿರುವ ಮಹಿಳೆಯರಿಗಾಗಿ, ಅವರ ಸಂಖ್ಯೆಗನುಗುಣವಾಗಿ ಹಾಕಿಕೊಂಡಿಲ್ಲ.

ಈಗ ನಾನು ಏತಕ್ಕಾಗಿ ಈ ಮಾತುಗಳನ್ನು ಹೇಳುತ್ತಿದ್ದೇನೆ ಅಂದರೆ, ರಾಜಕಾರಣಿಗಳಿಗೆ ಸಮಸ್ಯೆಗಳೇ ಆಹಾರ ಎನ್ನುವಂತೆ ಆ ರೀತಿಯಲ್ಲಿ ಈ ಜನತಾ ಸರಕಾರ ಸಮಸ್ಯೆಗಳನ್ನು ಹುಟ್ಟು ಹಾಕುತ್ತಾ ಇದೆ. ಬಜೆಟ್ ಭಾಷಣದಲ್ಲಿ ಹಲವಾರು ಸುಳ್ಳು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅವುಗಳು ಸತ್ಯಕ್ಕೆ ದೂರವಾದವುಗಳು ಆಗಿವೆ. ಈ ಆಯವ್ಯಯ ಅಂದಾಜು ಜನರ ಮೂಗಿಗೆ ತುಪ್ಪ ಒರಿಸ ತಕ್ಕಂತಹ ಒಂದು ಕೆಲಸವನ್ನು ಮಾತ್ರ ಮಾಡತಕ್ಕಂಥಾದ್ದು ಆಗಿದೆ ಎಂದು ಹೇಳುವುದಕ್ಕೆ ಇಚ್ಚಿ ಪಡುತ್ತೇನೆ. ಇವರ ಗ್ರಾಮಸ್ವರಾಜ್ಯ ಕಲ್ಪನೆ ಹೇಗೆ ಇದೆ ಅಂದರೆ, ಇವರದ್ದೇ ಆದ ರೀತಿಯಲ್ಲಿ ಇದೆ. ರಾಮರಾಜ್ಯ ಕಲ್ಪನೆ ಬೇರೆ ಇದೆ. ಅಲ್ಲಿ ಕೃಷಿ, ಕೈಗಾರಿಕೆ ವಿದ್ಯುಚ್ಛಕ್ತಿ, ಸಾಂಸ್ಕೃತಿಕ ಬದುಕು, ಇವುಗಳೆಲ್ಲಾ ಬೇರೆ ಬೇರೆ ರೀತಿಯಲ್ಲಿದ್ದರೆ. ಇವರ ಗ್ರಾಮ ಸ್ವರಾಜ್ಯದ ಕಲ್ಪನೆ ಹೇಗೆ ಎಂದರೆ ಕೃಷ್ಣಪ್ಪ ನವರ ವೈದ್ಯರಿಲ್ಲದ ಆಸ್ಪತ್ರೆಗಳು, ಬಸವಣ್ಣಪ್ಪನವರ ನ್ಯಾಯ ಬೆಲೆ ಅಂಗಡಿಗಳಲ್ಲಿ ಸಿಗುವ ಕಲಬೆರಕೆ ಆಹಾರ, ಜಾಲಪ್ಪನವರ ರೈತರ ಮನೆಬಾಗಿಲಿಗೆ ಬೆಳಿಗ್ಗೇ ಹೋಗಿ ಅವರನ್ನು ತಟ್ಟಿ ಎಬ್ಬಿಸಿ ಜಪ್ತಿ ಮಾಡುವ ಸರ್ಕಾರಿ ಅಧಿಕಾರಿಗಳು, ಉಪಾಧ್ಯಾಯರೇ ಇಲ್ಲದ ಮಂಜುನಾಥ್ ಅವರ ಶಾಲೆಗಳು ಇನಿಷ್ಟು ಇವರ ಗ್ರಾಮಸ್ಥರಾಜ್ಯದ ಕಲ್ಪನೆ, ರಾಮರಾಜ್ಯದ ಕಲ್ಪನೆ. ಒಂದು ಬಜೆಟ್ ರಾಜ್ಯದ ಜನ ಜೀವನದ ಮೇಲೆ ತನ್ನದೇ ಆದ ಮುದ್ರೆಯನ್ನು ಒತ್ತುತ್ತದೆ, ಬಜೆಟ್ ಯಾವ ರೀತಿ ಜನ ಜೀವನದ ಮೇಲೆ ಪ್ರಭಾವ ಬೀರುತ್ತದೆ, ಎಂಬುದನ್ನು ನೋಡಬೇಕು. ಇವರು ನೀಡಿರುವ ಭರವಸೆಗಳು ಬಜೆಟ್‌ನಲ್ಲಿ ಅರ್ಥಿಕ ಚಿಂತನೆಯಲ್ಲಿ, ಒಂದು ಸಮಾಜದ ವ್ಯಕ್ತಿಯ, ಸಮುದಾಯದ ಬದುಕಿನ ಮೇಲೆ ಅತ್ಯಂತ ದುಷ್ಪರಿಣಾಮವನ್ನು ಬೀರುತ್ತಾ ಮುಂದೆ ಅದರ ವ್ಯಾಪಕತೆ ಸುಮಾರು ೨೫ ವರ್ಷಗಳಷ್ಟು ಕಾಲ ಆಗುತ್ತಾ ಹೋಗುತ್ತದೆ. ಇದನ್ನು ಸಾಮಾಜಿಕ ಜೀವನದಲ್ಲಿ ನೋಡಬಹುದು. ಆರ್ಥಿಕ ಸ್ಥಿತಿಗತಿಗಳ ಪರಿಕಲ್ಪನೆ ಹೇಗಿರಬೇಕು ಎಂದರೆ ಜನತೆಯ ದುಃಖದುಮ್ಮಾನಗಳನ್ನು ಅದು ಮೆಟ್ಟಿ ನಿಲ್ಲುವ ಸ್ಥಿತಿಯಲ್ಲಿರಬೇಕು. ಹಾಗೆ ಮಾಡದೇಹೋದರೆ ನೆಮ್ಮದಿಯ ಬದುಕಿರಲಾರದು. ಹೆಂಗಸರು ನಿರ್ಭಯವಾಗಿರುವಂತಿರಬೇಕು. ಮಾನ್ಯ ರಾಚಯ್ಯನವರು ತಮ್ಮ ಇಲಾಖೆಯನ್ನು ಸರಿಪಡಿಸಿಕೊಳ್ಳುವಿರಾದರೆ ಖಂಡಿತ ನೆಮ್ಮದಿಯ ಬದುಕು ಸಾಧ್ಯವಿದೆ. ಮುಖ್ಯಮಂತ್ರಿಗಳಲ್ಲಿ ನನ್ನ ಕಳಕಳಿಯ ಮನವಿ ಏನೆಂದರೆ ದಯವಿಟ್ಟು ಸಹಕಾರ ಸಂಘಗಳಲ್ಲಿ ಸಾರಾಯಿ ವ್ಯವಹಾರವನ್ನು ಮಾಡಿಸಬೇಡಿ. ಏಕೆಂದರೆ ರೈತ ಈಗ ತೆಗೆದುಕೊಂಡಿರುವ ದುಡ್ಡನ್ನೇ ಕಟ್ಟದೆ ಜಪ್ತಿ ಆಗುತ್ತಿದ್ದಾನೆ, ಇನ್ನು ಸಹಕಾರ ಸಂಘಗಳಲ್ಲಿ ಸಾರಾಯಿ ಬಂದರೆ ಕೊಟ್ಟ ದುಡ್ಡನ್ನು ಮನೆಗೂ ತೆಗೆದುಕೊಂಡು ಹೋಗದೆ ಕುಡಿದು ಅಲ್ಲಿಯೇ ಮಲಗಿ

ಬಿಡುತ್ತಾನೆ. ಆದ್ದರಿಂದ ಇದನ್ನು ಕೈಬಿಡಿ, ಜಫ್ತಿ ಮಾಡಿಸುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತಾ ನನಗೆ ಅವಕಾಶ ಕೊಟ್ಟ ತಮ್ಮ ಕೃಪೆಗೆ ಅನಂತ ಪ್ರಣಾಮಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೬.೩೦ ಪಿ.ಎಂ.

ಅಧ್ಯಕ್ಷರು.—ಇಲ್ಲಿಗೆ ಆಯವ್ಯಯದ ಮೇಲಿನ ಭಾಷಣಗಳು ಮುಗಿದುವು. ನಾಳೆ ಬೆಳಿಗ್ಗೆ ೧೦ ಗಂಟೆಗೆ ಮುಖ್ಯಮಂತ್ರಿಗಳಿಂದ ಉತ್ತರ. ಈಗ ಅರ್ಧ ಗಂಟೆ ಕಾಲದ ಚರ್ಚೆ.

ಅರ್ಧ ಘಂಟೆ ಕಾಲಾವಧಿಯ ಚರ್ಚೆ

ಗಂಗಾ ಕಲ್ಯಾಣ ಯೋಜನೆ ಬಗ್ಗೆ

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಾನು ೨–೨–೮೭ ರಂದು ಹಾಕಿದ್ದ ೨೯೭ ನೇ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಲೋಕೋಪಯೋಗಿ ಸಚಿವರಿಗೆ ಪ್ರಶ್ನೆ ಕೇಳಿದಾಗ ಗಂಗಾಕಲ್ಯಾಣ ಯೋಜನೆಯ ಬಗ್ಗೆ ೨೮೬ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ, ಇದಕ್ಕೆ ೨೫೦ ಲಕ್ಷ ರೂ.ಗಳು ಅಂದಾಜಾಗಿದೆ ಇದರಲ್ಲಿ ೧೪೮.೮೫ ಲಕ್ಷ ರೂ. ಗಳು ಖರ್ಚಾಗಿದೆ ಇದರ ಅಂದಾಜು ಕೆಲಸ ಪೂರ್ತಿ ಆದರೆ ೧,೦೭೧ ಹೆಕ್ಟೇರ್ಸ್ ನೀರಾವರಿಯಾಗುತ್ತದೆ ಎಂದು ಉತ್ತರ ಕೊಟ್ಟಿದ್ದರು. ಇದರ ಬಗ್ಗೆ ಏಕೆ ಅರ್ಧ ಗಂಟೆ ಚರ್ಚೆಯಾಗಬೇಕು ಎಂದರೆ ೨೮೬ ಕೆಲಸಗಳು ಎಲ್ಲೆಲ್ಲಿ ಆಗಿವೆ ಎಂಬ ವಿವರ ನಮಗೆ ಸಿಕ್ಕಿಲ್ಲ, ಅಷ್ಟು ಕೆಲಸಗಳಲ್ಲಿ ಯಾವುವು ಪೂರ್ಣವಾಗಿವೆ, ಅಪೂರ್ಣವಾಗಿರುವುವು ಎಷ್ಟು ಮತ್ತು ೨೬೦ ಲಕ್ಷ ರೂ.ಗಳ ಅಂದಾಜಿನಲ್ಲಿ ೧.೫ ಕೋಟಿ ಮಾತ್ರ ಖರ್ಚಾಗಿದೆ ಎಂದು ಹೇಳಿದ್ದಾರೆ,

ನಾನು ಅವರನ್ನು ಇದರ ಬಗ್ಗೆ ಎಷ್ಟು ಕೆಲಸ ಪ್ರಾರಂಭವಾಗಿದೆ, ಅದರಲ್ಲಿ ಎಷ್ಟು ಪೂರ್ತಿಯಾಗಿದೆ ಎಷ್ಟು ಅಪೂರ್ಣವಾಗಿದೆ ಹಾಗೂ ಎಷ್ಟು ಯಶಸ್ವಿಯಾಗಿದೆ ಎಂಬ ವಿವರಣೆ ಕೇಳ ಬಯಸುತ್ತೇನೆ ನನಗೆ ಇರುವ ಶಂಕೆ ಏನೆಂದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಇದಕ್ಕೆ ಸಹಕಾರ ಕೊಡುತ್ತಿಲ್ಲ, ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಸುಮಾರು ಒಂದು ವರ್ಷದ ಹಿಂದೆ ಪ್ರಾರಂಭವಾಗಿರತಕ್ಕಂತಹ ಗಂಗಾ ಕಲ್ಯಾಣ ಯೋಜನೆಗೆ ಕೆ. ಇ. ಬಿ. ನವರು ಇವತ್ತಿನವರೆಗೂ ಕೂಡ ಪವರ್ ಕೊಟ್ಟಿಲ್ಲ ಇದರಿಂದಾಗಿ ಅದು ಇನ್ನೂ ಪ್ರಾರಂಭ ಕೂಡ ಆಗಿಲ್ಲ ಇಂತಹ ಕೆಲಸಗಳು ಇವತ್ತು ನಡೆಯುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ನಿಮ್ಮ ಪತ್ತೋಟಿ ಅವರ ಮೇಲೆ ಏನಾದರೂ ಇದೆಯೇ ಎಂದು ಕೇಳ ಬಯಸುತ್ತೇನೆ. ಇನ್ನು ಅಣೆಕಟ್ಟೆಗಳ ಬಗ್ಗೆ ಹೇಳುವುದಾದರೆ, ಎಲ್ಲೆಲ್ಲಿ ಅಣೆಕಟ್ಟುಗಳನ್ನು ಕಟ್ಟಿದ್ದೀರಿ ಅದರ ಕೆಳಗಡೆ ಇರತಕ್ಕಂತಹ ಪ್ರದೇಶಗಳಿಗೆ ಮಾತ್ರ ಪ್ರಯೋಜನವಾಗುತ್ತದೆ, ಯಾರ್ಯಾರು ಅಲ್ಲಿ ಜಮೀನುಗಳನ್ನು ಇಟ್ಟು ಕೊಂಡಿದ್ದಾರೆ ಅಂತಹವರಿಗೆ ಪ್ರಯೋಜನವೇ ಹೊರತಾಗಿ ಯಾರ್ಯಾರು ಖುಷ್ಕಿ ಜಮೀನುಗಳನ್ನು ಇಟ್ಟು ಕೊಂಡಿರುತ್ತಾರೆ ಅವರಿಗೆ ಏನೂ ಪ್ರಯೋಜನವಾಗಿಲ್ಲ. ಅದಕ್ಕೆ ಎಷ್ಟು ಹಣವನ್ನು ಖರ್ಚು ಮಾಡುತ್ತೀರೋ ಅಷ್ಟೇ ಹಣವನ್ನು ಇದಕ್ಕೂ ಕೂಡ ಖರ್ಚು ಮಾಡಬೇಕೆಂದು ಹಿಂದೆ ಹೇಳಿದ್ದೆ. ಅದನ್ನು ಈಗಲಾದರೂ ಮಾಡುತ್ತೀರಾ ? ನಾನು ತಮಗೆ ಹೇಳುವುದೇನೆಂದರೆ ಗಂಗಾ ಕಲ್ಯಾಣ ಯೋಜನೆ ಬಹಳ ಒಳ್ಳೆಯ ಇದು ಯಶಸ್ವಿಯಾಗಲಿ ಆದರೆ ಈ ಯೋಜನೆಯನ್ನು ಎಲ್ಲಿ ಯಾರು ಬಡವರಿದ್ದಾರೆ ಯಾರು, ನಿರ್ಗತಿಕರಿದ್ದಾರೆ ಅಲ್ಲಿ ಜಾರಿಗೆ ತೆಗೆದುಕೊಂಡು ಬನ್ನಿ ಎರಡೂವರೆ ಕೋಟಿ ರೂಪಾಯಿಯನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ ಇದಕ್ಕೆ ಇನ್ನೂ ಹೆಚ್ಚು ಗಮನ ಕೊಟ್ಟು ಹೆಚ್ಚು ಕುಟುಂಬಗಳಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಹಾಗೂ ಇದಕ್ಕೆಲ್ಲಾ ಮುಂದಿನ ಕಾರ್ಯ ಕ್ರಮ ಏನು ಇಟ್ಟು ಕೊಂಡಿದ್ದೀರಿ ಅನ್ನುವುದರ ಬಗ್ಗೆಯೂ ಕೂಡ ವಿವರಣೆ ಕೇಳ ಬೇಕೆಂದು ಈ ಒಂದು ಮೋಷನ್ ಕಳಿಸಿದ್ದೆ ಇದಕ್ಕೆ ಮಾನ್ಯ ವೆಂಕಟರಾಮಯ್ಯನವರೂ ಕೂಡ ಸಹಿ ಮಾಡಿದ್ದಾರೆ ಆದ್ದರಿಂದ ಅವರಿಗೂ ಮಾತನಾಡಲು ಅವಕಾಶ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್ ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈ ಗಂಗಾ ಕಲ್ಯಾಣ ಯೋಜನೆ ಏನಿದೆ ಇದು ಬಹಳ ಮುಖ್ಯವಾದುದು. ಪರಿಶಿಷ್ಟ ವರ್ಗದ ಜನರಿಗೆ ಜಮೀನಿದ್ದರೂ ಕೂಡ ಆ ಜಮೀನಿನಲ್ಲಿ ಉಳುವುದಕ್ಕಾಗುವುದಿಲ್ಲ, ಒಂದು ವೇಳೆ ಉತ್ತರೂ ಕೂಡಬೆಳೆ ಕೈಗೆ ಸಿಗುವುದಿಲ್ಲ ಈ ರೀತಿಯಾಗಿ ಬೆಳೆ